ಅಧ್ಯಾತ್ಮಗ್ರಂಥಾವಳಿ

# ಸಚ್ಚಿದಾನಂದಮನನ

ಬರೆದವರು :

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಸಂಗ್ರಾಹಕರು :

ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ : ೨೨೦

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೨೦೦೨
ದೂರವಾಣಿ : ೦೮೧೭-೫೭೩೮೨೦

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ೧೯೪೯ನೇ ಅಕ್ಟೋಬರ್ ಮಾಹೆಯಿಂದ ೧೯೫೫ನೆಯ ಆಗಸ್ಟ್ ಮಾಹೆಯವರೆಗಿನ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಬರೆದು ಅನುಗ್ರಹಿಸಿರುವ **ಸಚ್ಚಿದಾನಂದ ಮನನ** ಎಂಬ ೫೮ ಲೇಖನಗಳನ್ನು ಒಟ್ಟುಗೂಡಿಸಿ ಈ ಗ್ರಂಥದಲ್ಲಿ ಅಳವಡಿಸಿ ಮುಮುಕ್ಷುಗಳಾದ ವಾಚಕರಿಗೆ ಅರ್ಪಿಸಲಾಗಿದೆ. ಇದರ ಪಠನದಿಂದ ವಾಚಕರಿಗೆ ಅಧ್ಯಾತ್ಮ ಚಿಂತನೆಯ ಫಲವು ದೊರಕುವದಲ್ಲದೆ ಅಧ್ಯಾತ್ಮವಿದ್ಯೆಯಲ್ಲಿ ಆಸಕ್ತಿಯು ಪ್ರಬಲವಾಗಿ ಪರಮಪುರುಷಾರ್ಥದ ಹಾದಿಯು ಸುಗಮವಾಗಲಿದೆ. ಮಾನವ ಜನ್ಮದಲ್ಲಿ ಮಾತ್ರವೇ ಸಾಧಿಸಬೇಕಾಗಿರುವ **ಮೋಕ್ಷವೆಂಬ ಪರಮಪುರುಷಾರ್ಥಕ್ಕೆ** ಈ ಸೂಕ್ತಿಗಳು ರಾಜಮಾರ್ಗಗಳಾಗಿದ್ದು ಶುಷ್ಕತರ್ಕಗಳು ಹಾಗೂ ವಾದ – ವಿವಾದಗಳ ಪರಿಶ್ರಮವಿಲ್ಲದೆ ಸಾಧಕರನ್ನು ಮುಕ್ತಿಗೆ ಕೊಂಡೊಯ್ದು ಶಾಂತಿ ಸಮಾಧಾನಗಳನ್ನು ನೀಡಿ ಕೃತಾರ್ಥರನ್ನಾಗಿ ಮಾಡುತ್ತವೆ.

ತಿಳಿಗನ್ನಡದಲ್ಲಿರುವ ಈ ಉಪದೇಶಗಳು ಶಾಸ್ತ್ರ–ಸಂಪ್ರದಾಯ–ಅಧಿಕಾರಸಂಪತ್ತುಗಳ ತೊಡಕುಗಳಿಲ್ಲದೆ ಕೇವಲ ಅಧ್ಯಾತ್ಮಸಾಹಿತ್ಯಾಸಕ್ತಿ, ಓದು ಬರಹಗಳ ಪರಿಚಯವುಳ್ಳ ಯಾವ ಸಾಧಕನಾದರೂ ಹಾರ್ದಿಕವಾಗಿ ಸ್ವೀಕರಿಸಿ ಜೀವನದಲ್ಲಿ ಅಳವಡಿಸಿಕೊಂಡು ಜೀವನ್ಮುಕ್ತನಾಗಿ ಕೃತಾರ್ಥನಾಗಲು ಸಹಾಯಕವಾಗಿವೆ. ಇಲ್ಲಿರುವ ವಿಚಾರ – ಚಿಂತನೆಗಳೆಲ್ಲವೂ ಮಾನವ ಮಾತ್ರಕ್ಕೇ ಅನ್ವಯಿಸುವಂತಿದ್ದು, ಜಾತಿ–ಮತ–ಕುಲಧರ್ಮಗಳ ಸಂಪರ್ಕದಿಂದ ದೂರವಾಗಿದ್ದು ನೀತಿ, ನಡೆ–ನುಡಿಗಳು, ಅಧಿಕಾರ, ವಿದ್ಯಾಸಂಪತ್ತು–ಗಳನ್ನು ಸಾಧಕರಿಗೆ ಒದಗಿಸಿಕೊಟ್ಟು ಮಾನವನ ಜನ್ಮಸಾರ್ಥಕ್ಯವನ್ನು ಉಂಟುಮಾಡುವವುಗಳಾಗಿರುತ್ತವೆ. ಇನ್ನು ಬ್ರಹ್ಮಚರ್ಯಾದಿ ಯಾವ ಆಶ್ರಮಧರ್ಮದಲ್ಲಿಯೇ ಸಾಧಕನು ಇರಲಿ, ಅಥವಾ ವರ್ಣಾಶ್ರಮಧರ್ಮಗಳಲ್ಲಿ ಶ್ರದ್ಧೆಯಿಲ್ಲದವನೇ ಆಗಿರಲಿ, ಸಾಧಕನು ತಾನು ಸ್ವತಂತ್ರವಾಗಿಯೇ ತನ್ನ ಅಪೇಕ್ಷೆಯಂತೆ ಪುರುಷಾರ್ಥಕ್ಕಾಗಿ ಪ್ರಯತ್ನಮಾಡುವವನಾಗಿದ್ದಲ್ಲಿ ಅಂಥವನಿಗೂ ಈ ಉಪದೇಶಗಳು ಮಾರ್ಗದರ್ಶನಮಾಡಿ ಕೃತಾರ್ಥನನ್ನಾಗಿ ಮಾಡುತ್ತವೆ. ಹೀಗೆ ಸಾರ್ವತ್ರಿಕವೂ ಅನುಭವಗಮ್ಯವೂ ಆದ ಸಮ್ಯಗ್‌ಜ್ಞಾನವನ್ನು ಈ ಮನನವು ಸಾಧಕನಿಗೆ ಗುರಿಯನ್ನು ಮುಟ್ಟಿಸುವ ಚೈತನ್ಯಶಾಲಿಯಾಗಿದ್ದು, ಅವನನ್ನು ಜೀವನ್ಮುಕ್ತನನ್ನಾಗಿ ಮಾಡುವದರಲ್ಲಿ ಸಂಶಯವಿಲ್ಲ.

ಮಾನವನಲ್ಲಿ ಜಾತಿ, ಮತ, ಲಿಂಗ, ವಿದ್ಯೆ, ಧನ, ಸಂಪತ್ತು, ಅಧಿಕಾರ ಇತ್ಯಾದಿ ಭೇದಗಳಿದ್ದರೂ ಅವು ವ್ಯವಹಾರದಲ್ಲಿ ಮಾತ್ರ ಚಲಾವಣೆಯಲ್ಲಿರುತ್ತವೆ. ಆದರೆ ಆರೋಗ್ಯ, ಶರೀರ ಧರ್ಮಗಳು, ಸುಖ–ದುಃಖಗಳು, ಜ್ಞಾನಾಜ್ಞಾನಗಳು ಸಾರ್ವತ್ರಿಕಧರ್ಮಗಳಾಗಿದ್ದು ಸರ್ವರಿಗೂ ಅನ್ವಯಿಸುತ್ತವೆ ; ಹಾಗೆಯೇ ಅಧ್ಯಾತ್ಮಚಿಂತನೆಯೂ ಪ್ರತಿಯೊಬ್ಬನ ಶ್ರೇಯಸ್ಸಿಗೂ ಕಾರಣವಾಗಿರುತ್ತದೆ. ಇದರ ಅವಲಂಬನೆಯಿಲ್ಲದೆ ಮಾನವನು ತನ್ನ ಜೀವನದಲ್ಲಿ ತಾನು ಯಾರು ? ತನ್ನ ನಿಜಸ್ವರೂಪವೇನು ? ನಾನು ಬಂದದ್ದು ಎಲ್ಲಿಂದ ? ತಾನು ಕಡೆಯಲ್ಲಿ ಹೋಗುವದೆಲ್ಲಿಗೆ ? ಜೀವಿತಕಾಲಕ್ಕೆ ತಾನು ಮಾಡಬೇಕಾಗಿರುವ ಮುಖ್ಯ ಕರ್ತವ್ಯವು ಯಾವುದು ? ಜನ್ಮಸಾರ್ಥಕ್ಯವು ಏತರಿಂದ ದೊರಕುತ್ತದೆ ? – ಎಂಬೀ ಪ್ರಶ್ನೆಗಳಿಗೆ ಅಧ್ಯಾತ್ಮವಿದ್ಯೆಯೊಂದೇ ಸರಿಯಾದ ಉತ್ತರವನ್ನು ಕೊಡಬಲ್ಲದು. ಆದ್ದರಿಂದಲೇ ಇದನ್ನು ರಾಜವಿದ್ಯೆ – ರಾಜಗುಹ್ಯ– ವೆಂದು ಗೀತೆಯಲ್ಲಿ ಭಗವಂತನು ಹೊಗಳಿರುತ್ತಾನೆ.

ಇಂಥ ಅಧ್ಯಾತ್ಮವಿದ್ಯೆಯನ್ನು ಸರಳವಾಗಿ ಅನುಸಂಧಾನ ಮಾಡುವದಕ್ಕೆ ಅನುಕೂಲವಾಗುವಂತೆ ಪೂಜ್ಯ ಶ್ರೀಶ್ರೀಗಳವರು ೩೫೨ ಅಧ್ಯಾತ್ಮೋಪದೇಶ ಗಳುಳ್ಳ ಈ ಗ್ರಂಥವನ್ನು ರಚಿಸಿ ವಾಚಕರಿಗೆ ಉಣಬಡಿಸಿರುತ್ತಾರೆ. ನಾವೆಲ್ಲರೂ ಈ ಸಂದೇಶಗಳನ್ನು ಮತ್ತೆ ಮತ್ತೆ ಮನನಮಾಡಿ ಕೃತಾರ್ಥರಾಗೋಣ.

ಬೆಂಗಳೂರಿನಲ್ಲಿ ವಾಸವಾಗಿರುವ ನಿವೃತ್ತ ಇಂಜಿನಿಯರ್ ಟಿ.ಆರ್.ಚಂದ್ರಶೇಖರ್‌ರವರು ಈ ಗ್ರಂಥದ ಮುದ್ರಣವೆಚ್ಚವನ್ನು ಪೂರ್ತಿ ವಹಿಸಿಕೊಂಡು ಪ್ರಕಾಶನಗೊಳಿಸಲು ಸಹಾಯಮಾಡಿರುತ್ತಾರೆ. ಅವರಿಗೂ ಅವರ ಕುಟುಂಬ ವರ್ಗಕ್ಕೂ ಶ್ರೇಯೋಭಿವೃದ್ಧಿಗಳುಂಟಾಗಲೆಂದು ಸದ್ಗುರು ಗಳನ್ನು ಪ್ರಾರ್ಥಿಸುತ್ತಾ ಕಾರ್ಯಾಲಯವು ಕೃತಜ್ಞತಾ ಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ. ಎಂದಿನಂತೆ ವಾಚಕರು ಈ ಗ್ರಂಥವನ್ನು ಓದಿ ಕೃತಾರ್ಥರಾದಲ್ಲಿ ಕಾರ್ಯಾಲಯದ ಶ್ರಮ ಸಾರ್ಥಕ.

ತಾ|| ೬–೮–೨೦೦೨
ಚಿತ್ರಭಾನು ಸಂವತ್ಸರ,
ಆಷಾಢ ಬಹುಳ ತ್ರಯೋದಶಿ

ಪ್ರಕಾಶಕರು

|| ಓಮ್ ||

# ಸಚ್ಚಿದಾನಂದಮನನ

೧. ಇರುವದು ಒಂದು ; ಬಲ್ಲವರು ಅದನ್ನೇ ಬಗೆಬಗೆಯಾಗಿ ಕರೆಯುತ್ತಿರುವರು – ಎಂದು ವೇದವು ಸಾರುವದು. ಅರಿಯದವರು ಬಗೆಬಗೆಯಾಗಿ ಕರೆಯುತ್ತಿರುವದೂ ಅದನ್ನೇ. ಅಂತಃಕರಣ, ಬಹಿಃಕರಣಗಳು ವಿಷಯಗಳು – ಎಂದು ಮೂರುಭಾಗವಾಗಿ ಒಡೆದುಕೊಂಡು ತೋರುತ್ತಿರುವದೆಲ್ಲ ಅದೊಂದೇ. ಅದನ್ನೆಲ್ಲವನ್ನೂ ನೋಡುತ್ತಿರುವದೂ ತಾನೊಂದೇ. ಎಲ್ಲವೂ ಆ ಒಂದೇ ಒಂದು ಇರವು.

೨. ಇದೆಲ್ಲವೂ ಮೊದಲು ಸತ್ತೊಂದೇ, ತನಗೆರಡನೆಯದಿಲ್ಲದ್ದಾದ ಸತ್ತೊಂದೇ, ಬರಿಯ ಇರವೇ, ಆಗಿತ್ತು – ಎಂದು ಶ್ರುತಿಯು ಸಾರುತ್ತಿದೆ. ಮೊದಲೇ ಸತ್ತೊಂದೇ ಆಗಿತ್ತು ಎಂಬುದು ಮಾತ್ರವಲ್ಲ. ಈಗಲೂ ನಮಗೆ ಕಾಣುತ್ತಿರುವ ಈ ಎಲ್ಲವೂ ಸತ್ತೊಂದೇ ಆಗಿರುತ್ತದೆ, ತನಗೆರಡನೆಯದಿಲ್ಲದ ಸತ್ತೊಂದೇ ಆಗಿರುತ್ತದೆ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ – ಎಂದು ಮೂರು ಭಾಗವಾಗಿ ವಿಂಗಡಿಸಿಕೊಂಡು ಚಿತ್ರವಿಚಿತ್ರವಾಗಿ ಕಾಣುತ್ತಿರುವ ಈ ಪ್ರಪಂಚವೆಲ್ಲವೂ ಈಗಲೂ ತನಗೆರಡನೆಯದಿಲ್ಲದ ಸತ್ತೊಂದೇ ಆಗಿರುತ್ತದೆ. ಇದೇ ವೇದಾಂತಸಿದ್ಧಾಂತವು.

೩. ಮರವು ಬೀಜರೂಪವಾಗಿರುವ ಸ್ಥಿತಿಯಲ್ಲಿ ಇದು ಬುಡ, ಇದು ಕೊಂಬೆ, ಇದು ಚಿಗುರು, ಇದು ಎಲೆ, ಇದು ಹೂ, ಇದು ಹಣ್ಣು – ಎಂದು ವಿಂಗಡಿಸಿ ಕಾಣುತ್ತಿರುವದಿಲ್ಲ. ಆದರೇನು ? ಬೀಜವೆಂದರೆ ಈ ಬುಡ, ಕೊಂಬೆ, ಚಿಗುರು, ಎಲೆ, ಹೂ, ಹಣ್ಣು– ಎಲ್ಲದರ ಅವ್ಯಕ್ತಶಕ್ತಿಯೇ. ಬೀಜದಲ್ಲಿ ಇದೆಲ್ಲವೂ ಹುದುಗಿಕೊಂಡಿರುತ್ತದೆ ; ಬೀಜವೇ ಬುಡ, ಕೊಂಬೆ, ಚಿಗುರು – ಮುಂತಾದವುಗಳ ರೂಪವನ್ನು ಆನುತ್ತದೆ. ಬೀಜವನ್ನು ಒಡೆದರೆ, ಕುಟ್ಟಿದರೆ,ಪುಡಿಮಾಡಿ ಬೀಸಿದರೆ, ತೇಟಿದರೆ, ಕೇರಿದರೆ, ಒನೆದರೆ, ಅದರಲ್ಲಿ ಎಲ್ಲಿಯೂ ಮರದ ಆಕಾರಗಳಾಗಲಿ ಬುಡ, ಕೊಂಬೆ, ಚಿಗುರು – ಮುಂತಾದವುಗಳ ರೂಪವಾಗಲಿ ಯಾರಿಗೂ ಕಾಣಲು ಬರುವದಿಲ್ಲ. ಆದರೇನು ? ಬೀಜದಲ್ಲಿ ಅವು ಇದ್ದೇ ಇರುತ್ತವೆ ; ಬೀಜವೇ ಅವಾಗಿರುತ್ತವೆ. ಇಷ್ಟು ಸಣ್ಣಬೀಜವು ಇಷ್ಟು ವಿಸ್ತಾರವಾದ ವಿವಿಧವಾದ ಭಾಗಗಳುಳ್ಳ ಮಹಾವೃಕ್ಷವು ಹೇಗಾಯಿತೆಂದು

ಊಹಿಸಿ ಅರಿಯುವದಕ್ಕೆ ಆಗುವದಿಲ್ಲ. ಇದರಂತೆ ಆ ಒಂದು ಸತ್ತೇ ಈ ಚಿತ್ರವಿಚಿತ್ರ ದೇಶ, ಕಾಲ, ನಿಮಿತ್ತ, ಕ್ರಿಯಾ, ಫಲ – ಎಂಬ ವಿಭಾಗವುಳ್ಳ ಚೇತನಾಚೇತನಜಗತ್ತಾಗಿ ಹೇಗೆ ವಿಂಗಡಿಸಿಕೊಂಡಿತೋ ಹೇಳಲಳವಲ್ಲ.

೪. ಬೀಜವು ಸಾವಯವವಸ್ತು. ಅದರಲ್ಲಿ ಸಣ್ಣಸಣ್ಣ ಅವಯವಗಳು ಒಂದಕ್ಕೊಂದು ಕೂಡಿಕೊಂಡಿರುತ್ತವೆ. ಅದನ್ನು ನೆಲದಲ್ಲಿಟ್ಟರೆ ಭೂಮಿಯಲ್ಲಿರುವ ಪೋಷಕಸಾಮಗ್ರಿಯನ್ನು ಹೀರಿಕೊಳ್ಳುವ, ಅದನ್ನು ತನ್ನ ಅವಯವಗಳ ಸಣ್ಣಸಣ್ಣ ಸಂದುಗಳಲ್ಲಿ ನಿಲ್ಲಿಸಿಕೊಳ್ಳುವ, ಆ ಸಾಮಗ್ರಿಯಲ್ಲಿ ತನ್ನ ಅವಯವಗಳನ್ನು ಭಾವನೆಮಾಡಿಕೊಳ್ಳುವ, ತೇವದಿಂದ ಉಬ್ಬಿಕೊಳ್ಳುವ, ಒಡೆದುಕೊಳ್ಳುವ, ಒಳಗಿನಿಂದ ಬೆಳೆಯುವ, ಹೊರಕ್ಕೆ ಭಾಗಭಾಗವಾಗಿ ಎತ್ತೆತ್ತಲೂ ಚಾಚಿಕೊಳ್ಳುವ, ಸುತ್ತಮುತ್ತಲಿನ ವಾಯುಮಂಡಲದಿಂದ ಬೇಕಾದ ವಸ್ತುವನ್ನು ಎಳೆದುಕೊಳ್ಳುವ ತನ್ನಮೇಲೆ ಬಿದ್ದ ಬಿಸಿಲಿನ ತಾಪದಿಂದ ಹೊಸಹೊಸ ಪಾಕವಾಗುವ, ಮೇಲಕ್ಕೆ ಬೆಳೆಯುವ, ಶಕ್ತಿಯಿದೆ. ಆದ್ದರಿಂದ ಎರಡನೆಯ ವಸ್ತುಗಳ ನೆರವು ಬೀಜಕ್ಕೆ ಬೇಕಾದಷ್ಟು ಇದೆ. ತನ್ನಲ್ಲಿ ಮಾರ್ಪಡುವದಕ್ಕೆ ಬೇಕಾದಷ್ಟು ವೈಚಿತ್ರ್ಯವೂ ಹುದುಗಿಕೊಂಡಿದೆ. ಇದನ್ನೆಲ್ಲ ಮನದಂದರೆ ಆಗ ಬೀಜವು ಬುಡ, ಕೊಂಬೆ, ಚಿಗುರು – ಮುಂತಾದ ರೂಪದ ಮರವಾಗಿ ಪರಿಣಮಿಸುವದಕ್ಕೆ ಅವಕಾಶವಿದೆ ಎಂದು ಸಮಾಧಾನಪಟ್ಟುಕೊಳ್ಳಬಹುದು. ಆಗಲೂ ಬೀಜದಲ್ಲಾಗಲಿ ನೀರಿನಲ್ಲಾಗಲಿ ಗೊಬ್ಬರದಲ್ಲಾಗಲಿ ವಾಯುವಿನಲ್ಲಾಗಲಿ, ಬಿಸಿಲಿನಲ್ಲಾಗಲಿ ಇಲ್ಲದಿದ್ದ, ಹೊಸ ಶಬ್ದ, ಸ್ಪರ್ಶ, ರೂಪ, ರಸ, ಗಂಧ– ಇವುಗಳು ಹೇಗೆ ಎಲ್ಲಿಂದ ಬಂದು ಸೇರಿಕೊಂಡವೆಂಬುದು ಮನುಷ್ಯನ ಮನನಕ್ಕೆ ನಿಲುಕುವಹಾಗಿರುವದಿಲ್ಲ. ಒಂದು ಹೊಸಬೀಜವನ್ನು ನೋಡಿದರೆ ಇದರಿಂದ ಇಂಥ ಬಣ್ಣದ ಚಿಗುರುಗಳು, ಇಂಥ ಬಣ್ಣದ ವಾಸನೆಯ ಹೂಗಳು, ಇಂಥ ಸವಿಯ ಹಣ್ಣುಗಳು ಹೊರಕ್ಕೆ ಬರುವವೆಂದು ಅಸರ್ವಜ್ಞನಾದ ಮಾನವನು ಹೇಗೆತಾನೆ ಭವಿಷ್ಯವನ್ನು ನುಡಿದಾನು ? ಈ ಆಶ್ಚರ್ಯವನ್ನು ಒತ್ತಟ್ಟಿಗಿಟ್ಟು ನೋಡಿದರೆ ಬೀಜವು ತನ್ನೊಳಗೆ ಭೇದವುಳ್ಳದ್ದಾದ್ದರಿಂದಲೂ ತನಗಿಂತ ಬೇರೆಯಾದ ಎರಡನೆಯ ವಸ್ತುಗಳ ನೆರವು ಉಳ್ಳದ್ದಾದ್ದರಿಂದಲೂ ಮರವಾಗಿ ಮಾರ್ಪಡುವದಕ್ಕೆ ಕಾರಣವುಂಟೆಂದು ನಾವು ಹೇಗೋ ಚಿಂತಿಸಬಹುದು. ಆದರೆ ಏಕಮೇವ, ಅದ್ವಿತೀಯ – ತಾನೊಂದೇ ಆಗಿ ತನ್ನೊಳಗೆ ಯಾವ ಅವಯವಭೇದಗಳೂ ಇಲ್ಲದೆ, ತನಗಿಂತ ಎರಡನೆಯ ಮತ್ತೆ ಯಾವದೊಂದರ

ನೆರವನ್ನೂ ಬಯಸದೆ ಇರುವ – ಸತ್ತು ತಾನೇ ವಿವಿಧಭೇದಗಳ ಜಗತ್ತಾಗಿರುವದಲ್ಲ, ಇದೆಂಥ ಮಾಯೆಯು ! ಇದು ಹೇಗೆ ಈ ವೈಚಿತ್ರ್ಯವನ್ನು ಪಡೆಯಿತೆಂಬುದನ್ನು ಯಾರುತಾನೆ ಮನಸ್ಸಿನಿಂದಲಾದರೂ ಊಹಿಸಬಲ್ಲರು ?

೫. ಆದರೆ ಸೃಷ್ಟಿಯ ಅದ್ಭುತದೃಶ್ಯವು ಇಷ್ಟರಲ್ಲಿ ಕೊನೆಗಂಡಿರುವದಿಲ್ಲ. ಬೀಜವು ಎರಡು ಬೇಳೆಗಳಾಗಿ ಒಡೆದುಕೊಂಡರೆ, ಬೇಳೆಗಳು ಅಲ್ಲಲ್ಲಿ ಚಿಗುರಾಗಿ ಕಾಣಿಸಿಕೊಂಡರೆ, ಹೀಗೆಯೇ ಮುಂದೆ ಕಡ್ಡಿ, ಕವಲುಗಳು, ಕೊಂಬೆ, ರೆಂಬೆಗಳು ಮುಂತಾಗಿ ಒಡೆದುಕೊಂಡರೆ ಮೂಲಕಾರಣವಾದ ಬೀಜವು ಮುಗಿದುಹೋಗಿ ಬಿಡುವದು. ಉಂಡೆಬೀಜವನ್ನೂ ಅದು ಒಡೆದುಕೊಂಡ ಬೇಳೆಗಳನ್ನೂ ಏಕಕಾಲದಲ್ಲಿ ಕಾಣುವದು ಸಾಧ್ಯವಿಲ್ಲ. ದಾರ್ಷ್ಟಾಂತಿಕದಲ್ಲಿ ಹಾಗಲ್ಲ. ಸತ್ತೊಂದೇ ಮೊದಲು ಇದ್ದಿತು ಎಂಬುದಿಷ್ಟೇ ಅಲ್ಲ ; ಅದು ಚಿತ್ರವಿಚಿತ್ರವಾದ ಪ್ರಪಂಚವಾಗಿ ಹರಡಿಕೊಂಡ ಬಳಿಕವೂ ಈಗಲೂ ಸತ್ತಾಗಿಯೇ ಇದೆ. ಮನೆಯಲ್ಲಿರುವ ಗೋಧಿಹಿಟ್ಟಿನಲ್ಲಿ ಒಂದಂಶವನ್ನು ಹೋಳಿಗೆಗೆ ಉಪಯೋಗಿಸಿದರೆ ಬಳಿಕ ಮೊದಲಿದ್ದಷ್ಟೇ ಹಿಟ್ಟನ್ನು ಕಾಣುವದಾಗುವದಿಲ್ಲ. ಅದರಲ್ಲಿ ಒಂದು ಭಾಗವು ಹೋಳಿಗೆಯಾಗಿಬಿಟ್ಟಿದೆ. ಆದರೆ ಸತ್ತು ಪ್ರಪಂಚವಾಗಿಬಿಟ್ಟಿದೆ, ಸತ್ತೂ ಆಗಿ ಉಳಿದುಕೊಂಡಿರುತ್ತದೆ ! ಪ್ರಪಂಚವನ್ನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ – ಎಂಬ ಯಾವ ವರ್ಗದಲ್ಲಿ ಬಿಡಿಸಿ ನೋಡಿದರೂ ಸತ್ತೇ ಅದರಲ್ಲಿ ಹೊಂದಿಕೊಂಡೇ ಇರುತ್ತದೆ. ಯಾವದೊಂದು ವಸ್ತುವನ್ನೂ ಸತ್ತೆಂದಲ್ಲದೆ ಮತ್ತೆ ಬೇರೆಯಾಗಿ ತಿಳಿದುಕೊಳ್ಳಲು ಸಾಧ್ಯವೇ ಇಲ್ಲ. ಇಷ್ಟೇ ಅಲ್ಲ, ಸತ್ತು, ಇರವು, ಎಂಬ ಅಂಶದಿಂದ ಅದನ್ನು ಬಿಡಿಸಿಕೊಂಡರೆ ಅದು ಉಳಿಯುವದೇ ಇಲ್ಲ. ಬೀಜವೇ ಬುಡ, ಕೊಂಬೆ, ಚಿಗುರು, ಎಲೆ – ಮುಂತಾದವುಗಳಾಗಿರುವಂತೆ ಹೊರಗಿನ, ಒಳಗಿನ, ಮೇಲಿನ – ಎಲ್ಲಾ ವಸ್ತುಗಳ ರೂಪದಲ್ಲಿಯೂ ಸತ್ತೇ ತೋರುತ್ತಿರುವದು. ಸತ್ತು ಬೀಜದಂತೆ ಸಾವಯವವಲ್ಲವಾದ್ದರಿಂದ ಅದು ಯಾವದೊಂದು ಕಾರ್ಯರೂಪವಾದಾಗಲೂ ಮುಗಿದುಹೋಗಿರುವದಿಲ್ಲ. ಕಾರ್ಯವೂ ಈಗಲೂ ಸತ್ತೇ ಆಗಿರುವದು !

೬. ನಮಗೆ ಕಾಣುವ ದೃಶ್ಯಗಳನ್ನು ಸತ್ತೆಂದೂ ಅಸತ್ತೆಂದೂ ನಾವು ವಿಂಗಡಿಸಿಕೊಳ್ಳುವದುಂಟು. ಸತ್ತೆಂದರೆ ಇರುವದು, ಅಸತ್ತೆಂದರೆ ಇಲ್ಲದ್ದು. ಆದರೆ ಇಲ್ಲಿ ಒಂದು ವಿಶೇಷ. ಸತ್ತೆಂಬುದು ಮೇಲೆ ಹೇಳಿದಂತೆ ಎಲ್ಲದರಲ್ಲಿಯೂ ಅನುಗತವಾಗಿರುವದು. ಅಸತ್ತು ಎಂಬುದನ್ನು ಸತ್ತಿನಿಂದ ವಿಂಗಡಿಸಿ ಇಂಥದ್ದು

ಒಂದು 'ಅಸತ್ತು' ಎಂದು ಕಂಡುಕೊಳ್ಳುವದೇ ಆಗುವಂತಿಲ್ಲ! ಹಗ್ಗವು ಹಾವೆಂದು ತೋರುವಾಗ, ಕಪ್ಪೆಯ ಚಿಪ್ಪು ಬೆಳ್ಳಿ ಎಂದು ತೋರುವಾಗ, ಮರಳುಬಯಲು ನೀರೆಂದು ತೋರುವಾಗ, ಆಕಾಶವು ನೀಲವರ್ಣದ್ದೆಂದು ತೋರುವಾಗ, ಹಾವು, ಬೆಳ್ಳಿ, ನೀರು, ನೀಲವರ್ಣ – ಇವೆಲ್ಲ ಅಸತ್ತಲ್ಲವೆ ? ಇವು ಬರಿಯ ತೋರಿಕೆಯಲ್ಲವೆ ? ಎಂದು ಯಾರಾದರೂ ಕೇಳಬಹುದು. ಅಲ್ಲ, ಹಗ್ಗವು ಹಾವೆಂದು ತೋರುವಾಗ ಹಗ್ಗವು ನಮಗೆ ತೋರುವದೇ ಇಲ್ಲ; ಹಾವು ಇರುವ ಹಾವೆಂದೇ ತೋರುತ್ತದೆ. ಹೀಗೆಯೇ ಇರುವ ಬೆಳ್ಳಿ, ಇರುವ ನೀರು, ಇರುವ ನೀಲವರ್ಣ – ಎಂದೇ ನಮಗೆ ಭ್ರಾಂತದೃಶ್ಯಗಳು ತೋರುತ್ತವೆಯೇ ಹೊರತು ಇದು ಇಲ್ಲದ ಹಾವು, ಇದು ಇಲ್ಲದ ಬೆಳ್ಳಿ – ಎಂದು ಮುಂತಾಗಿಯೇನೂ ನಮಗೆ ತೋರುವದಿಲ್ಲ. ವಸ್ತುವು ತೋರಿದರೆ ಇದೆ ಎಂದೇ ತೋರಬೇಕು. ಆದ್ದರಿಂದ ಸತ್ತಿಗಿಂತ ಬೇರೆ ಅಸತ್ತನ್ನು ನಾವು ಚಿಂತಿಸುವದು ಆಗುವಂತೆಯೇ ಇಲ್ಲ.

೭. ಹಗ್ಗವು ಹಾವೆಂದು ಭ್ರಾಂತಿಯಿಂದ ತೋರಿದಬಳಿಕ, ಮತ್ತೊಬ್ಬರು ನಿಜವನ್ನು ತಿಳಿಸಿಕೊಟ್ಟರೆ ಇದು ಹಗ್ಗವೇ, ಹಾವಲ್ಲ ; ಇದು ಕಪ್ಪೆಯಚಿಪ್ಪೇ ; ಬೆಳ್ಳಿಯಲ್ಲ – ಎಂದು ಮುಂತಾಗಿ ತೋರುವದಷ್ಟೆ. ಆಗಲಾದರೂ ಹಾವು, ಬೆಳ್ಳಿ ಮುಂತಾದವು ಅಸತ್ತಲ್ಲವೆ ? ಎಂದು ನೀವು ಕೇಳಬಹುದು. ಹಾಗಲ್ಲ, ಆಗಲೂ ಇದು ಇರುವ ಹಾವು ಅಲ್ಲ, ಇದು ಇರುವ ಬೆಳ್ಳಿಯಲ್ಲ – ಎಂದು ಮುಂತಾಗಿ ಸತ್ತನ್ನು ಅವಲಂಬಿಸಿಕೊಂಡೇ ಬುದ್ಧಿಯು ನಿಂತುಕೊಂಡಿರುತ್ತದೆ. ಇದು ಇರುವ ಹಗ್ಗ, ಇರುವ ಕಪ್ಪೆಯಚಿಪ್ಪು – ಎಂದು ಇರುವ ವಸ್ತುವನ್ನು ಆಶ್ರಯಿಸಿ ನಿಂತಿರಬೇಕೆಂಬುದಂತೂ ಸೂರ್ಯಪ್ರಕಾಶದಷ್ಟು ಸ್ಫುಟವು. ಇರವನ್ನು ಅವಲಂಬಿಸದೆ ನಮ್ಮ ಬುದ್ಧಿಯು ನಿಲ್ಲುವದಕ್ಕೆ ಸಮರ್ಥವೇ ಅಲ್ಲ.

೮. ಈಗ ಇನ್ನೊಂದು ಪ್ರಶ್ನೆ, ಬಂಜೆಯ ಮಗನು, ಆಕಾಶದ ಹೂ, ಮೊಲದ ಕೊಂಬು – ಎಂದು ಮುಂತಾಗಿ ಅತ್ಯಂತ ಅಸಂಭಾವಿತವಾದ ವಸ್ತುಗಳನ್ನು ಕೂಡ ಕಲ್ಪಿಸಿಕೊಳ್ಳುವ ಶಕ್ತಿ ಬುದ್ಧಿಗೆ ಇದೆಯಷ್ಟೆ. ಇವನು ರಂಗಮ್ಮಳ ಮಗನು, ಬಂಜೆಯ ಮಗನಲ್ಲ ; ಇದು ಸಂಪಿಗೆಯ ಮೊಗ್ಗು, ಆಕಾಶದ ಹೂವಲ್ಲ ; ಇದು ಸಾರಂಗದ ಕೊಂಬು, ಮೊಲದ ಕೊಂಬಲ್ಲ ; – ಎಂದು ಯಾರೂ ಎಂದಿಗೂ ತಿಳಿದುಕೊಳ್ಳುವ ಸಂಭವವಿಲ್ಲವಲ್ಲವೆ ? ಈ ಬಂಜೆಯಮಗನು ಮುಂತಾದ ಕಲ್ಪಿತವಸ್ತುಗಳು ಅಸತ್ತೆನ್ನುವದಕ್ಕೆ ಅಡ್ಡಿ ಏನು ? ಪ್ರಪಂಚವೆಲ್ಲವೂ ಸನ್ಮಯವಾಗಿದೆ ಎನ್ನುವವರು ಈ ಶಂಕೆಗೆ ಯಾವ ಉತ್ತರವನ್ನು

ಹೇಳಿಯಾರು ? – ಎಂದು ಕೆಲವರು ಕೇಳಬಹುದು. ಆದರೆ ನಮ್ಮ ಮನಸ್ಸಿನ ಸ್ವಭಾವವನ್ನು ಸ್ವಲ್ಪ ಲಕ್ಷ್ಯವಿಟ್ಟು ನೋಡಿಕೊಳ್ಳೋಣ. ಮನಸ್ಸಿಗೆ ತನ್ನ ವ್ಯಾಪಾರವನ್ನು ತಾನು ಅರಿತುಕೊಳ್ಳುವ ಶಕ್ತಿ ಹೇಗೋ ಇದ್ದುಕೊಂಡಿರುತ್ತದೆ. ಬಂಜೆಯಮಗನು ಎಂಬ ಕಲ್ಪನೆಯನ್ನು ಮನಸ್ಸು ಮಾಡಿಕೊಂಡದ್ದು ಹೇಗೆ? ಇದನ್ನು ವಿಚಾರಿಸೋಣ. ನಾವು ಒಂದೊಂದು ವಸ್ತುವನ್ನು ಕಂಡು ಆ ವಸ್ತುವಿನ ವ್ಯವಹಾರಕ್ಕೆ ಮುಂದೆ ಸುಕರವಾಗಿರಲಿ ಎಂದು ಒಂದೊಂದು ಪ್ರತ್ಯಯವನ್ನು ಏರ್ಪಡಿಸಿಕೊಳ್ಳುವೆವು. ನಮ್ಮ ಮುಂದೆ ಆ ವಸ್ತು ಇರಲಿ, ಇಲ್ಲದಿರಲಿ, ಪ್ರತ್ಯಯವನ್ನು ಸ್ವಪ್ರಯತ್ನಮಾತ್ರದಿಂದ ಅಂತಃಕರಣವು ಎಬ್ಬಿಸಿಕೊಂಡು ಬಿಡಬಲ್ಲದು. 'ಅವರ ಮನೆಯಲ್ಲಿ ನಾನು ಕುಡಿದ ಹಾಲು ಬಹಳ ಸವಿಯಾಗಿತ್ತು' ಎಂಬ ನೆನಪು ಆಗುವಾಗ ಅವರಾಗಲಿ, ಮನೆಯಾಗಲಿ, ಹಾಲಾಗಲಿ, ಅದರ ಸವಿಯಾಗಲಿ– ಈಗ ನಮ್ಮ ಅನುಭವದಲ್ಲಿರಬೇಕಾದದ್ದಿಲ್ಲ. ಆದರೂ ಈ ಒಂದೊಂದು ಕಲ್ಪನೆಯನ್ನೂ ಕ್ಷಣಮಾತ್ರದಲ್ಲಿ ಮಾಡಿಕೊಂಡು ಅವುಗಳನ್ನು ಒಂದು ಕ್ರಮದಲ್ಲಿ ಜೋಡಿಸಿಕೊಂಡು ಆ ಮನೆಯ ಹಾಲು ಸವಿಯಾಗಿತ್ತು – ಎಂಬ ಒಂದು ವಿಶಿಷ್ಟಕಲ್ಪನೆಯನ್ನು ಮನಸ್ಸು ಮಾಡಿಕೊಂಡುಬಿಡುತ್ತದೆಯಲ್ಲವೆ ? ಕೆಲವು ವೇಳೆಗಳಲ್ಲಿ ಯಾವದೋ ಒಂದು ಪದಾರ್ಥವು ರುಚಿಯಾಗಿದ್ದದ್ದನ್ನೂ ಮತ್ತೆ ಯಾವದೋ ಸಂದರ್ಭದಲ್ಲಿ ಕುಡಿದ ಹಾಲನ್ನೂ ನೆನಪಿಗೆ ತಂದುಕೊಂಡು ಆ ಎರಡು ಅನುಭವಗಳಿಗೆ ಅನುಗುಣವಾದ ಪ್ರತ್ಯಯಗಳೆರಡನ್ನೂ ಸೃಷ್ಟಿಸಿಕೊಂಡು ಎರಡನ್ನೂ ಸೇರಿಸಿ 'ಅವರ ಮನೆಯ ಹಾಲು ಸವಿಯಾಗಿತ್ತು' ಎಂಬ ಅಭೂತಪೂರ್ವವಾದ ಅನುಭವದ ಕಲ್ಪನೆಯನ್ನೂ ನೆನಪುಮಾಡಿ ಕೊಳ್ಳಬಹುದು. ಇಂಥ ಅಯಥಾರ್ಥಸ್ಮೃತಿಗಳು ನಮ್ಮಗಳೆಲ್ಲರ ಅನುಭವ ದಲ್ಲಿಯೂ ಇದ್ದೇ ಇರುತ್ತವೆ. ಇದಂತಿರಲಿ, ಪ್ರಕೃತದಲ್ಲಿ ಮಕ್ಕಳನ್ನು ಹಡೆಯದೆ, ಹಡೆಯುವ ಶಕ್ತಿಯೂ ಇಲ್ಲದವಳೆಂದು ನಾವು ಕಲ್ಪಿಸಿಕೊಂಡಿರುವಾಕೆಗೆ ಬಂಜೆ ಎಂಬ ಹೆಸರನ್ನು ನಾವು ಕೊಟ್ಟಿರುವೆವು. ಬಂಜೆ ಎಂಬುದೊಂದು ಪ್ರತ್ಯಯ, ಮಗನು ಎಂಬುದು ಮತ್ತೊಂದು ಪ್ರತ್ಯಯ – ಈ ಎರಡನ್ನೂ ಕಲಬೆರೆಸಿ ಮನಸ್ಸು 'ಬಂಜೆಯ ಮಗನು' ಎಂಬ ಹೊಸಕಲ್ಪನೆಯೊಂದನ್ನು ಮಾಡಿಕೊಂಡಿರುತ್ತದೆ. ಇಷ್ಟೇ ಹೊರತು ಲೋಕದಲ್ಲಿ ನಿಜವಾಗಿ ಬಂಜೆಯ ಮಗನು, ಆಕಾಶದ ಹೂ, ಮೊಲದ ಕೊಂಬು – ಎಂಬ ವಸ್ತುಗಳೇ ಇವೆಯೆಂದಾಗಲಿ ಅವು ಅಸತ್ತು ಎಂಬ ವರ್ಗಕ್ಕೆ ಸೇರಿರುತ್ತವೆ ಎಂದಾಗಲಿ ನಾವು ಯಾರೂ ನಂಬಿರುವದಿಲ್ಲ. ಅಲ್ಲವೆ ?

ಆದ್ದರಿಂದ ವಸ್ತುಗಳಿಲ್ಲದ ಕೂಟಕಲ್ಪನೆಗಳಾದ ಇಂಥ ಪ್ರತ್ಯಯಗಳನ್ನು ನಾವು ನಿಜವಾದ ಪ್ರತ್ಯಯಗಳೆನ್ನುವಂತೆಯೇ ಇಲ್ಲ. ಆದ್ದರಿಂದ ಪ್ರಪಂಚದಲ್ಲೆಲ್ಲ ಸತ್ತೇ ಅನುಗತವಾಗಿದೆ, ಸತ್ತೇ ಪ್ರಪಂಚವಾಗಿರುತ್ತದೆ. ಸತ್ತನ್ನು ಬಿಟ್ಟ ಪ್ರಪಂಚವೇ ಇಲ್ಲ– ಎಂಬ ನಿಯಮಕ್ಕೆ ಇದೇನೂ ಪ್ರತಿಷೇಧದ ಉದಾಹರಣೆಯಲ್ಲ.

೯. ಆದ್ದರಿಂದ ಸೃಷ್ಟಿಗಿಂತ ಮೊದಲು ಸತ್ತೇ ಎಂದು ಶ್ರುತಿ ಹೇಳಿದರೂ ಈಗಲೂ ಎಲ್ಲವೂ ಸತ್ತೇ ಎಂದೇ ಶ್ರುತಿಯ ಅಭಿಪ್ರಾಯ. ಆದರೆ ಇಷ್ಟು ಮಾತ್ರ ವಿಶೇಷವಿದೆ. ಮೊದಲು ತನಗೆರಡನೆಯದಿಲ್ಲದ ಸತ್ತೇ, ಈಗಲೂ ತನಗೆರಡನೆ ಯದಿಲ್ಲದ ಸತ್ತೇ. ಆದರೂ ಈಗ ಸತ್ತೆಂಬ ಬುದ್ಧಿಗೆ ವಿಷಯವಾಗಿರುವ ಆ ಪರಮಾರ್ಥತತ್ತ್ವವಲ್ಲದೆ ಸತ್ತೇ ಎಂದಾಗಲಿ ಸತ್ತಲ್ಲವೆಂದಾಗಲಿ ಹೇಳುವದಕ್ಕೆ ಬಾರದ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ – ಎಂಬ ವಿಭಾಗಕ್ಕೆ ವಿಷಯ ವಾಗಿರುವ ಪ್ರಪಂಚವೆಂಬ ಒಂದು ವಿಲಕ್ಷಣದ ಬುದ್ಧಿಗೆ ಅದು ವಿಷಯ ವಾಗಿಯೂ ಇರುತ್ತದೆ. ಪರಮಾರ್ಥವಾಗಿ ಎಂದೆಂದಿಗೂ ಸತ್ತೇ, ಅದ್ವಿತೀಯ ವಾದ ಸತ್ತೊಂದೇ ಇದ್ದುಕೊಂಡಿರುತ್ತದೆ.

೧೦. ಉಪನಿಷತ್ತಿನಲ್ಲಿ ಒಂದು ವಾಕ್ಯವಿದೆ. ''ತನಗೆರಡನೆಯದಿಲ್ಲದ ಸತ್ತೊಂದೇ ಮೊದಲು ಇದ್ದಿತು ; ಅದು 'ನಾನು ಬಹುವಾಗುವೆನು, ಉತ್ಪತ್ತಿಯಾಗು ವೆನು' ಎಂದು ಯೋಚಿಸಿಕೊಂಡಿತು, ಅದು ತೇಜಸ್ಸನ್ನೂ ಅಪ್ಪನ್ನೂ ಅನ್ನವನ್ನೂ ಸೃಜಿಸಿತು ; ಅವುಗಳನ್ನು ಜೀವಾತ್ಮರೂಪದಿಂದ ಒಳಹೊಕ್ಕು ನಾಮರೂಪಗಳನ್ನು ವಿಂಗಡಿಸಿತು''. ಇಲ್ಲಿ ಉಪನಿಷತ್ತಿನ ವಾಕ್ಯದ ಸಾರವನ್ನು ಮಾತ್ರ ಹೇಳಿರುತ್ತೇನೆ. ಮೊದಲಿದ್ದದ್ದು ಸತ್ತೇ, ಅದು ಚಿದ್ರೂಪವಾಗಿಯೇ ಇತ್ತು ; ಆ ಚಿದ್ರೂಪದಿಂದಲೇ ಭೂತಗಳೂ ಭೌತಿಕದ್ರವ್ಯಗಳೂ ಪ್ರಾಣಿಗಳೂ ಉಂಟಾಗಿರುವವು –ಎಂಬುದು ಶ್ರುತಿಯ ಅಭಿಪ್ರಾಯ.

೧೧. 'ಸತ್ತು ಚಿತ್ತೇ ಆಗಿತ್ತು' ಎಂದು ಶ್ರುತಿಯಲ್ಲಿ ಹೇಳಿರುವದನ್ನು ನಾವು ಚೆನ್ನಾಗಿ ಮನನಮಾಡಬೇಕು. ಎಲ್ಲವೂ ಸತ್ತೇ ಎಂದು ಹಿಂದೆ ತಿಳಿಸಿರುತ್ತೇನೆ. ಆದ್ದರಿಂದ ಎಲ್ಲವೂ ಚಿತ್ತೇ, ಎಲ್ಲವೂ ಜ್ಞಾನಸ್ವರೂಪವೇ ಎಂದಾಗುತ್ತದೆ. ಎಲ್ಲವೂ ಸತ್ತೇ ಆದರೂ ನಮ್ಮ ಮನಸ್ಸು ಸತ್ತು, ಅಸತ್ತು – ಎಂಬ ವಿಭಾಗವನ್ನು ಮಾಡಿಕೊಂಡಿರುವಂತೆ ಎಲ್ಲವೂ ಚಿತ್ತೇ ಆದರೂ ಚಿತ್ತು, ಅಚಿತ್ತು – ಎಂಬ ವಿಭಾಗವನ್ನು ಮಾಡಿಕೊಂಡಿರುತ್ತದೆ. ಆದರೆ ಪರಮಾರ್ಥವಾಗಿ ಎಲ್ಲವೂ

ಚಿತ್ತೇ, ಜ್ಞಾನವೇ. ಬಹಳ ಪ್ರಕಾಶದಲ್ಲಿ, ಕಣ್ಣು ಮಂಜಾಗಿ ಏನೂ ಕಾಣದೆ ಇರುವಂತೆ ಈ ಚಿತ್ಪ್ರಕಾಶವನ್ನು ನೋಡಲಾರದೆ ನಮ್ಮ ಮನಸ್ಸು ಅಜ್ಞಾನ, ಅಚೇತನವಸ್ತು – ಎಂಬ ವಿಕಲ್ಪಗಳನ್ನು ಮಾಡಿಕೊಂಡಿರುತ್ತದೆ.

೧೨. ಎಲ್ಲವೂ ಚೈತನ್ಯವೇ ಆಗಿದ್ದರೆ ನಮಗೆ ಅಚೇತನವಸ್ತುಗಳು ಕಾಣಬರುವದೇಕೆ ? ಚೈತನ್ಯವೇ ಜಗತ್ತಾಗಿ ಪರಿಣಮಿಸಿತೆಂದು ಶ್ರುತಿಯು ಹೇಳಿದರೂ ಈ ಅನುಭವಕ್ಕೆ ವಿರುದ್ಧವಾಗುವದಿಲ್ಲವೆ ? – ಎಂದು ನೀವು ಕೇಳಬಹುದು. ಇದಕ್ಕೆ ಸದಸದ್ವಿಭಾಗದ ವಿಷಯದಲ್ಲಿ (೬) ಹೇಳಿರುವದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಹೇಗೆ ಅಸತ್ತನ್ನು ಕಾಣುವಾಗ ಸತ್ತು ನಮಗೆ ಕಾಣಿಸದೆ ಇರುವದರಿಂದ ಅಸತ್ತೆಂದರೆ ಸತ್ತೇ ಎಂದು ನಿಶ್ಚಯಿಸಬೇಕಾಗಿರುತ್ತದೆಯೋ ಹಾಗೆಯೇ ಚಿದಚಿದ್ವಿಭಾಗದ ವಿಷಯದಲ್ಲಿಯೂ ತಿಳಿಯಬೇಕು. ಅಜ್ಞಾನವು ನಮಗೆ ಆಗಿರುವಾಗ 'ಇದು ಅಜ್ಞಾನವು' ಎಂದೇನೂ ತೋರುವದಿಲ್ಲ, ಇದು ಜ್ಞಾನ ಎಂದೇ ನಮ್ಮ ಭಾವನೆಯಿರುತ್ತದೆ. ಆದ್ದರಿಂದ ಜ್ಞಾನವನ್ನೇ ನಾವು ಅಜ್ಞಾನವೆಂದು ವ್ಯವಹರಿಸುತ್ತೇವೆ – ಎಂದಾಗುತ್ತದೆ.

೧೩. ಜ್ಞಾನವನ್ನು ಅಜ್ಞಾನವೆಂದು ವ್ಯವಹರಿಸುತ್ತೇವಾದರೆ ಪ್ರಮಾಣಜ್ಞಾನ, ಅಪ್ರಮಾಣಜ್ಞಾನ– ಎರಡೂ ಒಂದೇ ಆಗಬೇಕಾಗುತ್ತದೆ. ಆಗ ತತ್ತ್ವಮನನದಿಂದ ಏನು ಪ್ರಯೋಜನ ? ಈ ದೃಷ್ಟಿಯಿಂದ ನೋಡಿದರೆ ಎಲ್ಲವೂ ಪ್ರಮಾಣಜ್ಞಾನವೆಂದೇ ಆಗಿಬಿಡುತ್ತದೆಯಲ್ಲ !– ಎಂದು ಯಾರಾದರೂ ಶಂಕಿಸಬಹುದು. ಆದರೆ ಈ ಶಂಕೆಯು ಸರಿಯಲ್ಲ. ಏಕೆಂದರೆ ಸತ್ತೆಂದರೆ ಹೇಗೆ ವಸ್ತುಗಳ ಇರವೆಂಬ ಧರ್ಮವಲ್ಲವೋ ಎಲ್ಲಕ್ಕೂ ಮೂಲಕಾರಣವಾದ ತತ್ತ್ವವೇ ಸತ್ತೆಂದು ಶ್ರುತಿಯಲ್ಲಿ ಹೇಳಿದೆಯೋ ಹಾಗೆ ಪರಮಾರ್ಥತತ್ತ್ವವು ಚಿತ್ತು, ಜ್ಞಾನಸ್ವರೂಪವು ಎಂದರೆ ಅದು ಪ್ರಮಾಣಜ್ಞಾನವೆಂದೇನೂ ಅರ್ಥವಲ್ಲ. ಲೋಕದಲ್ಲಿ ಸತ್ತು, ಅಸತ್ತು – ಎಂದು ಕಲ್ಪಿಸಿದ ವಸ್ತುಭೇದವ್ಯವಹಾರವು ವ್ಯವಹಾರದಲ್ಲಿ ಸರಿಯೇ ಆಗಿರುವದೋ ಹಾಗೆಯೇ ಜ್ಞಾನ, ಅಜ್ಞಾನ – ಎಂಬ ವಸ್ತುಭೇದವು ವ್ಯವಹಾರದಲ್ಲಿ ಸರಿಯೇ ಆಗಿರುವದು. ಆದರೂ ಪರಮಾರ್ಥದೃಷ್ಟಿಯಲ್ಲಿ ಈ ವಿಭಾಗವು ಜ್ಞಾನರೂಪವಾದ ಸದ್ವಸ್ತುವಿನಲ್ಲಿಯೇ ಕಲ್ಪಿತವೆಂದು ಹೇಳಿದರೆ ಯಾವ ದೋಷವೂ ಇರುವದಿಲ್ಲ.

೧೪. ವ್ಯವಹಾರದಲ್ಲಿ ಅಜ್ಞಾನವೆಂದರೆ ಏನು ? ಜ್ಞಾನವಾಗದೆ ಇರುವದು, ಸಂಶಯವಾಗುವದು, ತಪ್ಪಾಗಿ ತಿಳಿಯುವದು – ಇವೇ ಅಲ್ಲವೆ ?

ಆದರೂ 'ನನಗೆ ಏನೂ ತಿಳಿಯಲಿಲ್ಲ', 'ನನಗೆ ಸಂಶಯಜ್ಞಾನವಾಗಿತ್ತು', 'ನನಗೆ ಮಿಥ್ಯಾಜ್ಞಾನವಾಗಿತ್ತು' – ಎಂದು ನಾವು ವ್ಯವಹರಿಸುತ್ತಿರುವದೆಲ್ಲ ಜ್ಞಾನವಲ್ಲದೆ ಮತ್ತೇನು ? ಹುಳಿತಮುತ್ತು ಎಂದರೆ ಮುತ್ತೇ ಆಗುತ್ತದೆಯೇ ಹೊರತು ಜೋಳದಕಾಳೆನಿಸುವದಿಲ್ಲ. ಹಾಗೆ ಜ್ಞಾನವು ಅಜ್ಞಾನವೆನಿಸಿದರೂ ಇದು ಜ್ಞಾನವೇ ಆಗಿರುತ್ತದೆ ; ಆದರೆ ವ್ಯವಹಾರದಲ್ಲಿ ಸ್ವೀಕರಿಸಬೇಕಾದ ಜ್ಞಾನವಾಗಿರುವದಿಲ್ಲ.

೧೫. ಇನ್ನೊಂದು ಮಾತು. ವ್ಯವಹಾರದಲ್ಲಿ ಜ್ಞಾನಕ್ಕೆ ಹುಟ್ಟು ಹೊಂದುಗಳುಂಟು ; ಆದರೆ ಈ ಜ್ಞಾನಾಜ್ಞಾನಗಳ ಹುಟ್ಟುಹೊಂದುಗಳನ್ನು ಅರಿಯುವ ಜ್ಞಾನಕ್ಕೆ ಹುಟ್ಟುಹೊಂದುಗಳು ಇರುವದೇ ಇಲ್ಲ. ಪರಮಾರ್ಥ ದೃಷ್ಟಿಯಲ್ಲಿ ಅದೇ ಜ್ಞಾನವೆನಿಸುತ್ತದೆ. ಆ ಜ್ಞಾನದಲ್ಲಿ ವ್ಯವಹಾರದ ಜ್ಞಾನಾಜ್ಞಾನಗಳು ಎರಡೂ ಕಲ್ಪಿತವಾಗಿರುತ್ತವೆ. ಹೇಗೆ ಹಗ್ಗದಲ್ಲಿ ಕಲ್ಪಿತವಾಗಿರುವ ಹಾವೂ ಕೋಲೂ ನಿಜವಾಗಿ ಹಗ್ಗವೇ ಆಗಿರುವವೋ ಹಾಗೆಯೇ ಜ್ಞಾನಾಜ್ಞಾನಗಳೆರಡೂ ಜ್ಞಾನವೇ ಎಂಬುದು ದೋಷವಲ್ಲ. ಆದ್ದರಿಂದ ಎಲ್ಲವೂ ಚಿತ್ತೇ – ಎಂಬ ಶ್ರುತಿಯು ಅನುಭವವಿರುದ್ಧವಲ್ಲ.

೧೬. ಸತ್ತು ಎಂದರೆ ಆತ್ಮನೇ ; ಚಿತ್ತು ಎಂದರೆ ಆತ್ಮನೇ. ಸತ್ತಿಗೂ ಚಿತ್ತಿಗೂ ಯಾವ ಭೇದವೂ ಇಲ್ಲ. ಬೆಂಕಿಯ ಸುಡುವ ಶಕ್ತಿಯೂ ಬೆಳಗುವ ಶಕ್ತಿಯೂ ಹೇಗೆ ಬೇರೆಬೇರೆಯಾಗಿರುವದಿಲ್ಲವೋ ಹಾಗೆಯೇ ಆತ್ಮನ ಸದ್ರೂಪವೂ ಚಿದ್ರೂಪವೂ ಬೇರೆಬೇರೆಯಿರುವದಿಲ್ಲ. ಆತ್ಮನಿಗೆ ಇರವು ಹೇಗೆ ಧರ್ಮವಲ್ಲವೋ, ಆತ್ಮನ ಸ್ವರೂಪವೇ ಆಗಿರುವದೋ ಹಾಗೆಯೇ ಆತ್ಮನಿಗೆ ಅರಿವು ಧರ್ಮವಲ್ಲ, ಆತ್ಮನ ಸ್ವರೂಪವೇ ಆಗಿರುವದು.

೧೭. ಯಾವ ವಸ್ತುವೂ ತನ್ನ ಸ್ವರೂಪವನ್ನು ಕೊಡವಿಕೊಳ್ಳಲಾರದು. ಹಾಗೆಯೇ ಆತ್ಮನೂ ತನ್ನ ಸ್ವರೂಪವಾದ ಸತ್ತನ್ನು ಕೊಡವಿಕೊಳ್ಳಲಾರನು ; ಹಾಗೆಯೇ ತನ್ನ ಸ್ವರೂಪವಾದ ಚಿತ್ತನ್ನೂ ಕೊಡವಿಕೊಳ್ಳಲಾರನು. ಯಾವದನ್ನು ಆತ್ಮನಿಂದ ಬೇರ್ಪಡಿಸಬಹುದೋ ಅದು ಸತ್ತೂ ಅಲ್ಲ, ಚಿತ್ತೂ ಅಲ್ಲ, ಆತ್ಮನಿಂದ ಬೇರ್ಪಡಿಸಿದ ಸತ್ತನ್ನಾಗಲಿ ಚಿತ್ತನ್ನಾಗಲಿ ಮನಸ್ಸಿನಲ್ಲಿ ಕಲ್ಪಿಸುವದಕ್ಕೂ ಆಗುವದಿಲ್ಲ.

೧೮. ಬೆಂಕಿಯ ಬಿಸಿ, ಬೆಳಕು– ಅದರ ಸ್ವರೂಪವೇ ಆಗಿರುವದರಿಂದ ಅದರ ಒಂದು ಕಡೆಯಲ್ಲಿ ಬಿಸಿಯೂ ಒಂದು ಕಡೆಯಲ್ಲಿ ಬೆಳಕೂ ಇರುವವೆಂದು

ಹೇಳುವದಕ್ಕೆ ಬರುವದಿಲ್ಲ. ಅದರಂತೆ ಆತ್ಮನ ಸತ್ತೆಯೂ ಚಿತ್ತೂ ಅವನ ಸ್ವರೂಪವೇ ಆಗಿರುವದರಿಂದ ಅವೆರಡೂ ಅವನಲ್ಲಿ ಎಲ್ಲೆಲ್ಲಿಯೂ ಇರುತ್ತವೆ. ಒಂದು ಭಾಗದಲ್ಲಿ ಸತ್ತ್ವವೂ ಇನ್ನೊಂದು ಭಾಗದಲ್ಲಿ ಚಿತ್ತ್ವವೂ ಇರುವದಿಲ್ಲ.

೧೯. ಯಾವನೂ 'ನಾನು ಇಲ್ಲ, ಇರಲಿಲ್ಲ, ಅಥವಾ ಇರುವದಿಲ್ಲ' ಎಂದು ಕಲ್ಪಿಸುವದಕ್ಕೆ ಬರುವದಿಲ್ಲ ; ಏಕೆಂದರೆ ಹಾಗೆಂದು ಕಲ್ಪಿಸುವದಕ್ಕೆ ಪ್ರಯತ್ನಪಡುವವನ ಸ್ವರೂಪವೇ ಸತ್ತಾಗಿರುತ್ತದೆ. ಇದರಂತೆ ಯಾವನೂ 'ನಾನು ಅರಿಯುವದಿಲ್ಲ, ಅರಿಯಲಿಲ್ಲ , ಅಥವಾ ಅರಿಯುವದಿಲ್ಲ' – ಎಂದು ಕಲ್ಪಿಸುವದಕ್ಕೆ ಬರುವದಿಲ್ಲ ; ಏಕೆಂದರೆ ಹಾಗೆಂದು ಕಲ್ಪಿಸುವದಕ್ಕೆ ಪ್ರಯತ್ನ ಮಾಡುವವನ ಸ್ವರೂಪವೇ ಚಿತ್ತಾಗಿರುತ್ತದೆ.

೨೦. ಸತ್ತ್ವವಿಲ್ಲದ ಚಿತ್ತನ್ನು ಕಲ್ಪಿಸುವದಕ್ಕೇ ಆಗುವದಿಲ್ಲ. ಏಕೆಂದರೆ ಚಿತ್ತೆಂದರೆ ಇರುವ ಚಿತ್ತು. ಹೀಗೆಯೇ ಚಿತ್ತ್ವವಿಲ್ಲದ ಸತ್ತೆಯನ್ನು ಕಲ್ಪಿಸುವದಕ್ಕೇ ಆಗುವದಿಲ್ಲ. ಏಕೆಂದರೆ ಹಾಗೆಂದು ಕಲ್ಪಿಸುವವನ ಇರವು ಚಿದ್ರೂಪವಾಗಿಯೇ ಇರಬೇಕಾಗಿರುತ್ತದೆ.

೨೧. ಹುಟ್ಟಿದ ವಸ್ತು ಸತ್ತೆಯಿಂದ ಹೊಸದಾಗಿ ಕೂಡಿಕೊಂಡಂತೆ ತೋರುತ್ತದೆ. ಆದರೆ ಈ ತೋರಿಕೆಯು ಭ್ರಾಂತಿಮಾತ್ರವಾಗಿರುತ್ತದೆ. ಏಕೆಂದರೆ ಸತ್ತೆಯಿಂದ ಕೂಡದೆ ಇರುವ ವಸ್ತುವನ್ನು ಕಲ್ಪಿಸುವದೇ ಆಗುವದಿಲ್ಲ. ಹುಟ್ಟಿದ ವಸ್ತುವೆಂಬುದು ಸತ್ತಾಗಲಾರದು. ಏಕೆಂದರೆ ಸತ್ತೆಂದರೆ ಯಾವಾಗಲೂ ಇರುವದು. ಸತ್ತು ಹುಟ್ಟಲಾರದು ; ಏಕೆಂದರೆ ಸತ್ತಿನಲ್ಲಿ ಯಾವ ಮಾರ್ಪಾಡಾದರೂ ಅದು ಅಸತ್ತಾಗಬೇಕಾಗುವದು. ಹೀಗೆಯೇ ಹುಟ್ಟಿದ ವಸ್ತು ಹೊಸದಾಗಿ ತೋರಿಕೊಳ್ಳುವದೆಂಬುದೂ ಭ್ರಾಂತಿಮಾತ್ರವಾಗುತ್ತದೆ. ಏಕೆಂದರೆ ಸ್ಫೂರ್ತಿ (ತೋರಿಕೆ)ಯಿಲ್ಲದ ವಸ್ತು ಯಾವದನ್ನೂ ಕಲ್ಪಿಸುವದೇ ಆಗುವದಿಲ್ಲ. ಹುಟ್ಟಿದ ವಸ್ತುವೆಂಬುದು ಚಿತ್ತಾಗಲಾರದು ; ಏಕೆಂದರೆ ಚಿತ್ತೆಂದರೆ ಯಾವಾಗಲೂ ಬೆಳಗುತ್ತಿರುವದು. ಚಿತ್ತು ಹುಟ್ಟಲಾರದು ; ಏಕೆಂದರೆ ಚಿತ್ತಿನಲ್ಲಿ ಮಾರ್ಪಾಡಾದರೆ ಚಿತ್ತೇ ಅಚಿತ್ತಾಗಬೇಕಾಗುವದು.

೨೨. ಹುಟ್ಟಿದವೆಂಬ ವಸ್ತುಗಳಲ್ಲಿ ಕಾಣಬರುವ ಸತ್ತೆಯೂ ಚಿತ್ತೂ ಆಭಾಸಮಾತ್ರವು. ನಿಜವಾದ ಸತ್ತೂ ಚಿತ್ತೂ ನಮ್ಮ ಸ್ವರೂಪವೇ, ಆತ್ಮನೇ. ಸನ್ಮಾತ್ರನಾದ ಆತ್ಮನಲ್ಲಿ ಸದಾಭಾಸವಾದ ಅನಾತ್ಮವು ಕಲ್ಪಿತವಾಗುತ್ತಿರುವದು ;

ಚಿನ್ಮಾತ್ರನಾದ ಆತ್ಮನಲ್ಲಿ ಚಿದಾಭಾಸವಾದ ಅನಾತ್ಮವು ಕಲ್ಪಿತವಾಗುತ್ತಿರುವದು. ಈ ಕಲ್ಪನೆಯೆಂಬುದು ಆಭಾಸವೇ. ಆತ್ಮನೊಂದೇ ಪರಮಾರ್ಥವು.

೨೩. ಸದ್ರೂಪನಾದ ಆತ್ಮನಲ್ಲಿ ಕಲ್ಪಿತವಾದ ವಸ್ತುಗಳೆಲ್ಲವೂ ಸದಾಭಾಸವಾಗಿರುವವು, ಸದ್ವ್ಯಾಪ್ತವಾಗಿರುವವು, ಕೊನೆಯಲ್ಲಿ ನೋಡಿದರೆ ಸತ್ತೇ ಆಗಿರುವವು, ಚಿದ್ರೂಪನಾದ ಆತ್ಮನಲ್ಲಿ ಕಲ್ಪಿತವಾದ ವಸ್ತುಗಳೆಲ್ಲವೂ ಚಿದಾಭಾಸವಾಗಿರುವವು, ಚಿದ್ವ್ಯಾಪ್ತವಾಗಿರುವವು. ಕೊನೆಯಲ್ಲಿ ನೋಡಿದರೆ ಚಿತ್ತೇ ಆಗಿರುವವು. ಸಚ್ಚಿದ್ರೂಪನಾದ ಆತ್ಮನಿಗಿಂತ ಬೇರೆಯಾದ ವಸ್ತುವೇ ಇಲ್ಲ; ಸಮುದ್ರದಲ್ಲಿ ಕಲ್ಪಿಸಿರುವ ನೊರೆ, ತೆರೆ, ಗುಳ್ಳೆ ಮುಂತಾದದ್ದು ಯಾವದು ತಾನೆ ಸಮುದ್ರಕ್ಕಿಂತ ಬೇರೆಯಾಗಿರುತ್ತದೆ ?

೨೪. ಈ ಜಗತ್ತು ಸನ್ಮೂಲವು, ಸದಾಯತನವು, ಸತ್ಪ್ರತಿಷ್ಠವು – ಎಂದರೆ ಸತ್ತಿನಿಂದ ಬಂದಿದೆ, ಸತ್ತಿನಲ್ಲಿದೆ, ಸತ್ತನ್ನೇ ಸೇರುವದು– ಎಂದು ಶ್ರುತಿ ಸಾರುತ್ತಿದೆ. ಸತ್ತೇ ಚಿತ್ತಾದ್ದರಿಂದ ಜಗತ್ತೆಲ್ಲವೂ ಚಿನ್ಮೂಲವು, ಚಿದಾಯತನವು, ಚಿತ್ಪ್ರತಿಷ್ಠವು – ಎಂದೂ ಹೇಳಬಹುದು.

೨೫. ಉಪನಿಷತ್ತಿನಲ್ಲಿ ಒಂದು ಅಮೋಘವಾದ ವಾಕ್ಯವಿದೆ : "ಆನಂದದಿಂದಲೇ ಈ ಭೂತಗಳು ಹುಟ್ಟುವವು ಎಂಬುದು ಪ್ರಸಿದ್ಧವು ; ಇವು ಆನಂದದಿಂದಲೇ ಜೀವಿಸುತ್ತಿರುವವು ; ಆನಂದದ ಕಡೆಗೆ ಹೊರಟು ಆನಂದವನ್ನೇ ಸೇರಿಕೊಳ್ಳುವವು." ಇದೊಂದು ಹರ್ಷದಾಯಕವಾದ ಸಂದೇಶವು. ತಲ್ಲಣಗೊಳ್ಳುತ್ತಿರುವ ಜೀವರುಗಳಿಗೆಲ್ಲ ಆನಂದದ ಒಸಗೆಯನ್ನು ತಂದುಕೊಡುವ ವಾಣಿಯು.

೨೬. ಪರಮಾತ್ಮನು ಆನಂದಸ್ವರೂಪನು ; ಅವನೇ ಈ ಜಗತ್ತನ್ನು ಸೃಷ್ಟಿಸಿ ಇದರ ಒಳಕ್ಕೆ ಜೀವರ ರೂಪದಿಂದ ಹೊಕ್ಕಿರುವನು. ಆದ್ದರಿಂದ ಜಗತ್ತೆಲ್ಲವೂ ಆನಂದಮಯವಾಗಿದೆ, ಜೀವರುಗಳೆಲ್ಲರೂ ಆನಂದಸ್ವರೂಪರಾಗಿರುತ್ತಾರೆ. ಇದನ್ನು ತಿಳಿದುಕೊಂಡವರಿಗೆ ಜೀವನವೆಲ್ಲವೂ ಆನಂದಮಯವಾಗಿರುತ್ತದೆ ಎಂಬುದು ವೇದಾಂತದ ಉಪದೇಶವು. ಇದನ್ನು ಮನದಟ್ಟು ಮಾಡಿಕೊಂಡವರಿಗೆ ದುಃಖಕ್ಕೆ ಸ್ವಲ್ಪವೂ ಎಡೆಯಿಲ್ಲ.

೨೭. 'ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು' ಎಂದು ಶ್ರುತಿಯಲ್ಲಿದೆ. ಸತ್ತೇ ಚಿತ್ತು ಎಂಬುದನ್ನು ಹಿಂದೆ ಮನದಂದುಕೊಂಡದ್ದಾಗಿದೆ.

ಈ ಶ್ರುತಿಯು ಚಿತ್ತೇ ಆನಂದವು ಎಂದು ಹೇಳುತ್ತಿದೆ. ಆದ್ದರಿಂದ ಸತ್ತು, ಚಿತ್ತು, ಆನಂದ – ಎಲ್ಲವೂ ಒಂದೇ ಎಂಬುದು ಸಿದ್ಧಾಂತವಾಯಿತು. ಎಲ್ಲವೂ ಸತ್ತು, ಎಲ್ಲವೂ ಚಿತ್ತು – ಎಂದು ಹಿಂದಿನ ಮನನದಲ್ಲಿ ಗೊತ್ತಾಗಿದೆ. ಆದ್ದರಿಂದ ಎಲ್ಲವೂ ಆನಂದವೇ. ಸತ್ತೇ ಬ್ರಹ್ಮವು, ಎಲ್ಲವೂ ಸತ್ತೇ ಆಗಿದ್ದರೂ ಸತ್ತಿನಲ್ಲಿ ಸತ್ತು, ಅಸತ್ತು – ಎಂಬ ವಿಭಾಗವನ್ನು ಮನಸ್ಸು ಕಲ್ಪಿಸಿಕೊಂಡಿರುತ್ತದೆ ; ಚಿತ್ತೇ ಬ್ರಹ್ಮವು, ಎಲ್ಲವೂ ಚಿತ್ತೇ ಆಗಿದ್ದರೂ ಚಿತ್ತಿನಲ್ಲಿ ಚಿತ್ತು, ಅಚಿತ್ತು – ಎಂಬ ವಿಭಾಗವನ್ನು ಮನಸ್ಸು ಕಲ್ಪಿಸಿಕೊಂಡಿರುತ್ತದೆ ಎಂದು ಹಿಂದೆ ತಿಳಿಸಿರುವಂತೆ ಆನಂದವೇ ಬ್ರಹ್ಮವು ; ಎಲ್ಲವೂ ಆನಂದವೇ ಆಗಿದ್ದರೂ ಆನಂದದಲ್ಲಿ ಆನಂದ, ದುಃಖ – ಎಂಬ ವಿಭಾಗವನ್ನು ಮನಸ್ಸು ಮಾಡಿಕೊಂಡಿರುತ್ತದೆ. ಅತ್ಯಂತವಾದ ಮಧುರ ಪದಾರ್ಥದಲ್ಲಿರುವ ಮಾಧುರ್ಯವು ನಾಲಗೆಗೆ ಕಹಿಯಾಗಿ ತೋರುವಂತೆ ಮಿಗಿಲಿಲ್ಲದ ಆನಂದವೇ ಮನಸ್ಸಿಗೆ ದುಃಖವಾಗಿ ತೋರುತ್ತಿರುವದು.

೨೮. ಲೋಕದಲ್ಲಿರುವ ದೃಶ್ಯಗಳನ್ನು ಸುಖಕಾರಕವೆಂದೂ ದುಃಖಕಾರಕ ವೆಂದೂ ನಾವು ವಿಂಗಡಿಸಿಕೊಳ್ಳುವದುಂಟು. ಆದರೆ ಯಾವ ವಸ್ತುವು ಒಬ್ಬನಿಗೆ ಸುಖಕಾರಕವೋ ಅದೇ ಮತ್ತೊಬ್ಬನಿಗೆ ದುಃಖಕಾರಕವಾಗುವದು ; ಯಾವ ವಸ್ತುವು ಈಗ ನಮಗೆ ಸುಖಕಾರಕವೋ ಅದೇ ಮತ್ತೊಮ್ಮೆ ನಮಗೇ ದುಃಖಕಾರಕ ವಾಗುವದು. ನಮಗೆ ರುಚಿಯಲ್ಲವೆಂದು ತೋರುವ ಬೇವಿನಕಾಯಿಯು ಕಾಗೆಗೆ ಸುಸ್ವಾದವಾಗಿರುವದು. ಆರೋಗ್ಯಸ್ಥಿತಿಯಲ್ಲಿರುವವನಿಗೆ ಸಿಹಿಯಾಗಿರುವದೇ ಜ್ವರದಲ್ಲಿ ಕಹಿಯಾಗಿ ತೋರುವದು. ಹೀಗಿರುವರಿಂದ ಹೊರಗಿನ ವಸ್ತುಗಳಲ್ಲಿ ನಿಯತವಾದ ಸುಖಕಾರಣತ್ವವಾಗಲಿ ದುಃಖಕಾರಣತ್ವವಾಗಲಿ ಇದೆ ಎಂಬುದು ಸರಿಯಲ್ಲವೆಂದಾಯಿತು.

೨೯. ವಿಷಯಭೋಗಗಳಿಂದ ನಮಗೆ ಆಗುವ ಶೀತೋಷ್ಣಾದಿವೇದನೆ ಗಳೂ ನಮಗೆ ನಿಯತವಾಗಿ ಸುಖವನ್ನಾಗಲಿ ದುಃಖವನ್ನಾಗಲಿ ಉಂಟುಮಾಡುವದಿಲ್ಲ. ಈಗ ಶೀತವು ಸುಖ, ಆಗ ಉಷ್ಣವೇ ಸುಖ ; ಈಗ ಉಷ್ಣವು ದುಃಖ, ಆಗ ಶೀತವೇ ದುಃಖ. ಆದ್ದರಿಂದ ವೇದನೆಗಳಲ್ಲಿಯೂ ಸುಖದುಃಖಕಾರಣತ್ವದ ವಿವೇಕವು ನಿಯತವಾಗಿ ಇರುವದಿಲ್ಲ.

೩೦. ಜೀವನವು ಎಷ್ಟೇ ದುಃಖಮಯವಾಗಿರುವಂತೆ ತೋರಲಿ, ಅದು ನಮಗೆ ಸುಖವಲ್ಲವೆಂದಾಗಲಿ, ದುಃಖಮಯವಾಗಿರುವದರಿಂದ ಹೇಯವೆಂದಾ

ಗಲಿ ತೋರುವದಿಲ್ಲ. ಸುಖವೇ ಇಲ್ಲದ ದುಃಖವು ಎಂದಿಗೂ ಯಾವನಿಗೂ ತೋರಿದ್ದೇ ಇಲ್ಲ. ಹಾಗೆ ತೋರಿದ್ದರೆ ಅತ್ಯಂತ ಕೀಳುಜನ್ಮದಲ್ಲಿ ಅವತರಿಸುವ ಪ್ರಾಣಿಗಳು ಬದುಕಿರುವದಕ್ಕೇ ಆಗುತ್ತಿರಲಿಲ್ಲ. 'ಈ ಜೀವನವು ಬೇಡ', ಎಂದು ಅದನ್ನು ದುಃಖಮಯವೆಂದೇ ಕಾಣುವವರು ಯಾರಿದ್ದಾರೆ ? ಆನಂದವು ಬ್ರಹ್ಮವು ; ಮೊದಲು ಆನಂದವು ಇದ್ದುಕೊಂಡು ಈಗ ಜಗತ್ತಾಗಿದೆ – ಎಂದರೆ ಆನಂದವು ದುಃಖವಾಗಿ ಪರಿಣಮಿಸಿದೆ– ಎಂದರ್ಥವಲ್ಲ. ಜಗತ್ತನ್ನು ಯಾವ ರೂಪದಲ್ಲಿ ನೋಡಿದರೂ ಅದರಲ್ಲಿ ಆನಂದವು ಹೊಂದಿಕೊಂಡಿರುತ್ತದೆ. ದುಃಖಕ್ಕೂ ಸುಖವು ಅಂಟಿಕೊಂಡೇ ಇರುತ್ತದೆ. ಸುಖವಿಲ್ಲದ ದುಃಖವಿಲ್ಲ ವೆಂಬುದಷ್ಟೇ ಅಲ್ಲ, ದುಃಖವನ್ನು ನಾವು ಕಾಣುವಾಗ ಸುಖವು ಕಾಣುವದಿಲ್ಲವಾದ್ದ ರಿಂದ ಸುಖವನ್ನೇ ನಾವು ದುಃಖವೆಂದು ವ್ಯವಹರಿಸುತ್ತೇವೆಂದಾಯಿತು.

೩೧. ದುಃಖವೂ ಪರಮಾರ್ಥವಾಗಿ ಸುಖವೇ ಆದರೂ ವ್ಯವಹಾರದಲ್ಲಿ ಕಾಣುವ ಸುಖದುಃಖವಿಭಾಗವು ಸುಳ್ಳಲ್ಲ. ದುಃಖವು ಬೇಕೆಂದು ಯಾರೂ ಬಯಸುವದಿಲ್ಲ ; ಸುಖವು ಬೇಡವೆಂದು ಯಾರೂ ಅದನ್ನು ದ್ವೇಷಿಸುವದಿಲ್ಲ : ಸತ್ತು, ಅಸತ್ತು ; ಚಿತ್ತು, ಅಚಿತ್ತು – ಎಂಬ ವಿಭಾಗದಂತೆ ಸುಖ, ದುಃಖ – ಎಂಬ ವಿಭಾಗವೂ ವ್ಯವಹಾರದಲ್ಲಿ ಸರಿಯೇ ಆಗಿರುತ್ತದೆ. ಆದರೆ ಪರಮಾರ್ಥವಾಗಿ ಆತ್ಮನು ಆನಂದವೇ, ಎಲ್ಲವೂ ಆನಂದವೇ – ಎಂಬ ಶ್ರುತ್ಯರ್ಥಕ್ಕೆ ಇದರಿಂದ ಯಾವ ಹಾನಿಯೂ ಇಲ್ಲ.

೩೨. ವ್ಯವಹಾರದಲ್ಲಿ ತೋರುವ ಸುಖವೂ ದುಃಖವೂ ಅಂತಃಕರಣದಲ್ಲಿ ಆಗುವ ವೃತ್ತಿಗಳು ; ನಿಜವಾಗಿರುವ ಆನಂದವು ಇವೆರಡನ್ನೂ ನೋಡುತ್ತಿರುವ ಸಾಕ್ಷಿಯಾದ ಆತ್ಮನು. ಸುಖದಲ್ಲಿಯೂ ದುಃಖದಲ್ಲಿಯೂ ಈ ಆನಂದವು ಅನುಗತವಾಗಿರುವದರಿಂದ ದುಃಖವೂ ಆನಂದಕ್ಕಿಂತ ಬೇರೆಯಲ್ಲ ಎಂದು ನಾವು ತಿಳಿಯಬೇಕು.

೩೩. ವ್ಯವಹಾರದ ಸುಖವು ಅಂತಃಕರಣದ ವೃತ್ತಿಯಾಗಿರುವದರಿಂದ ಅದು ಹುಟ್ಟುಹೊಂದುಗಳುಳ್ಳದ್ದಾಗಿರುತ್ತದೆ. ಅದು ಹಿಗ್ಗುತ್ತದೆ, ಕುಗ್ಗುತ್ತದೆ, ಕಾಣದೆ ಹೋಗುತ್ತದೆ. ಆದರೆ ಆತ್ಮನ ಆನಂದಸ್ವರೂಪವು ಎಂದಿಗೂ ಹೆಚ್ಚು ಕುಂದುಗಳಿಲ್ಲದೆ ಇರುತ್ತದೆ. ಅದರಲ್ಲಿ ವ್ಯವಹಾರದ ಸುಖದುಃಖಗಳೆರಡೂ ಕಲ್ಪಿತವಾಗಿರುತ್ತದೆ.

೩೪. ಸತ್ತು ಎಂದರೆ ಆತ್ಮನೇ ಆಗಿರುವಂತೆಯೂ ಚಿತ್ತು ಎಂದರೂ ಆತ್ಮನಾಗಿರುವಂತೆಯೂ ಆನಂದವೆಂದರೂ ಆತ್ಮನೇ. ಬೆಂಕಿಯ ಸುಡುವಿಕೆ, ಬೆಳಗುವಿಕೆ, ಬೇಯಿಸುವಿಕೆ – ಇವು ಹೇಗೆ ಬೇರೆಬೇರೆಯಲ್ಲವೋ ಹಾಗೆ ಆತ್ಮನ ಸಚ್ಚಿದಾನಂದಗಳೆಂಬಿವು ಬೇರೆಬೇರೆಯಲ್ಲ. ಆತ್ಮನಿಗೆ ಸತ್ತುಚಿತ್ತುಗಳಂತೆ ಆನಂದವೂ ಧರ್ಮವಲ್ಲ; ಅದು ಅವನ ಸ್ವರೂಪವೇ ಆಗಿರುತ್ತದೆ.

೩೫. ಆತ್ಮನು ತನ್ನ ಸಚ್ಚಿದ್ರೂಪಗಳನ್ನು ಕೊಡವಿಕೊಳ್ಳಲಾರದೆ ಇರುವಂತೆಯೇ ತನ್ನ ಆನಂದರೂಪವನ್ನೂ ಕೊಡವಿಕೊಳ್ಳಲಾರನು. ಆತ್ಮನಿಂದ ಬೇರ್ಪಡಿಸುವದಕ್ಕೆ ಆಗುವದು ಸತ್ತೂ ಅಲ್ಲ, ಚಿತ್ತೂ ಅಲ್ಲ, ಆನಂದವೂ ಅಲ್ಲ. ಆತ್ಮನನ್ನು ಬಿಟ್ಟು ಬರಿಯ ಸಚ್ಚಿದಾನಂದಗಳನ್ನು ಮನಸ್ಸಿನಿಂದ ಕಲ್ಪಿಸುವದಕ್ಕೂ ಬರುವದಿಲ್ಲ. ಆತ್ಮನಲ್ಲದ ಏತರಲ್ಲಿಯೂ ಇರವಿಲ್ಲ, ಅರಿವಿಲ್ಲ, ಆನಂದವೂ ಇಲ್ಲ.

೩೬. ಬೆಂಕಿಯಲ್ಲಿರುವ ಬಿಸಿ, ಬೆಳಕು, ಬೇಯಿಸುವ ಶಕ್ತಿ – ಇವು ಬೆಂಕಿಯ ಸ್ವರೂಪವೇ ಆಗಿರುವದರಿಂದ ಅದರ ಒಂದು ಭಾಗದಲ್ಲಿ ಬಿಸಿ, ಮತ್ತೊಂದು ಭಾಗದಲ್ಲಿ ಬೆಳಕು, ಇನ್ನೊಂದು ಭಾಗದಲ್ಲಿ ಪಾಕಶಕ್ತಿ – ಹೀಗೆ ವಿಂಗಡಿಸಿಕೊಂಡಿರುವದಿಲ್ಲ. ಇದರಂತೆ ಆತ್ಮನ ಸತ್ತೆಯೂ ಚಿತ್ತೂ ಆನಂದವೂ ಅವನ ಸ್ವರೂಪವೇ ಆಗಿರುವದರಿಂದ ಅವನ ಒಂದೊಂದು ಭಾಗದಲ್ಲಿರುವ ಧರ್ಮಗಳಾಗಿರುವದಿಲ್ಲ. ಆತ್ಮನು ನಿರ್ಭಾಗನಾದ್ದರಿಂದ ಸದ್ಘನನೂ ಚಿದ್ಘನನೂ ಆಗಿರುವಂತೆ ಆನಂದಘನನೂ ಆಗಿರುತ್ತಾನೆ.

೩೭. ಯಾವ ಜೀವನಿಗೂ ತನ್ನಲ್ಲಿ ಇರವು, ಅರಿವು – ಇವುಗಳಿಲ್ಲವೆಂದು ಕಲ್ಪಿಸುವದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಯಾವ ಜೀವನಿಗೂ ತನ್ನ ಸ್ವರೂಪದಲ್ಲಿ ಸುಖವಿಲ್ಲವೆಂದು ಕಲ್ಪಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ. ತಮಗೆ ಸುಖದುಃಖಗಳು ಬಂದುಹೋಗುತ್ತಿರುವವೆಂದು ಕಲ್ಪಿಸಿಕೊಳ್ಳುವವರು ಹಲವರು ಇರುತ್ತಾರೆ. ಆದರೆ ಅವರ ಸ್ವರೂಪವು ಆಗಮಾಪಾಯಿಗಳಾದ ಸುಖದುಃಖಗಳ ಸಂಪರ್ಕವಿಲ್ಲದ ಆನಂದಸ್ವರೂಪವೆಂದೇ ಆ ಅನುಭವದಿಂದಲೂ ಏರ್ಪಡುತ್ತದೆ.

೩೮. ಸತ್ತಲ್ಲದ ಚಿತ್ತನ್ನಾಗಲೀ, ಚಿತ್ತಲ್ಲದ ಸತ್ತನ್ನಾಗಲಿ ಹೇಗೆ ಕಲ್ಪಿಸುವದಕ್ಕೆ ಆಗುವದಿಲ್ಲವೋ ಹಾಗೆಯೇ ಸತ್, ಚಿತ್ ಸಂಬಂಧವಿಲ್ಲದ ಆನಂದವನ್ನಾಗಲೀ, ಆನಂದಸಂಬಂಧವಿಲ್ಲದ ಸತ್, ಚಿತ್ತುಗಳನ್ನಾಗಲಿ ಕಲ್ಪಿಸು

ವದಕ್ಕೆ ಆಗುವುದಿಲ್ಲ. ಎಲ್ಲಾ ಕಲ್ಪನೆಯನ್ನೂ ತಳ್ಳಿಹಾಕಿದರೂ ಸಚ್ಚಿದಾನಂದ ರೂಪವು ಉಳಿದುಕೊಳ್ಳುವದು.

೩೯. ಹೊರಗೆ ಹುಟ್ಟುವ ವಸ್ತುಗಳಲ್ಲಿ ಸತ್ತೆ (ಇರವು) ಅಥವಾ ಸ್ಫೂರ್ತಿ (ತೋರಿಕೆ) – ಇರುವದೆಂಬುದು ಹೇಗೆ ಕಲ್ಪನಾಮಾತ್ರವೋ ಹಾಗೆ ವಸ್ತುಗಳಲ್ಲಿ ಸುಖವು ಎಲ್ಲಿಯೋ ಹುದುಗಿಕೊಂಡಿರುವದೆಂದು ಬಗೆಯುವದೂ ಕಲ್ಪನಾ ಮಾತ್ರವು. ವಸ್ತುಗಳು ನಮ್ಮ ಆತ್ಮನ ಸತ್ತೆಯಿಂದ ಇರವನ್ನೂ ಚಿತ್ತ್ವದಿಂದ ತೋರಿಕೆಯನ್ನೂ ಕೂಡಿಕೊಂಡಿರುವಂತೆ ಹೇಗೆ ಕಾಣುವವೋ ಹಾಗೆಯೇ ಆತ್ಮನ ಆನಂದದ ಸಂಬಂಧದಿಂದಲೇ ಅವು ಸುಖಮಯವಾಗಿ ತೋರುತ್ತಿರುವವು. ಹುಟ್ಟಿದ ವಸ್ತುಗಳೆಲ್ಲ ಸಚ್ಚಿತ್ಸುಖಾಭಾಸವಾಗಿ ತೋರುವದಕ್ಕೆ ಅವು ಸಚ್ಚಿದಾನಂದ ವ್ಯಾಪ್ತವಾಗಿರುವದೇ ಕಾರಣವು, ಕೊನೆಯಲ್ಲಿ ನೋಡಿದರೆ ಎಲ್ಲಾ ವಸ್ತುಗಳೂ ನಿಜವಾಗಿ ಸಚ್ಚಿದಾನಂದಸ್ವರೂಪವೇ ಆಗಿರುವವು. ಸಚ್ಚಿದಾನಂದಸಾಗರನಾದ ಆತ್ಮನಲ್ಲಿ ಕಲ್ಪಿಸಿರುವ ದೃಶ್ಯಗಳು ಸಚ್ಚಿದಾನಂದರೂಪವಾದ ನೊರೆ, ತೆರೆ, ಗುಳ್ಳೆ – ಮುಂತಾದವುಗಳೇ ಹೊರತು ಅದನ್ನು ಈ ಆತ್ಮನಿಂದ ಬೇರ್ಪಡಿಸು ವದಕ್ಕೆ ಎಂದಿಗೂ ಆಗದು.

೪೦. ಜಗತ್ತೆಲ್ಲವೂ ಸಚ್ಚಿದಾನಂದಾತ್ಮನಿಂದಲೇ ಬಂದಿರುವದು, ಅವನಲ್ಲಿಯೇ ಇರುವದು, ಅವನಲ್ಲಿಯೇ ಲಯವಾಗುವದು, ಸಚ್ಚಿದಾನಂದವೇ ಆಗಿರುವದು. ಸಚ್ಚಿದಾನಂದಾತ್ಮನನ್ನು ಬಿಟ್ಟರೆ ಮತ್ತೆ ಯಾವದೂ ಇಲ್ಲವೇ ಇಲ್ಲ.

೪೧. ಯಾವದು ಪರಿಚ್ಛಿನ್ನವಾಗಿರುವದೋ ಅದರಲ್ಲಿ ನಾಶವು ಅಡಗಿಕೊಂಡಿರುವದು. ನಾವುಗಳು 'ದೇಶದಲ್ಲಿ ಅಥವಾ ಕಾಲದಲ್ಲಿ ಯಾವ ಯಾವದನ್ನು ಇಲ್ಲಿಯವರೆಗೆ ಇದೆ, ಬಳಿಕ ಇಲ್ಲ' ಎನ್ನುವೆವೋ ಅದೆಲ್ಲ ನಾಶವಾಗ ತಕ್ಕದ್ದು. ನಾಶವಾಗುವದೆಲ್ಲ ದುಃಖಕ್ಕೆ ಕಾರಣವಾದದ್ದು. ಆದರೆ ನಿಜವಾಗಿ ನೋಡಿದರೆ ಸಚ್ಚಿದಾನಂದರೂಪನಾದ ಆತ್ಮನಿಗೆ ಪರಿಚ್ಛೇದವಿಲ್ಲ. ಅವನಿಗೆ ದೇಶದ ಅಥವಾ ಕಾಲದ ಎಲ್ಲೆಕಟ್ಟು ಇರುವದಿಲ್ಲ. ಆದ್ದರಿಂದ ಅವನಿಗೆ ನಾಶವಿಲ್ಲ. ಒಂದು ವಸ್ತು ಮತ್ತೊಂದು ವಸ್ತುವಲ್ಲ ಎಂಬ ವಸ್ತುಪರಿಚ್ಛೇದಕ್ಕೆ ಆ ಎರಡು ವಸ್ತುಗಳೂ ದೇಶಕಾಲಗಳಿಗೆ ಕಟ್ಟುಬಿದ್ದಿರುವದೇ ಕಾರಣವು. ಆದ್ದರಿಂದ ಸಚ್ಚಿದಾನಂದಾತ್ಮನಿಗೆ ವಸ್ತುಪರಿಚ್ಛೇದವೂ ಇರುವದಿಲ್ಲ. ಆದ್ದರಿಂದ ಅವನಿಗೆ ನಾಶವಿಲ್ಲ, ದುಃಖಕ್ಕೆ ಕಾರಣವೂ ಇರುವದಿಲ್ಲ.

೪೨. ಅನಂತವಾದ ಆನಂದವೇ ಪರಮಾರ್ಥವು ; ಅದಕ್ಕೆ ಎರಡನೆಯದಾಗಿ ಸಾಂತವಾದ ವಸ್ತುವು ಯಾವದೊಂದೂ ಇರುವದೇ ಇಲ್ಲ. ಆದ್ದರಿಂದ ದುಃಖವೆಂಬುದು ದೃಷ್ಟಿದೋಷದಿಂದ ಆದ ಹುಸಿತೋರಿಕೆ ಮಾತ್ರ. ಪ್ರಚಂಡವಾದ ಬಿಸಿಲಿನಲ್ಲಿದ್ದು ಒಳಗೆ ಬಂದವನಿಗೆ ಕಣ್ಣು ಮಂಜಾಗಿರುವಂತೆ ಸಚ್ಚಿದಾನಂದಸೂರ್ಯನ ಪ್ರಕಾಶವನ್ನು ನೋಡಲಾರದ ಜೀವರಿಗೆ ಹುಸಿಯಾದ ದುಃಖವು ತೋರುತ್ತಿರುವದು.

೪೩. ಪರಮಾರ್ಥತತ್ತ್ವವು ತನ್ನ ರೂಪದಿಂದ ತಾನು ಮಾತಿಗಾಗಲಿ ಮನಸ್ಸಿಗಾಗಲಿ ವಿಷಯವಲ್ಲ. 'ಇದು ಏನು ?' ಎಂಬ ಪ್ರಶ್ನೆಗೆ ಮನಸ್ಸೂ ಮಾತೂ ಉತ್ತರವನ್ನು ಕೊಡಬಲ್ಲವು. ಇದು ಇಂಥದ್ದು ಎಂದು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ – ಇವುಗಳ ಮೂಲಕ ವರ್ಣಿಸಿ ವಿಷಯೀಕರಿಸುವದೇ ಮನಸ್ಸಿನ ಮತ್ತು ಮಾತಿನ ಕೆಲಸ. ಆದರೆ ಇದು ಎಂಬುದೆಲ್ಲವೂ ವಿಷಯವು, ಅನಾತ್ಮವು. ಅನಾತ್ಮವೆಲ್ಲವೂ ಪರಮಾತ್ಮನಲ್ಲಿ ಕಾಣುವ ಹುಸಿತೋರಿಕೆಯಾದ್ದರಿಂದ ಮನಸ್ಸಿಗೂ ಮಾತಿಗೂ ತೋರುವದೆಲ್ಲವೂ ಆ ಹುಸಿತೋರಿಕೆಯೇ, ಪರಮಾರ್ಥವಲ್ಲ.

೪೪. ಮನಸ್ಸು, ವಾಕ್ಕು – ಇವುಗಳು ಕೂಡ ನಿಜವಲ್ಲ. ಅವೂ ಪರಮಾರ್ಥವಾದ ಪರಮಾತ್ಮನಲ್ಲಿ ಕಾಣುತ್ತಿರುವ ಹುಸಿತೋರಿಕೆ. ಹುಸಿಯು ಹುಸಿಯನ್ನು ತೋರಿದರೇನು, ತೋರದಿದ್ದರೇನು ?

೪೫. ಪರಮಾರ್ಥವನ್ನು ನಾವು ಅರಿಯಬೇಕಾದರೆ ಅಥವಾ ಮತ್ತೊಬ್ಬರಿಗೆ ಅರುಹಬೇಕಾದರೆ ಇದಲ್ಲ , ಇದಲ್ಲ – ಎಂದು ವೇದಾಂತಿಗಳ ಮಾರ್ಗವನ್ನೇ ಅವಲಂಬಿಸಬೇಕಾಗುವದು. ಎಲ್ಲಾ ಹುಸಿತೋರಿಕೆಯ ವಿಕಲ್ಪಗಳನ್ನೂ ಅಲ್ಲಗಳೆದರೆ ಅದಕ್ಕೆ ಆಧಾರವಾಗಿರುವ ಪರಮಾತ್ಮವಸ್ತುವೇ ಉಳಿದುಕೊಳ್ಳುವದು. ಅದು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಇಲ್ಲವೆಂದಾಗಲಿ ಇದೆಯೆಂದಾಗಲಿ ಎನ್ನುವದಕ್ಕೆ ಬರುವದಿಲ್ಲ.

೪೬. ಪರಮಾರ್ಥತತ್ತ್ವವು ಇಂಥದ್ದು ಎಂದು ಹೇಳುವದಕ್ಕೆ ಬರುವದಲ್ಲವೆಂದಮಾತ್ರಕ್ಕೆ ಅದು ಸೊನ್ನೆ ಎಂದು ತಿಳಿಯಬಾರದು ; ಅದು ನಮ್ಮ ನಿತ್ಯಜೀವನಕ್ಕೆ ಸಂಬಂಧಿಸಿಲ್ಲವೆಂದೂ ತಿಳಿಯಬಾರದು. ಜಗತ್ತೆಲ್ಲವೂ ಅದರ ಮಹಿಮೆಯು ; ಜಗತ್ತೆಲ್ಲವೂ ಅದರ ಆಧಾರದಿಂದಲೇ ಇರುವದು.

ಅದಕ್ಕೆ ಹೋಲಿಸಿದರೆ ಜಗತ್ತೇ ಅಸತ್ತು, ಅದು ಸತ್ತು; ಜಗತ್ತೇ ಅಚಿತ್ತು, ಅದು ಚಿತ್ತು ; ಜಗತ್ತೇ ದುಃಖವು, ಅದು ಆನಂದವು. ಅದು ಜಗತ್ತೆಲ್ಲವನ್ನೂ ಆಳುತ್ತಿರುವ ಈಶ್ವರನು.

೪೭. ಈಶ್ವರನು ಸಚ್ಚಿದಾನಂದಸ್ವರೂಪನು, ಸರ್ವಜ್ಞನು, ಸರ್ವಶಕ್ತನು, ನಿತ್ಯಶುದ್ಧಮುಕ್ತಸ್ವಭಾವದವನು, ನಮ್ಮೆಲ್ಲರಿಗೂ ಆತ್ಮನು– ಎಂದು ಶಾಸ್ತ್ರಗಳಲ್ಲಿ ಹೇಳಿರುವದು ಚಿತ್ತಶುದ್ಧಿಯುಳ್ಳ ಮಹರ್ಷಿಗಳಿಗೆ ಆತನು ತೋರುವ ರೂಪದಿಂದ , ಅವನು ಇರುವ ಪರಮಾರ್ಥಸ್ವರೂಪದಿಂದಲ್ಲ , ಅವನ ಪರಮಾರ್ಥಸ್ವರೂಪವು ವಾಙ್ಮನಸ್ಸುಗಳ ಗೋಚರವನ್ನು ಮೀರಿರುವದು.

೪೮. ಪರಮೇಶ್ವರನಿಗೆ ಅನಂತಕಲ್ಯಾಣಗುಣಗಳೂ ಅನಂತ ಆಕಾರಗಳೂ ಇರುತ್ತವೆ. ಭಕ್ತರಿಗೆ ಅನುಗ್ರಹವನ್ನು ಮಾಡುವದಕ್ಕಾಗಿ ಅವನು ಯಾವಾಗಲೆಂದರೆ ಆಗ, ಎಲ್ಲೆಂದರೆ ಅಲ್ಲಿ , ಯಾವ ರೂಪವನ್ನಾದರೂ ಧರಿಸಬಲ್ಲನು. ಆದರೆ ಆತನ ಪರಮಾರ್ಥರೂಪವು ಎಲ್ಲಾ ಗುಣಗಳನ್ನೂ ಎಲ್ಲಾ ಆಕಾರಗಳನ್ನೂ ಎಲ್ಲಾ ನಾಮಗಳನ್ನೂ ಮೀರಿರುವದೆಂದು ಶಾಸ್ತ್ರಗಳು ಹೇಳುವವು.

೪೯. ಈ ಇಡಿಯ ಜಗತ್ತೇ ಪರಮೇಶ್ವರನ ಒಂದು ದೊಡ್ಡ ವಿಭೂತಿಯು. ಈ ಬ್ರಹ್ಮಾಂಡವೆಲ್ಲವೂ ಆ ಪರಮೇಶ್ವರನ ತನುವೆಂದು ಚಿಂತಿಸುತ್ತಿರುವವರಿಗೆ ನಿತ್ಯಾನಂದವು ಕೈವಶವಾಗಿರುವದು. ಅವರ ಹೃದಯದಲ್ಲಿ ಆ ಪರಮೇಶ್ವರನು ನೆಲೆಸಿರುವನು. ಅವರಿಗೂ ಆತನಿಗೂ ಯಾವ ಭೇದವೂ ಇರುವದೇ ಇಲ್ಲ.

೫೦. ನಮ್ಮ ಹೃದಯದಲ್ಲಿಯೇ ನಮ್ಮ ಆತ್ಮನಾಗಿದ್ದುಕೊಂಡಿರುವ ಆ ಭಗವಂತನ ಕಡೆಗೆ ದೃಷ್ಟಿಯನ್ನು ಹಾಕದಿರುವಾಗ ಜಗತ್ತು ವಿವಿಧವಾಗಿ ತೋರುತ್ತಿರುವದು. ಗಿರಿ, ನದಿ, ಸಮುದ್ರ, ಅರಣ್ಯ, ಪಟ್ಟಣ, ನಗರ, ಗ್ರಾಮ – ಎಂದು ಮುಂತಾಗಿ ವಿಭಕ್ತವಾಗಿ ಕಾಣುತ್ತಿರುವದು. ಆದರೆ ಆಗಲೂ ಆಯಾ ದೃಶ್ಯಗಳಲ್ಲಿ ಸುಂದರವಾದ, ಅದ್ಭುತವಾದ, ಬಲಯುತವಾದ, ಕಾಂತಿಯುತ ವಾದ, ಉತ್ಸಾಹಜನಕವಾದ, ಜೀವರುಗಳಿಗೆ ನಿತ್ಯೋಪಕಾರಕವಾದ, ವಿಭೂತಿಗಳು ಮನಸ್ಸನ್ನು ಸೆಳೆಯುತ್ತಲೇ ಇರುವವು. ಭಗವಂತನ ಆ ವಿಭೂತಿಗಳು ಅಲ್ಲಲ್ಲಿ ಗೋಚರವಾಗದಿದ್ದರೆ ಜೀವನು ಹೇಗೆ ತನ್ನ ಪ್ರಾಣವನ್ನು ಹಿಡಿದುಕೊಂಡಿರುತ್ತಿದ್ದನು ?

೫೧. ನಮ್ಮ ಸುತ್ತಲೂ ಇರುವ ಮರಗಿಡಬಳ್ಳಿಗಳೂ ಪ್ರಾಣಿಗಳೂ ಮನುಷ್ಯರೂ ನಮಗೆ ಆಗಾಗ್ಗೆ ಹರ್ಷವನ್ನುಂಟುಮಾಡುತ್ತಿರುವವು, ಉತ್ಸಾಹ ವನ್ನು ಕೊಡುತ್ತಿರುವವು. ಅವೂ ಆ ಸಚ್ಚಿದಾನಂದಪರಮಾತ್ಮನ ವಿಭೂತಿಗಳು.

೫೨. ಸಚ್ಚಿದಾನಂದಪರಮಾತ್ಮನೇ ಜಗತ್ತನ್ನು ಸೃಷ್ಟಿಸಿ ಅದರೊಳಗೆ ಜೀವರೂಪದಿಂದ ಹೊಕ್ಕಿರುವನು. ಅವನೇ ನನ್ನ, ನಿಮ್ಮ ಮತ್ತೆಲ್ಲರ ಆತ್ಮನು. ಆತನ ಸ್ವರೂಪದ ಚಿಂತನೆ, ವಿಚಾರ, ಪಠನ, ಪಾಠನ – ಇವೇ ಮನುಷ್ಯನ ಏಳಿಗೆಗೆ ಕಾರಣವಾದದ್ದು.

೫೩. ಜೀವನು ಪರಮಾರ್ಥರೂಪದಲ್ಲಿ ಪರಮಾತ್ಮನೇ ಆಗಿರುತ್ತಾನಾ ದರೂ ಈಗ ಅವನು ತಿಳಿದುಕೊಂಡಿರುವ ರೂಪದಿಂದ ಅವನು ಸಂಸಾರಿಯಾಗಿ ರುವನು. ಸಂಸಾರವೆಂದರೆ ಒಳ್ಳೆಯ ಕೆಟ್ಟ ಕರ್ಮಗಳನ್ನು ಮಾಡುವದು, ಅವುಗಳ ಫಲವನ್ನು ಇಲ್ಲಿಯೋ ಲೋಕಾಂತರದಲ್ಲಿಯೋ ಅಥವಾ ಜನ್ಮಾಂತರದಲ್ಲಿಯೋ ಅನುಭವಿಸುವದು. ಜೀವನ ತೋರಿಕೆಯ ಸ್ವರೂಪವನ್ನು ಚಿಂತಿಸಬಾರದು : ಅವನ ಪರಮಾರ್ಥರೂಪವನ್ನೇ ಚಿಂತಿಸುತ್ತಿರಬೇಕು. ಅದರಿಂದ ಉತ್ತಮಫಲವು ಪ್ರಾಪ್ತಿಯಾಗುವದು.

೫೪. ನಿಮ್ಮ ಭಾವನೆಯೇ ಈ ಸಂಸಾರಬಂಧಕ್ಕೆ ಕಾರಣವಾಗಿರುವದು ; ನಿಮ್ಮ ಭಾವನೆಯೇ ಈ ಸಂಸಾರದಿಂದ ಮುಕ್ತರಾಗುವದಕ್ಕೆ ಕಾರಣವಾಗುವದು. ನಿಮ್ಮ ಭಾವನೆ ಹೇಗಿದ್ದರೆ ಅದೇ ನೀವಾಗಿಬಿಡುವಿರಿ. ಈ ಸಂಸಾರದಲ್ಲಿ ಭಾವನೆಯಂತೆ ಫಲವಾಗುವದೆಂಬುದನ್ನು ದೃಢವಾಗಿ ನಂಬಿರಿ. ಪರಮಾತ್ಮನ ಸಚ್ಚಿದಾನಂದಸ್ವರೂಪವನ್ನು ನಿತ್ಯವೂ ಪರಿಭಾವಿಸುತ್ತಿರಿ, ನೀವೂ ಸಚ್ಚಿದಾನಂದಸ್ವರೂಪರೇ ಆಗಿಬಿಡುವಿರಿ.

೫೫. ಈ ಲೋಕದಲ್ಲಿ ನಿಮ್ಮ ಸುತ್ತಲೂ ಇರುವ ಜೀವರನ್ನು ನೋಡಿರಿ ; ಅವರು ತಮ್ಮ ಭಾವನೆಯಿಂದ ಹೇಗೆ ಬಗೆಬಗೆಯಿಂದ ಸುಖದುಃಖಗಳನ್ನು ಅನುಭವಿಸುತ್ತಿದ್ದಾರೆಂಬುದು ನಿಮಗೇ ಮನದಟ್ಟಾಗುವದು. ಕೆಲವರು ಹಣದ ಭಾವನೆಯಿಂದ ಹಣವಂತರಾಗಿರುತ್ತಾರೆ. ಕೆಲವರು ವಸ್ತ್ರಾಭರಣಗಳ ಭಾವನೆ ಯಿಂದ ವಿವಿಧವಸ್ತ್ರಾಭರಣಾಲಂಕೃತರಾಗಿರುತ್ತಾರೆ. ಕೆಲವರು ಅಧಿಕಾರದ ಭಾವನೆಯಿಂದ ಅಧಿಕಾರಿಗಳಾಗಿರುತ್ತಾರೆ. ಹೀಗೆಯೇ ಆಯುಸ್ಸು, ಆರೋಗ್ಯ, ಬಲ, ಬುದ್ಧಿ – ಮುಂತಾದ ಭಾವನೆಗಳಿಂದ ಆಯುರಾದಿಗಳನ್ನು ಸಂಪಾದಿಸಿ

ಕೊಂಡು ಕೆಲವರು ವ್ಯವಹರಿಸುತ್ತಿದಾರೆ. ಇದರಂತೆಯೇ ದುಃಖಕ್ಕೂ ಅವರವರ ಭಾವನೆಯೇ ಕಾರಣವಾಗಿರುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು. ಹಿಂಸೆ, ಸುಳ್ಳು, ಮೋಸ, ಕಳವು, ರಾಗ, ದ್ವೇಷ – ಮುಂತಾದವುಗಳ ಭಾವನೆಯಿಂದಲೇ ಜನರು ಆಯಾ ಸ್ಥಾನವನ್ನು ಪಡೆದು ದುಃಖಿಸುತ್ತಿರುತ್ತಾರೆ.

೫೬. ಎಲೆ ಜೀವ, 'ನಾನು ದುಃಖಿಯು, ಕರ್ತೃಭೋಕ್ತೃರೂಪನು, ಸಂಸಾರಿಯು, ದೀನನು, ಬಡವನು, ದುರ್ಬಲನು, ಅಜ್ಞನು'– ಎಂಬೀ ತೆರದ ಭಾವನೆಯನ್ನು ಮಾಡಿಮಾಡಿ ನೀನು ಈ ಸ್ಥಿತಿಗೆ ಇಳಿದಿರುವೆ. ಈಗಲಾದರೂ ಶಾಸ್ತ್ರಾಚಾರ್ಯರ ಉಪದೇಶದಲ್ಲಿ ವಿಶ್ವಾಸವಿಡು. ನೀನು ನಿತ್ಯಪರಮಾತ್ಮನ ಅಂಶವೇ. ಆ ಪರಮಾತ್ಮನ ದೃಷ್ಟಿಯಲ್ಲಿ ನೀನು ಯಾವಾಗಲೂ ಸಚ್ಚಿದಾನಂದನೇ ಆಗಿರುವೆ. ಪರಮಾತ್ಮನು ನಿತ್ಯಶುದ್ದನು, ಹಾಗೆಯೇ ನೀನೂ ನಿತ್ಯಶುದ್ಧನು. ಪರಮಾತ್ಮನು ನಿತ್ಯಬುದ್ಧನು, ಹಾಗೆಯೇ ನೀನೂ ನಿತ್ಯಬುದ್ದನು ; ಪರಮಾತ್ಮನು ನಿತ್ಯಮುಕ್ತನು, ಹಾಗೆಯೇ ನೀನೂ ನಿತ್ಯಮುಕ್ತನು. ಪರಮಾತ್ಮನು ಹೇಗೆ ಅನಂತನೋ ಆನಂದಸ್ವರೂಪನೋ ಹಾಗೆಯೇ ನೀನೂ ಅನಂತಾನಂದಸ್ವರೂಪ ನಾಗಿರುವೆ. ಇದನ್ನು ಯಾವಾಗಲೂ ಸ್ಮರಿಸುತ್ತಿರು.

೫೭. ಈ ಸಂಸಾರವೆಂಬುದು ಕಾಮ್ಯಕವನದಂತೆ ಇರುವದು. ಇದರಲ್ಲಿ ಯಾವದನ್ನು ನೀವು ಬಲವಾಗಿ ಕಾಮಿಸುವರೋ, ಯಾವದನ್ನು ಬಲವಾಗಿ ಭಾವಿಸುತ್ತಿರುವಿರೋ, ಅದರಂತೆಯೇ ನಿಮ್ಮ ಸಂನಿವೇಶಗಳು ಮಾರ್ಪಡಿಸಿಕೊಳ್ಳು ವವು. ನಿಮ್ಮ ಭಾವನೆಯೇ ನಿಮಗೆ ಬಡತನವೂ ರೋಗವೂ ಅವ್ಯವಸ್ಥೆಯೂ ದುಃಖವೂ ಕಾಣಿಸುವಂತೆ ಮಾಡಿರುವದು. ನಿಮ್ಮ ಭಾವನೆಯೇ ಮತ್ತೆ ಐಶ್ವರ್ಯ, ಆರೋಗ್ಯ, ವ್ಯವಸ್ಥೆ, ಶಾಶ್ವತಸುಖ–– ಇವುಗಳನ್ನು ನಿಮ್ಮ ಮುಂದಿರಿಸಬಲ್ಲದು. ಆ ಸದ್ಭಾವನೆಯನ್ನೇಕೆ ಪ್ರಾರಂಭಿಸಿಬಿಡಬಾರದು ?

೫೮. ಸದ್ಭಾವನೆಯಿಂದ ಪರಮಾರ್ಥವಾಗಿಲ್ಲದ ವಸ್ತುಗಳು ಹೊಸದಾಗಿ ಉಂಟಾಗುವದಿಲ್ಲ, ನಿಜವಾಗಿ ಇರುವದೆಲ್ಲವೂ ಸಚ್ಚಿದಾನಂದವಸ್ತುವೇ. ಆ ಸಚ್ಚಿದಾನಂದಪರಮಾತ್ಮನೇ ತನ್ನ ಲೀಲೆಯಿಂದ ಈ ಆನಂದಮಯವಾದ ಜಗತ್ತಿನ ರೂಪದಲ್ಲಿ ತೋರುತ್ತಿರುವನು. ಅಜ್ಞಾನದಿಂದ ನಮಗೆ ಈ ಮಾಯಾಮಯವಾದ ಜಗತ್ತು ತೋರುತ್ತಿದೆ ; ಇದರಲ್ಲಿ ಬಗೆಬಗೆಯ ಅನರ್ಥಗಳು ಕಾಣಿಸುತ್ತಿವೆ. ''ಇದೊಂದೂ ಪರಮಾರ್ಥವಲ್ಲ, ನಾನು

ಪರಮಾರ್ಥವಾಗಿ ಆ ಸಚ್ಚಿದಾನಂದಪರಮಾತ್ಮನೇ, ಈ ಜಗತ್ತೆಲ್ಲವೂ ನನ್ನ ಮಹಿಮೆಯೇ'' – ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಅಷ್ಟೇ.

೫೯. ಶಾಸ್ತ್ರದೃಷ್ಟಿಯೇ ಭಗವಂತನ ದೃಷ್ಟಿ ; ಭಗವಂತನ ದೃಷ್ಟಿಯೇ ಭಕ್ತರಾದ ಮಹಾತ್ಮರ ದೃಷ್ಟಿ. ಶಾಸ್ತ್ರದೃಷ್ಟಿಯೇ ಪರಮಾರ್ಥದೃಷ್ಟಿ. ಶಾಸ್ತ್ರವನ್ನು ಬಿಟ್ಟ ಸ್ವಾಭಾವಿಕವಾದ ಲೋಕದೃಷ್ಟಿಯೇ ಅಜ್ಞರಾದವರ ದೃಷ್ಟಿ ; ಅಜ್ಞರ ದೃಷ್ಟಿ ಎಂದರೂ ಒಂದೇ, ಅಭಕ್ತರ ದೃಷ್ಟಿಯೆಂದರೂ ಒಂದೇ. ಲೋಕದೃಷ್ಟಿಯು ಮಿಥ್ಯಾದೃಷ್ಟಿ. ಲೋಕದೃಷ್ಟಿಯಿಂದ ಹೇಗೇ ತೋರಲಿ ಶಾಸ್ತ್ರದೃಷ್ಟಿಯಿಂದ ನಾವೆಲ್ಲರೂ ಪರಮಾತ್ಮನ ಅಂಶಭೂತರು. ಇದನ್ನು ಎಂದಿಗೂ ಮರೆಯದೆ ಇರಬೇಕು.

೬೦. ನಮಗೆ ಎಷ್ಟೇ ಕಷ್ಟಗಳು ಒದಗಿರಲಿ, ನಾವು ಎಷ್ಟೇ ಅಶಕ್ತರಾಗಿ ಕಾಣುತ್ತಿರಲಿ, ನಮ್ಮ ಶರೀರದಲ್ಲಿ ಎಷ್ಟೇ ಅನಾರೋಗ್ಯವೂ ದೌರ್ಬಲ್ಯವೂ ಕಾಣುತ್ತಿರಲಿ, ಇದೆಲ್ಲ ಬರಿಯ ಲೋಕದೃಷ್ಟಿಯೇ. ಪರಮಾರ್ಥದೃಷ್ಟಿಯಲ್ಲಿ ನಮಗೆ ಕಷ್ಟವಿಲ್ಲ, ಅಶಕ್ತಿಯಿಲ್ಲ, ಅನಾರೋಗ್ಯವಿಲ್ಲ, ದೌರ್ಬಲ್ಯವಿಲ್ಲ, ನಾವೆಲ್ಲರೂ ನಿತ್ಯಶುದ್ಧಬುದ್ಧಮುಕ್ತಸ್ವರೂಪರೇ ಎಂಬುದನ್ನು ಸದಾ ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು.

೬೧. ಭಗವಂತನ ದೃಷ್ಟಿಯಲ್ಲಿ ಯಾರೊಬ್ಬರಿಗೂ ಕೊರತೆಯಾಗಬೇಕೆಂಬುದಿಲ್ಲ , ಯಾರೊಬ್ಬರಿಗೂ ಸಂಕಟವು ಬಂದೊದಗಲೆಂಬುದು ಇಲ್ಲ, ಯಾರೊಬ್ಬರಿಗೂ ಬಡತನವಾಗಲಿ, ಅನಾರೋಗ್ಯವಾಗಲಿ, ರೋಗರುಜಿನಗಳಾಗಲಿ ಮನಸ್ಸಿನ ಕ್ಷೋಭೆಯಾಗಲಿ, ಅಜ್ಞಾನದ ಕಾಟವಾಗಲಿ ಇರಬೇಕೆಂದಿಲ್ಲ, ಭಗವಂತನ ದೃಷ್ಟಿಯಲ್ಲಿ ಇವು ಯಾವವೂ ಇರುವದೇ ಇಲ್ಲ.

೬೨. ಸಕ್ಕರೆಯ ಪಾಕದಿಂದ ಮಾಡಿದ ಪದಾರ್ಥಗಳೆಲ್ಲವೂ ಸಕ್ಕರೆಯೇ, ಸಿಹಿಯೇ, ಆಗಿರುವವು. ಇದರಂತೆ ಸಚ್ಚಿದಾನಂದಪರಮೇಶ್ವರನ ಸಂಕಲ್ಪದಿಂದ ಸೃಷ್ಟಿಯಾಗಿರುವದೆಲ್ಲವೂ ಸಚ್ಚಿದಾನಂದರೂಪವಾಗಿಯೇ ಇರುತ್ತದೆ. ಅತ್ಯಂತ ಮಧುರಸ್ವಭಾವನಾದ ಭಗವಂತನು ತನ್ನ ಆನಂದಸ್ವರೂಪ ದಿಂದಲೇ ಮಾಡಿರುವ ಸಕ್ಕರೆಯ ಬೊಂಬೆಗಳು ನಾವು. ಅವನು ನಮ್ಮ ಕೈಯಲ್ಲಿಟ್ಟಿರುವ ಸಕ್ಕರೆಯ ಮಿಠಾಯಿಯಂತೆ ಅತ್ಯಂತ ಮಧುರಸ್ವಭಾವನಾಗಿರುತ್ತಾನೆ. ಈ

ಅಸಾರವೆಂದು ಕಾಣುವ ಸಂಸಾರದಲ್ಲಿ ಸಾರವೆಂದರೆ ಯಾವದು? ಸಚ್ಚಿದಾನಂದ ಸ್ವರೂಪನಾದ ಭಗವಂತನ ಸೇವೆಯೇ.

೬೩. ಪ್ರತಿಯೊಬ್ಬ ಜೀವನೂ – ಅವನು ಲೋಕದೃಷ್ಟಿಯಿಂದ ಎಷ್ಟೇ ಅಲ್ಪನಾಗಿ ಕಾಣಿಸುತ್ತಿರಲಿ, ಪರಮಾರ್ಥವಾಗಿ ಪರಮಾತ್ಮನ ಪೂರ್ಣತೆಯನ್ನೇ ಹೊಂದಿರುತ್ತಾನೆ. ಪರಮಾತ್ಮನ ಪೂರ್ಣತ್ವವೆಂಬುದು ಅತ್ಯಂತ ಅಲ್ಪವಾದ ಬಿಂದುವಿರುವ ಕಡೆಯಲ್ಲಿಯೂ ಮುಕ್ಕಿಲ್ಲದೆ ಇರುತ್ತದೆ. ಅಲ್ಪತ್ವವು ಲೋಕ ದೃಷ್ಟಿಯಿಂದ ಕಾಣಿಸುತ್ತಿರುತ್ತದೆ ; ವಸ್ತುವಿನ ಪರಮಾರ್ಥಸ್ವರೂಪದಲ್ಲಿಲ್ಲ.

೬೪. ಲೋಕದೃಷ್ಟಿಯಲ್ಲಿರುವ ಕೊರತೆ ಯಾವದು ? ವಸ್ತುವಿನ ಕಡೆಗೆ ನೋಡುವದಕ್ಕಿಂತ ಉಪಾಧಿಯ ಕಡೆಗೇ ಹೆಚ್ಚಾಗಿ ನೋಡುತ್ತಿರುವದು. ಒಂದು ಗೂಡಿಸಲು ಹೊರಕ್ಕೆ ನೋಡಿದರೆ ಮಣ್ಣಿನ ಗೋಡೆ, ಹುಲ್ಲಿನ ಹೊದಿಕೆ, ಕುರುಚಲು ಕಂಬ – ಇವುಗಳು ಕಾಣಿಸುತ್ತಿದ್ದ ಮಾತ್ರಕ್ಕೆ ಅದರೊಳಗಿರುವವರು ಕೀಳರೆಂದೂ ತುಚ್ಛರೆಂದೂ ಅವರಿಗೆ ಯಾವ ಸಂಸ್ಕೃತಿಯೂ ಇಲ್ಲವೆಂದೂ ತಿಳಿಯುವದು ಸರಿಯಲ್ಲ. ಆದರೂ ಜನರ ಬಟ್ಟೆ, ಶರೀರ, ರೂಪು, ಮೈಕಟ್ಟು – ಮುಂತಾದವುಗಳು ಉತ್ತಮವಾಗಿಲ್ಲದಿದ್ದರೆ ಅವರ ನಿಜವಾದ ಸ್ವರೂಪವೂ ಕೀಳಾಗಿರಬೇಕೆಂದು ಕಲ್ಪಿಸುತ್ತಿರುವರು. ಅಮೃತವನ್ನು ಮಣ್ಣಿನ ಕುಡಿಕೆಯಲ್ಲಿಟ್ಟಿದ್ದರೆ ವಿಷವಾದೀತೆ ?

೬೫. ಒಂದು ಅಮೃತದ ಕುಡಿಕೆಯನ್ನು ನೋಡುವಾಗ ಅಮೃತದ ಗುಣವು ಮಣ್ಣಿನ ಕುಡಿಕೆಯಲ್ಲಿದ್ದೀತೆಂದಾಗಲಿ ಕುಡಿಕೆಯಲ್ಲಿರುವ ಕಡಿಮೆಯ ಬೆಲೆಯೇ ಅಮೃತಕ್ಕೂ ಇರಬೇಕೆಂದಾಗಲಿ ಯಾವ ವಿವೇಕಿಗಳೂ ಎಣಿಸುವದಿಲ್ಲ. ಹೀಗಿರುವಲ್ಲಿ ಶರೀರದಲ್ಲಿರುವ ಕೆಲವು ದೋಷಗಳು ಆತ್ಮನಲ್ಲಿರಬೇಕೆಂದಾಗಲಿ, ಆತ್ಮನಲ್ಲಿರುವ ಗುಣಗಳು ಶರೀರಕ್ಕೆ ಬರುವವೆಂದಾಗಲಿ ಎಣಿಸುವದಕ್ಕೆ ಕಾರಣವೇನು ?

೬೬. ಮಾಣಿಕ್ಯವನ್ನು ಮಸಿಯ ಅರಿವೆಯಲ್ಲಿ ಕಟ್ಟಿಟ್ಟಿದ್ದರೆ, ಮಾಣಿಕ್ಯವನ್ನು ಅರಿವೆಯೆಂದಾಗಲಿ ಅರಿವೆಯನ್ನು ಮಾಣಿಕ್ಯವೆಂದಾಗಲಿ ಯಾರೂ ಬಗೆಯುವದಿಲ್ಲ. ಆತ್ಮನು ಶರೀರಾದಿಗಳ ಮೂಲಕ ತಿಳಿದುಬರುವಂತೆ ಅವು ಉಪಾಧಿಗಳಾಗಿದ್ದಮಾತ್ರದಿಂದ ಶರೀರಾದಿಗಳೇ ಆತ್ಮನೆಂದೂ ಆತ್ಮನೇ ಶರೀರಾದಿಗಳೆಂದೂ ತಿಳಿಯುವದು ಎಂಥ ದಡ್ಡತನವಾಯಿತು !

೬೭. ಶರೀರ, ಪ್ರಾಣ, ಮನಸ್ಸು, ಬುದ್ಧಿ , ಅಹಂಕಾರ – ಇವುಗಳಲ್ಲಿ ಯಾವ ಹೆಚ್ಚುಕಡಿಮೆ ತೋರಿಕೊಳ್ಳಲಿ, ಅದರ ಕಡೆಗೆ ಲಕ್ಷ್ಯವನ್ನು ಹಾಕಬೇಡಿರಿ. ನಿಮ್ಮೊಳಗಿರುವ ನಿಮ್ಮ ತಿರುಳಾದ ಆತ್ಮನ ಸ್ವರೂಪವನ್ನೇ ಚಿಂತಿಸುತ್ತಿರಿ.

೬೮. ಪರಮಾತ್ಮನಿಂದ ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥಿವಿ– ಎಂಬ ಐದು ಸೂಕ್ಷ್ಮಭೂತಗಳು ಉಂಟಾಗಿರುವವು ; ಆ ಸೂಕ್ಷ್ಮಭೂತಗಳು ಒಂದರಲ್ಲೊಂದು ಬೆರೆತು ಪಂಚಮಹಾಭೂತಗಳಾಗಿರುವವು ; ಆ ಮಹಾಭೂತ ಗಳಿಂದ ಭೌತಿಕವಾದ ಬೇರೆಬೇರೆಯ ವಸ್ತುಗಳು ಕಾಣಿಸುತ್ತಿರುವವು – ಎಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಹೊರಗಿನ ಪದಾರ್ಥಗಳು – ಅವು ಸಚೇತನ ವಾಗಿರಲಿ ಅಚೇತನವಾಗಿರಲಿ, ಸ್ಥಾವರವಾಗಿರಲಿ ಜಂಗಮವಾಗಿರಲಿ – ಎಲ್ಲವೂ ಪರಂಪರೆಯಿಂದ ಪರಮಾತ್ಮನಿಂದ ಆದವುಗಳೇ. ನಾವೂ ಜಂಗಮ ಪ್ರಾಣಿಗಳೊಳಗೇ ಸೇರಿರುವದರಿಂದ ನಮ್ಮ ಶರೀರಾದಿಗಳೂ ಪರಮಾತ್ಮನಿಂದ ಬಂದವುಗಳೇ ಎಂದಾಯಿತು.

೬೯. ಹೊರಗಿನ ವಸ್ತುಗಳನ್ನು ಆಧಿಭೌತಿಕವೆಂದೂ ನಮ್ಮೊಳಗಿನ ಶರೀರಾದಿಗಳನ್ನು ಆಧ್ಯಾತ್ಮಿಕವೆಂದೂ ಕರೆಯುವದು ಶಾಸ್ತ್ರಕಾರರ ಪದ್ಧತಿ. ಆದರೆ ಇವೆರಡೂ ಭೌತಿಕವೇ, ಎರಡೂ ಪರಂಪರೆಯಿಂದ ಪರಮಾತ್ಮನಿಂದ ಬಂದವುಗಳೇ ಆಗಿರುತ್ತವೆ.

೭೦. ಹೊರಗಿನ ಮಣ್ಣು , ಕಲ್ಲು , ಮರಳು, ಸುಣ್ಣ – ಮುಂತಾದವು ಗಳಿಂದ ನಮ್ಮ ಮನೆಯಾಗಿರುತ್ತದೆ. ಹೊರಗೆ ಬೆಳೆದ ಹತ್ತಿ , ರೇಷ್ಮೆ – ಮುಂತಾದವುಗಳಿಂದ ನಮ್ಮ ಉಡುಪು ಆಗಿರುತ್ತದೆ. ಹೊರಗಿನ ಸೊಪ್ಪು, ತರಕಾರಿ, ಧಾನ್ಯ ಮುಂತಾದ ಆಹಾರವನ್ನು ತಿಂದಿದ್ದರಿಂದ ನಮ್ಮ ಶರೀರದ ರಕ್ತಮಾಂಸಾದಿಗಳು ಆಗಿರುತ್ತವೆ. ಆದರೂ ಹೊರಗಿನ ಕಲ್ಲು , ಮಣ್ಣು ಮುಂತಾದವಕ್ಕಿಂತ ನಮ್ಮ ಮನೆಯಲ್ಲಿನ ಹೊರಗಿನ ಮರಗಿಡಗಳು, ಧಾನ್ಯಗಳು, ಮುಂತಾದವುಗಳಿಗಿಂತ ನಮ್ಮ ಶರೀರದಲ್ಲಿ ನಮಗೆ ಹೆಚ್ಚಿನ ಅಭಿಮಾನವಿರುತ್ತದೆ. ಹೊರಗಿನ ವಸ್ತುಗಳು ನಮಗೆ ದೂರವೆಂತಲೂ ನಮ್ಮ ಮೈಯ ಕೈಕಾಲು ಮುಂತಾದವುಗಳು ನಮಗೆ ಹತ್ತಿರವಿರುವವೆಂತಲೂ ಅವೇ ನಾವು ಅಥವಾ ನಮ್ಮವು ಎಂತಲೂ ಭಾವಿಸುವೆವು. ಇದು ಬರಿಯ ಮೋಹವಲ್ಲದೆ ಮತ್ತೇನು ?

೭೧. ಎಲೆಯಲ್ಲಿ ಬಡಿಸಿರುವ ಅನ್ನವು ಎಲೆಯ ಮೇಲಿರುವವರೆಗೆ ಅನಾತ್ಮವು, ಅದು ನಮ್ಮ ಶರೀರಕ್ಕೆ ಸೇರಿದ್ದಲ್ಲ , ನಮಗಿಂತ ಬೇರೆಯಾದ ಪದಾರ್ಥ – ಎಂದುಕೊಂಡಿರುವೆವು. ಆದರೆ ಅದನ್ನು ಉಂಡ ಬಳಿಕ ಅದನ್ನೂ ಸೇರಿಸಿಕೊಂಡು 'ನಾನು' ಎಂದು ವ್ಯವಹರಿಸುವೆವು. ಇದೆಂಥ ಮೋಹವು !

೭೨. ಶರೀರದಲ್ಲಿ ಜನರಿಗೆ ಅದೇ ನಾನು ಎಂಬ ಒಂದು ವಿಲಕ್ಷಣ ಮೋಹವು ಇರುತ್ತದೆ. ಆದರೆ ಅದೇ ಶರೀರದಲ್ಲಿ ಯಾವದಾದರೊಂದು ಭಾಗವು ವಿಂಗಡಿಸಿಕೊಂಡು ಹೊರಕ್ಕೆ ಬಂದರೆ ಅದನ್ನು ತಾವೆಂದು ಎಂದಿಗೂ ಎಣಿಸುವದಿಲ್ಲ. ಶರೀರದ ಮಾಂಸ, ರಕ್ತ, ಬೆವರು, ಕೂದಲು, ಉಗುರು, ಕಣ್ಣು ಪಿಸುರು, ಕಿವಿಯ ಕುಗ್ಗಿ , ಮೂಗಿನ ಸಿಂಬಳ – ಮುಂತಾದವು ನಮ್ಮ ಶರೀರದಿಂದ ಹೊರಕ್ಕೆ ಬಂದಮೇಲೆ ಅವುಗಳಲ್ಲಿ ಅಸಹ್ಯವಾದ ಹೇಸಿಕೆಯ ಬುದ್ಧಿ ಉಂಟಾಗುತ್ತದೆ. ಆದರೆ ಅವೇ ಶರೀರದೊಳಗೆ ಇರುವವರೆಗೆ ಒಟ್ಟು ಶರೀರದಲ್ಲಿ ನಾನು ಎಂಬ ಬುದ್ಧಿಯಿರುತ್ತದೆ. ಇದೆಂಥ ಮೋಹವು !

೭೩. ಪ್ರಾಣವು ತಾನೆಂಬ ಬುದ್ಧಿಯೂ ಹೀಗೆಯೇ. ಶರೀರದಲ್ಲಿ ಬೇರೆ ಬೇರೆಯ ಭಾಗದಲ್ಲಿ ಪ್ರಾಣವು ಕೆಲಸಮಾಡುತ್ತಿದ್ದು , ಆಗಾಗ್ಗೆ ಅವ್ಯಕ್ತವಾಗುತ್ತಿರುವದು. ನಮ್ಮ ಅಂಗಗಳಲ್ಲಿ ಕೆಲವು ಸಜೀವವಾಗಿದ್ದುಕೊಂಡು ಕೆಲಕೆಲವು ನಿಮಿತ್ತಗಳಿಂದ ಪ್ರಾಣವ್ಯಾಪಾರವನ್ನು ಮಾಡದೆ ಹೋಗುವವು. ಉದಾಹರಣೆಗೆ ನಮ್ಮ ಮೈಯ ಮೇಲೆ ಒಂದು ಹುಣ್ಣು ಎದ್ದುಕೊಂಡರೆ ಆ ಭಾಗದ ಚರ್ಮವು ಸಿಪ್ಪೆ ಸುಲಿದು ಮೇಲಕ್ಕೇಳುವದು. ಆಗ ಅದು ನಮ್ಮದಲ್ಲವೆಂದು ಎಣಿಸಿ ಅದನ್ನು ಕಿತ್ತುಹಾಕುವೆವು. ಈಗ ಅದರ ಕೆಳಗೆ ಬೆಳೆದುಕೊಂಡಿರುವ ಹೊಸ ಚರ್ಮದಲ್ಲಿ ಅಭಿಮಾನವು ಬಂದು ಕುಳಿತಿರುತ್ತದೆ.

೭೪. ನಮ್ಮ ಮನಸ್ಸು ಕ್ಷಣಕ್ಷಣಕ್ಕೂ ಬೇರೆಬೇರೆಯ ವೃತ್ತಿಗಳನ್ನು ತಳೆಯುತ್ತಿರುವದು. ಆದರೂ ಆಯಾ ವೃತ್ತಿಯನ್ನು ನಮ್ಮದೆಂದು ನಾವು ಅಭಿಮಾನಪಡುತ್ತಿರುವೆವು. ಒಳ್ಳೆಯ ಬುದ್ಧಿ, ನೀತಿ, ದಯೆ, ಶಾಂತಿ – ಮುಂತಾದವುಗಳಂತೆ ಸಿಟ್ಟು, ಆಶೆ, ಕರುಬುತನ – ಮುಂತಾದವುಗಳು ಕೂಡ ನಮ್ಮವೆಂದು ಅಭಿಮಾನದಿಂದ ಕಾಣುತ್ತಿರುವೆವು. ಆದರೆ ಇವುಗಳಲ್ಲಿ ಯಾವದೊಂದು ವೃತ್ತಿಯೂ ಹಾಗೆಯೇ ಉಳಿದಿರುವದೇ ಇಲ್ಲ. ಆಗಲೂ ನಾವು ಹೊಸಹೊಸ ವೃತ್ತಿಗಳಲ್ಲಿ ಅಭಿಮಾನವನ್ನು ತಳೆಯುತ್ತಿರುವೆವು.

೭೫. ನಮ್ಮ ತಿಳಿವಳಿಕೆಯು ವಿಚಾರದಿಂದ ಬೆಳೆಯುತ್ತಿರುವದು, ಅಥವಾ ವಿಚಾರದ ಅನಭ್ಯಾಸದಿಂದ ಕುಗ್ಗುತ್ತಿರುವದು. ಆದರೂ ಆಗಾಗಿನ ನಿಶ್ಚಯದಲ್ಲಿಯೇ ಇದು ಸರಿ ಎಂಬ ಒಂದು ಮೋಹವು ನಮ್ಮನ್ನು ಕಾಡುತ್ತಿರುವದು. ನಮ್ಮದು ಎಂಬುದೆಲ್ಲ ಸರಿ, ಅಲ್ಲದ್ದೆಲ್ಲವೂ ತಪ್ಪು – ಎಂಬುದೊಂದು ಮೋಹ.

೭೬. ಶರೀರಾದಿಗಳಿಗೆಲ್ಲ ನಾನು ಒಡೆಯನು ಎಂಬ ಅಭಿಮಾನವು ನಮಗೆಲ್ಲ ಸಾಮಾನ್ಯವಾಗಿರುತ್ತದೆ. ಆದರೆ ಆ ನಾನು ಯಾರು ? – ಎಂಬುದು ಮಾತ್ರ ನಮಗೆ ಯಾರಿಗೂ ತಿಳಿಯದು. ನಮಗೆ ಮತ್ತೊಬ್ಬರ ವಿಚಾರವೇ ಹೆಚ್ಚಾಗಿರುತ್ತದೆ ; ಆದರೆ ನಮ್ಮ ವಿಚಾರಕ್ಕೆ ಕಾಲವೇ ಸಿಕ್ಕುವದಿಲ್ಲ !

೭೭. ನಾನೆಂಬ ಅಭಿಮಾನವು ಶರೀರ, ಪ್ರಾಣ, ಮನಸ್ಸು, ಬುದ್ಧಿ, ಹೆಂಡಿರುಮಕ್ಕಳು – ಮುಂತಾದವುಗಳಲ್ಲೆಲ್ಲ ಒಂದೊಂದುಸಲಕ್ಕೆ ಒಂದೊಂದರಲ್ಲಿ ಕುಳಿತಿರುತ್ತದೆ. ಆದರೂ ನಾವು 'ನಾನು' ಎಂಬುದು ಸ್ವತಂತ್ರವಾದ ಒಂದು ತತ್ತ್ವವೆಂದೇ ಬಗೆಯುತ್ತಿರುವೆವು. ಇದೆಂಥ ಮಾಯೆ !

೭೮. ನಮಗೆಲ್ಲ ನಾನು ಎಂಬ ಅಜ್ಞಾತಪದಾರ್ಥದಲ್ಲಿ ಬಹಳ ಗೌರವ. ನನಗೆ ಎಲ್ಲ ತಿಳಿಯುತ್ತದೆ ಎಂಬ ಮೋಹವು ಅವಿವೇಕಿಗಳಿಗೂ ಇರುತ್ತದೆ. ವಿದ್ವಾಂಸರನ್ನೂ ಕೂಡ ನಾವು 'ಇವರಿಗೆ ಅಷ್ಟೇನೂ ತಿಳಿಯದು, ಇನ್ನೊಬ್ಬ ವಿದ್ವಾಂಸರು ಇದಾರೆ ; ಅವರಿಗೆ ಇವರಿಗಿಂತ ಹೆಚ್ಚು ತಿಳಿಯುತ್ತದೆ' ಎನ್ನುವೆವು. ಆದರೆ ವಿದ್ವಾಂಸರ ಯೋಗ್ಯತೆಗೆ ಬೆಲೆಕಟ್ಟುವ ನನ್ನ ಯೊಗ್ಯತೆ ಎಷ್ಟೆಂಬುದನ್ನು ಮಾತ್ರ ಎಂದಿಗೂ ಯೋಚಿಸುವದಿಲ್ಲ.

೭೯. ಮಿಕ್ಕೆಲ್ಲರ ನಡತೆಯನ್ನೂ ಪರೀಕ್ಷಿಸಿ 'ಹಾಗಿರಬೇಕಿತ್ತು, ಹೀಗಿರಬೇಕಿತ್ತು' – ಎಂದು ತೀರ್ಪುಕೊಡುವ ವಾಡಿಕೆಯು ನಮಗೆಲ್ಲ ಇದೆ. ಆದರೆ ನನಗೆ ಎಲ್ಲರ ನಡತೆಯ ಬೆಲೆಯನ್ನು ಕಟ್ಟುವ ಹೆಚ್ಚಿನ ಯೋಗ್ಯತೆ ಯಾವದಿದೆ ? ಎಂಬುದನ್ನು ಮಾತ್ರ ನಾವುಗಳು ಯಾರೂ ಎಣಿಸುವದಿಲ್ಲ.

೮೦. ಸರಕಾರಿ ಅಧಿಕಾರಿಗಳು, ಮಹಾಜನರುಗಳು, ಪಾರ್ಲಿಮೆಂಟಿನ ಸದಸ್ಯರುಗಳು, ಬೇರೆಬೇರೆಯ ರಾಷ್ಟ್ರಗಳ ನಾಯಕರು – ಮೊದಲಾದವರು ನಡೆದುಕೊಂಡಿರುವ ರೀತಿಯನ್ನು ವರ್ತಮಾನಪತ್ರಿಕೆಗಳಿಂದ ತಿಳಿದು ಅವನು ಜಾಣ, ಇವನು ದಡ್ಡ – ಎಂದು ನಾವೆಲ್ಲರೂ ನಮ್ಮ ನಮ್ಮ ಮತವನ್ನು ವ್ಯಕ್ತಗೊಳಿಸುತ್ತಿರುವೆವು. ಆದರೆ ನನಗೆ ಅಧಿಕಾರಸ್ಥಾನಗಳ ವಿಷಯವಾಗಿ,

ಮಂತ್ರಾಲೋಚನೆಯ ಸಭೆಗಳ ವಿಷಯವಾಗಿ, ಅಥವಾ ರಾಷ್ಟ್ರಗಳ ರಾಜ್ಯ ಭಾರಕ್ರಮದ ವಿಷಯವಾಗಿ ಯಾವ ಅನುಭವವಿದೆ ಎಂಬುದನ್ನು ಮಾತ್ರ ನಾವು ಯಾರೂ ವಿವೇಚಿಸಿಕೊಂಡೇ ಇರುವದಿಲ್ಲ. ಎಂಥ ಮಾಯೆಯಿದು !

೮೧. 'ನಾನು' ಎಂಬ ಅರಿವಿನಿಂದ ತಿಳಿಯಬರುವ ವಸ್ತು ಯಾವದೆಂದು ನಮಗೆ ಗೊತ್ತಾಗಿ ನಿಶ್ಚಯವಾಗಿರುವದಿಲ್ಲ. ಆದರೂ ಈ ನಾನು ಎಂಬ ವಸ್ತುವಿನಲ್ಲಿ ನಮಗೆ ಬಹಳ ಅಭಿಮಾನ !

೮೨. 'ನಾನು' ಎಂಬುದು ಮಿಕ್ಕದ್ದೆಲ್ಲವನ್ನೂ 'ನೀನು', 'ಅದು', 'ಇಂಥದ್ದು', 'ಅಂಥದ್ದು' ಎಂದು ಅರಿಯುತ್ತಾ ತನಗೆ ವಿಷಯವಾಗಿ ಮಾಡಿ ಕೊಳ್ಳುತ್ತಿರುವದು ; ತಾನು ಎಲ್ಲಕ್ಕೂ ಬೆಲೆಕಟ್ಟುವ ಯೋಗ್ಯತೆಯುಳ್ಳವನೆಂದು ಹೆಮ್ಮೆಪಡುತ್ತಿರುವದು !

೮೩. 'ನಾನು' ಎಂಬ ಬುದ್ಧಿಯು ಯಾವಯಾವದರಲ್ಲಿ ಉಂಟಾಗುತ್ತಿರುವದೋ ಅದಕ್ಕೆಲ್ಲ ಬೆಲೆ. ಎಚ್ಚರದಲ್ಲಿ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ – ಇವೆಲ್ಲವನ್ನೂ ನಾನು ಎಂದುಕೊಂಡು ಹೆಮ್ಮೆಪಡುತ್ತಿರುವೆವು. ಒಂದೊಂದು ಕನಸಿನಲ್ಲಿಯೂ ಒಂದೊಂದು ಶರೀರವಿರುತ್ತದೆ ; ಬೇರೆಬೇರೆಯ ಇಂದ್ರಿಯಾದಿಗಳಿರುತ್ತವೆ. ಆಯಾ ಕಾಲದಲ್ಲಿ ಅವುಗಳನ್ನೇ ನಾನು ಎಂದು ಕೊಳ್ಳುತ್ತಿರುವೆವು ! ಅವುಗಳಿಗೇ ಹೆಚ್ಚಿನ ಸ್ಥಾನವನ್ನು ಕೊಡುತ್ತಿರುವೆವು !

೮೪. ಪ್ರತಿಯೊಬ್ಬನೂ ತನತನಗೆ ನಾನು ಎಂದು ತೋರುವ ಪದಾರ್ಥವು ಎಲ್ಲಕ್ಕೂ ಹೆಚ್ಚಿನದೆಂದು ತಿಳಿಯುತ್ತಿರುವನು. ಪ್ರತಿಯೊಬ್ಬನಿಗೂ ತನಗೆ ಸಂಬಂಧಪಟ್ಟಿರುವ ದೇಹ, ಹೆಂಡಿರುಮಕ್ಕಳು, ಹೊಲಮನೆ, ಹಣಕಾಸು, ವಿದ್ಯೆ, ಕೀರ್ತಿ – ಮುಂತಾದವುಗಳಲ್ಲಿ ಹೆಚ್ಚಿನ ಗೌರವವಿರುತ್ತದೆ. ಮಿಕ್ಕವರೂ ಹಾಗೆಯೇ ಎಣಿಸಿಕೊಂಡಿರುತ್ತಾರೆಂದು ತೋರಿಬಂದರೂ ಅವರೆಲ್ಲ ದಡ್ಡರು. ಅವರ ತಿಳಿವಳಿಕೆ ಸರಿಯಲ್ಲ, ತನ್ನ ಅಭಿಮಾನವೇ ಸರಿಯಾದದ್ದು ಎಂದೇ ಅವನ ಭಾವನೆ !

೮೫. ಜಾತಿ, ಕುಲ, ದೇಶ, ಸಂಪತ್ತು, ವಿದ್ಯಾ, ಬುದ್ಧಿ, ಸಂಸ್ಕೃತಿ – ಮುಂತಾದವುಗಳಿಗೆಲ್ಲ ನಾನು ಎಂಬ ವಸ್ತುವಿಗೆ ಸಂಬಂಧಪಟ್ಟಂತೆಯೇ ಗೌರವವು ಹೆಚ್ಚಾಗಿರುವದು. ಒಬ್ಬೊಬ್ಬನೂ ತನ್ನ ತನ್ನದನ್ನು ಹೆಚ್ಚಿನದೆಂದು ಭಾವಿಸು ವಂತೆಯೇ ಒಂದೊಂದು ಗುಂಪಿನವರೂ ತಮ್ಮ ತಮ್ಮ ಜಾತಿ ಕುಲಾದಿಗಳನ್ನೇ

ಹೆಚ್ಚಿನವೆಂದು ಭಾವಿಸುತ್ತಿರುವರು. ಮಿಕ್ಕವರ ಭಾವನೆಯೂ ಹೀಗೆಯೇ ಇದ್ದರೂ ಅದು ಸರಿಯಲ್ಲವೆಂದೇ ಪ್ರತಿಯೊಬ್ಬರೂ ತಿಳಿಯುತ್ತಿರುವರು !

೮೬. ಕನ್ನಡಿಯಲ್ಲಿ ನಮ್ಮ ಮುಖವೇ ಮಾರುಹೋಳಿದು ತೋರುತ್ತಿರುವದು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವನ್ನು ಪ್ರತಿಬಿಂಬವೆಂದು ತಿಳಿದುಕೊಂಡಿರುವವರಿಗೆ ನಿಜವಾದ ಮುಖದ ತತ್ತ್ವವನ್ನು ಅರಿಯುವದಕ್ಕೆ ಅದೊಂದು ಉತ್ತಮಸಾಧನವಾಗಿರುತ್ತದೆ. ಇದರಂತೆ ನಮ್ಮ ಶರೀರಾದಿಸಂಘಾತದಲ್ಲಿ ತೋರುವ 'ನಾನು' ಎಂಬುದು ನಮ್ಮ ನಿಜವಾದ ಆತ್ಮನ ಆಭಾಸವಾಗಿರುತ್ತದೆ. ಈ ನಾನೆಂಬ ಆಭಾಸವನ್ನು ನಿಜವಾದ ಆತ್ಮನನ್ನು ಅರಿಯುವದಕ್ಕೆ ಉಪಯೋಗಿಸಿಕೊಳ್ಳುವವರಿಗೆ ಇದು ಒಂದು ಉತ್ತಮಸಾಧನವಾಗಿರುತ್ತದೆ.

೮೭. ಕನ್ನಡಿಯ ಸ್ವಭಾವವನ್ನೇ ಪ್ರತಿಬಿಂಬವು ಅವಲಂಬಿಸಿರುತ್ತದೆ. ಕನ್ನಡಿಯು ಭೂತಗನ್ನಡಿಯಾದರೆ ಮುಖವು ಇರುವದಕ್ಕಿಂತ ಬಹಳ ದೊಡ್ಡದಾಗಿ ಕಾಣಿಸುತ್ತಿದೆ. ಕನ್ನಡಿಯು ಕಶ್ಮಲವಾಗಿದ್ದರೆ ಅದರಲ್ಲಿ ಮುಖದ ಪ್ರತಿಬಿಂಬವೂ ಕಶ್ಮಲಯುಕ್ತವಾಗಿ ಕಾಣಿಸುತ್ತದೆ. ಇದರಂತೆ ಅಂತಃಕರಣದ ಸ್ವಭಾವವನ್ನು 'ನಾನು' ಎಂಬುದು ಅವಲಂಬಿಸಿರುತ್ತದೆ. ಜೀವರುಗಳಲ್ಲಿ ಉತ್ತಮ, ಮಧ್ಯಮ, ಅಧಮ – ಎಂಬ ತಾರತಮ್ಯವು ಈ ಅಂತಃಕರಣದ ಸ್ವಭಾವಭೇದದಿಂದಾಗಿರುತ್ತದೆ.

೮೮. ಕನ್ನಡಿಯಲ್ಲಿರುವ ತನ್ನ ಪ್ರತಿಬಿಂಬವನ್ನೇ ಒಂದು ನಿಜವಾದ ಮಗು ಎಂದು ಹಸುಮಕ್ಕಳು ಭಾವಿಸುತ್ತವೆ. ಇದರಂತೆ ಅಧ್ಯಾತ್ಮಮಾರ್ಗದಲ್ಲಿ ಹಸುಳೆಗಳಾಗಿರುವವರು ಚಿದಾಭಾಸವಾದ ಈ ನಾನು ಎಂಬುದೇ ತಮ್ಮ ಆತ್ಮನೆಂದು ಭಾವಿಸಿ ಮೋಸಹೋಗುತ್ತಾರೆ.

೮೯. ಅನೇಕ ಕನ್ನಡಿಗಳನ್ನು ತೂಗುಹಾಕಿರುವ ಮನೆಯಲ್ಲಿ ನಮ್ಮ ಮುಖವೇ ಒಂದೊಂದು ಕನ್ನಡಿಯಲ್ಲಿ ಒಂದೊಂದು ಬಗೆಯಾಗಿ ತೋರುವಂತೆ ಒಬ್ಬ ಪರಮಾತ್ಮನೇ ಚಿತ್ತೋಪಾಧಿತಾರತಮ್ಯದಿಂದ ಬಗೆಬಗೆಯ ರೂಪಗಳಂತೆ ಇರುವಂತೆ ಕಾಣುತ್ತಿರುತ್ತಾನೆ. ಮನುಷ್ಯನಿಂದ ಬ್ರಹ್ಮನವರೆಗೂ ಮನುಷ್ಯನಿಂದ ಸ್ಥಾವರಗಳವರೆಗೂ ಇರುವ ಪ್ರಾಣಿಗಳು ಅನಂತವಿಧವಾಗಿ ಕಾಣುವದಕ್ಕೆ ಈ ಉಪಾಧಿಭೇದವೇ ಕಾರಣವು.

೬೦. ನಾನೆಂಬ ಅಭಿಮಾನವು ಅಂತಃಕರಣವನ್ನು ಆಶ್ರಯಿಸಿಕೊಂಡಿರುತ್ತದೆಯಾದರೂ ಅದಕ್ಕೆ ದೇಹ, ಹೆಂಡಿರುಮಕ್ಕಳು, ಹೊಲಮನೆ, ಹಣ ಮುಂತಾದವುಗಳೆಲ್ಲ ವಿಷಯವಾಗಿರುತ್ತವೆ. ಯಾವಾಗ ಏತರಲ್ಲಿ ಅಭಿಮಾನವಿರುವದೋ ಆಗ ಅದೇ ನಾನು ಅಥವಾ ನನ್ನದು ಎಂದಾಗಿರುತ್ತದೆ. ಹೀಗಾಗಿ 'ನಾನು' ಎಂಬುದು ಯಾವದೆಂಬ ನಿಶ್ಚಯವಿಲ್ಲದೆ ಅದು ನಮ್ಮ ಹಿಡಿತದಿಂದ ನುಣುಚಿಕೊಳ್ಳುತ್ತಲೇ ಇರುತ್ತದೆ.

೬೧. ನಾನು ಎಂದು ನಮ್ಮ ರೂಪು, ಬಣ್ಣ, ಜಾತಿ, ಕುಲ, ದೇಶ, ವಿದ್ಯೆ, ಅಭಿಪ್ರಾಯ ಮುಂತಾದವುಗಳನ್ನೆಲ್ಲ ಕರೆದುಕೊಳ್ಳುತ್ತಿರುವೆವು. ನಮಗಿಂತ ಬೇರೆಯಾಗಿರುವ ರೂಪಿನ, ಬಣ್ಣದ, ಜಾತಿಯ, ಕುಲದ, ದೇಶದ, ವಿದ್ಯೆಯ ಅಥವಾ ಅಭಿಪ್ರಾಯದ ಜನರನ್ನು ಕೀಳೆಂದು ತಿಳಿಯುವದಕ್ಕೆ ಈ ಮಿಥ್ಯಾಭಿಮಾನವೇ ಕಾರಣವಾಗಿರುವದು.

೬೨. ಹೂವಿನಿಂದ ಹೂವಿಗೆ ಹಾರಾಡುತ್ತಿರುವ ಚಿಟ್ಟೆಯಂತೆ ನಾನು ಎಂಬ ಈ ಅಭಿಮಾನವು ದೇಹ, ಪ್ರಾಣ, ಮನಸ್ಸು, ಬುದ್ಧಿ – ಇವುಗಳಲ್ಲಿ ಒಂದರಿಂದ ಒಂದರ ಕಡೆಗೆ ಹಾರಾಡುತ್ತಿರುವದು. ಆದರ ಅದಕ್ಕೆ ಎಲ್ಲಿಯೂ ನಿಲುಗಡೆಯು ಶಾಶ್ವತವಾಗಿ ದೊರೆಯುವದಿಲ್ಲ. ಆದ್ದರಿಂದ ಅದು ಇದ್ದಷ್ಟು ಕಾಲ ಆಯಾ ಉಪಾಧಿಯಲ್ಲಿ ತನಗೆ ಯಾವದೋ ಒಂದು ಲಾಭವು ದೊರೆಯುವದೆಂಬ ಮರುಳು ಅದನ್ನು ಹಿಡಿದುಕೊಂಡಿರುತ್ತದೆ. ಹೂವಿನಿಂದ ಹೂವಿಗೆ ಹಾರಾಡುವ ಚಿಟ್ಟೆಗೆ ಯಾವ ಹೂವಿನಲ್ಲಿ ತಾನೆ ಮಕರಂದವು ಸಿಕ್ಕೀತು ?

೬೩. ನಾನೆಂಬ ಅಭಿಮಾನವು ಎಲ್ಲಿಯೇ ಕೂತುಕೊಂಡಿರಲಿ, ಅದರಲ್ಲಿ ಮತ್ತು ಅದಕ್ಕೆ ಅನುಗುಣವಾದ ಹೊರಗಿನ ವಸ್ತುವಿನಲ್ಲಿ ರಾಗವುಂಟಾಗುವದು. ಅದಕ್ಕೆ ಪ್ರತಿಕೂಲವೆಂದು ತೋರುವ ವಸ್ತುವಿನಲ್ಲಿ ದ್ವೇಷವುಂಟಾಗುವದು. ಯಾವ ವಸ್ತು ತನಗೆ ಸಿಕ್ಕಿತೆಂದು ಹಿಗ್ಗುಂಟಾಗುವದೋ ಅದರಲ್ಲಿ ಲೋಭವೂ ಅದು ತನಗೆ ಮಾತ್ರವೇ ಇರುವದೆಂಬ ಮದವೂ ಅಥವಾ ಮತ್ತೊಬ್ಬರಿಗೆ ಇದೆಯಲ್ಲ!– ಎಂಬ ಮಾತ್ಸರ್ಯವೂ ಉಂಟಾಗುವವು !

೬೪. ನಾನೆಂಬ ಅಭಿಮಾನವು ನಮ್ಮಲ್ಲಿ ಯಾವಾಗಲೂ ವ್ಯಕ್ತವಾಗಿರುವದಿಲ್ಲ. ಕೆಲಸವನ್ನು ಮಾಡುವಾಗ ನಾವು ಅದರಲ್ಲಿಯೇ ಮಗ್ನರಾಗಿದ್ದರೆ ಆಗ ನಾನು ಎಂಬ ಭಾವನೆಯು ನಮ್ಮ ಅಂತಃಕರಣದಲ್ಲಿರುವದೇ ಇಲ್ಲ.

ವಿಷಯಗಳನ್ನು ಪರೀಕ್ಷಿಸುವಾಗ ಅಥವಾ ಅನುಭವಿಸುವಾಗ ಅವುಗಳಲ್ಲಿಯೇ ಮಗ್ನರಾಗಿದ್ದರೆ ಆಗಲೂ ನಾನು ಎಂಬ ಭಾವನೆಯು ನಮ್ಮಲ್ಲಿರುವದಿಲ್ಲ.

೯೫. ನಮಗೆ ಕಾಮವು ಬಲವಾಗಿರುವಾಗ, ಕ್ರೋಧವು ಬಲವಾಗಿರುವಾಗ, ಮೋಹವು ಬಲವಾಗಿರುವಾಗ, ಮದಮಾತ್ಸರ್ಯಗಳು ಬಲವಾಗಿರುವಾಗ ನಮಗೆ ನಾನೆಂಬ ಭಾವನೆಯು ಎದ್ದುಕಾಣುತ್ತಿರುವದಿಲ್ಲ. ಹೀಗೆಯೇ ಭಯ, ನಾಚಿಕೆ ಮುಂತಾದವುಗಳು ಉಂಟಾಗಿರುವಾಗಲೂ ನಾನು ಎಂಬ ಭಾವನೆಯು ಎದ್ದುಕೊಂಡಿರುವದಿಲ್ಲ.

೯೬. ನಮಗೆ ಕೆಲಸದಲ್ಲಿ , ವಿಷಯಪರೀಕ್ಷಣೆಯಲ್ಲಿ ಅಥವಾ ಕಾಮಕ್ರೋಧಾದಿಗಳಲ್ಲಿ ತಾದಾತ್ಮ್ಯವುಂಟಾಗಿರುವಾಗ 'ನಾನು' ಎಂಬುದು ಕಾಣದೆ ಇದ್ದರೂ ಆಗ ಅದು ಇಲ್ಲವೇ ಇಲ್ಲವೆಂದು ಹೇಳಲಾಗದು. ಏಕೆಂದರೆ ಅವುಗಳು ಹೋದಕೂಡಲೆ ನಾವು ವಿಚಾರಮಾಡಿದರೆ ನಾನು ಕೆಲಸದಲ್ಲಿ ಮುಳುಗಿದ್ದೆನು, ಯೋಚನೆಯಲ್ಲಿ ಮಗ್ನನಾಗಿದ್ದೆನು, ಕಾಮಕ್ರೋಧಗಳಿಂದ ಆವೃತನಾಗಿದ್ದೆನು – ಎಂದು ಮುಂತಾಗಿ ನೆನಪು ಬರುತ್ತದೆ. ನಾನು ಎಂಬುದು ವ್ಯಕ್ತವಾಗದೆ ಇದ್ದರೂ ಅವ್ಯಕ್ತವಾಗಿರಬಹುದು.

೯೭. ಕಾಲಿನಲ್ಲಿ ಒಂದು ಮುಳ್ಳು ಅಥವಾ ಕಲ್ಲು ಹೊಕ್ಕಿದ್ದರೆ ಆ ಭಾಗಕ್ಕೆ ಏನಾದರೂ ಸೋಕಿದ ಮಾತ್ರದಿಂದ ನಮಗೆ ವ್ಯಥೆಯಾಗುತ್ತದೆ. ಮೈಮೇಲೆ ಒಂದು ಹುಣ್ಣು ಎದ್ದಿದ್ದರೆ ಅದಕ್ಕೆ ಯಾವದಾದರೊಂದು ಹೊರಗಿನ ವಸ್ತುವಿನ ಸ್ಪರ್ಶವಾದರೆ ಕೂಡಲೆ ನಮಗೆ ನೋವಾಗುತ್ತದೆ, ನಾನು ಎಂಬುದೂ ಹೀಗೆಯೇ. ಅದನ್ನು ಯಾರಾದರೂ ಚುಚ್ಚಿ ಎಬ್ಬಿಸಿದರೆ ಆಗ ಎದ್ದುಕೊಳ್ಳುತ್ತದೆ. ತನಗೆ ಆಗದ ಹೊರಗಿನ ಪದಾರ್ಥಗಳ ವೇದನೆಯೆಲ್ಲ ಅದಕ್ಕೆ ವ್ಯಥೆಯನ್ನುಂಟು ಮಾಡುತ್ತದೆ.

೯೮. ನಾನು ಎಂಬುದು ಎದ್ದುಕೊಂಡಾಗ ಇದು, ಇವನು, ಅವನು, ಅವರು, ಮಿಕ್ಕವರು – ಎಂಬುದು ತೋರ್ದದೆ ಇರುವದೇ ಇಲ್ಲ. ಆಗ ನನಗೆ ಇವರು ಗೆಳೆಯರು, ಇವರು ಹಗೆಗಳು, ಇವರು ಉದಾಸೀನರು ; ಇದು ನನಗೆ ಬೇಕಾದದ್ದು , ಇದು ನನಗೆ ಬೇಡವಾದದ್ದು , ಇದು ಉದಾಸೀನವಾಗಿರುವದಕ್ಕೆ ತಕ್ಕದ್ದು – ಎಂಬ ಭಾವಗಳು ಅವಶ್ಯವಾಗಿ ಎದ್ದುಕೊಳ್ಳುವವು. ರಾಗದ್ವೇಷ ಮೋಹಾದಿಗಳಿಗೆ 'ನಾನು' ಎಂಬುದೇ ತಾಯಿಬೇರೆಂಬುದಕ್ಕೆ ಇದೇ ಕಾರಣ.

೯೯. ಕನಸಿನಲ್ಲಿಯೂ ನಾನು ಎಂಬ ಭಾವನೆಯು ಎಚ್ಚರದಂತೆಯೇ ಎದ್ದುಕೊಳ್ಳುತ್ತದೆ. ಆಗಲೂ ನೀನು, ಅವನು, ಮಿಕ್ಕವರು, ಇದು, ಅದು – ಮುಂತಾದ ಭಾವಗಳು ತಲೆದೋರುತ್ತಲೇ ಇರುತ್ತವೆ. ಕನಸಿನಲ್ಲಿ ತೋರುವ ನಮ್ಮ ಶರೀರಾದಿಗಳಾಗಲಿ ಅವುಗಳಿಗೆ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡುವವೆಂದು ನಾವು ಬಗೆಯುವ ಎರಡನೆಯ ಮನುಷ್ಯರಾಗಲಿ, ಪ್ರಾಣಿಗಳಾಗಲಿ, ವಸ್ತುಗಳಾಗಲಿ ಒಂದೂ ಎಚ್ಚರದಲ್ಲಿರುವದಿಲ್ಲ. ಅವೆಲ್ಲ ಹುಸಿ ತೋರಿಕೆಯೆಂದು ಎಚ್ಚರವಾದಕೂಡಲೆ ನಿಶ್ಚಯವಾಗಿಬಿಡುತ್ತದೆ. ಆದರೂ ಕನಸಿನಲ್ಲಿ ಮಾತ್ರ ನಮಗೆ ರಾಗದ್ವೇಷಮೋಹಾದಿಗಳಿಗೆ ಯಾವಾಗಲೂ ಕೊರತೆಯಿರುವದಿಲ್ಲ. 'ನಾನು' ಇದ್ದಲ್ಲಿ ರಾಗಾದಿಗಳು ಇದ್ದೇ ಇರುವವು ಎಂಬುದಕ್ಕೆ ಇದೊಂದು ನಿದರ್ಶನ.

೧೦೦. ತನಿನಿದ್ರೆಯಲ್ಲಿ 'ನಾನು' ಎಂದಿಗೂ ಕಾಣುವದಿಲ್ಲ ; ಎಂದಿಗೂ ಅದು ಅಲ್ಲಿ ಕಾಣುವ ಸಂಭವವೂ ಇರುವದಿಲ್ಲ. ಆದ್ದರಿಂದಲೇ ಅಲ್ಲಿ ನೀನು, ಅವನು, ಅದು, ಇದು – ಎಂಬ ದ್ವೈತವೂ ಕಾಣುವದಿಲ್ಲ. ಆದ್ದರಿಂದಲೇ ಅಲ್ಲಿ ರಾಗದ್ವೇಷಾದಿಗಳ ಕಾಟವು ಎಂದಿಗೂ ಕಾಣಿಸುವದಿಲ್ಲ, ಕಾಣಿಸಿಕೊಳ್ಳುವ ಸಂಭವವೂ ಇಲ್ಲ.

೧೦೧. ರಾಗದ್ವೇಷಮೋಹಾದಿಗಳ ಕಾಟವೇ ಸಂಸಾರಬಂಧವು ; ಅವುಗಳಿಂದ ತಪ್ಪಿಸಿಕೊಳ್ಳುವದೇ ಮೋಕ್ಷವು. ಒಮ್ಮೆ ಒಬ್ಬ ಸಾಧುಗಳನ್ನು 'ವೈಕುಂಠಕ್ಕೆ ಹೋಗುವವರು ಯಾರು ?'– ಎಂದು ಭಕ್ತರು ಕೇಳಿದರಂತೆ. ಅವರು 'ನಾನು ಹೋದರೆ ಹೋದೇನು !'' ಎಂದರಂತೆ. ''ಎಂಥ ಹೆಮ್ಮೆ !'' ಎಂದುಕೊಂಡರು, ಕೆಲವರು. ಆದರೆ ಸಾಧುಗಳು ಹೇಳಿದ್ದೇ ಬೇರೆ. ''ನಾನು'' ಎಂಬ ಅಭಿಮಾನವು ಹೋದರೆ ಮೋಕ್ಷವನ್ನು ಪಡೆದೇನು ಎಂದು !

೧೦೨. ನಾನು ಎಂಬ ಅಭಿಮಾನವನ್ನು ಉಬ್ಬಿಸುವ ಕರ್ಮಗಳನ್ನು ಮುಮುಕ್ಷುಗಳು ಎಂದಿಗೂ ಮಾಡಬಾರದು. ಅದನ್ನು ಹೆಚ್ಚಿಸುವ ವಿಚಾರಗಳನ್ನು ಎಂದಿಗೂ ಮನಸ್ಸಿಗೆ ತಂದುಕೊಳ್ಳಬಾರದು. ನಾನು ಎಂಬ ಅಭಿಮಾನವು ಕೃಶವಾಗುವ ಕರ್ಮಗಳನ್ನೂ ವಿಚಾರಗಳನ್ನೂ ಸ್ವೀಕರಿಸಬೇಕು. ಇದೇ ಅಧ್ಯಾತ್ಮಸಾಧನಗಳ ಗುಟ್ಟು. ನಾವು ಯಾವ ಸಾಧನವನ್ನು ಮಾಡುತ್ತಿದ್ದರೂ ಇದರಿಂದ ನಾನೆಂಬುದು ಅರಳಿಕೊಳ್ಳುವದೊ, ಬಾಡುವದೊ ? – ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುತ್ತಲೇ ಇರಿ.

೧೦೩. ನಾನು ಎಂಬ ಅರಿವು ಇರುವಾಗ ನೀನು ಎಂಬರಿವು ಇದ್ದೇ ಇರುವದೆಂಬುದೊಂದು ನಿಯಮವು. ನಾನು ಎಂಬುದನ್ನು ಬಿಟ್ಟಿದ್ದರೆ ಮಿಕ್ಕದ್ದೆಲ್ಲವೂ ನೀನು ಎನ್ನಿಸಿಕೊಳ್ಳುವದಕ್ಕೆ ತಕ್ಕದ್ದಾಗಿರುವದರಿಂದ ನಾನಲ್ಲದ್ದೆಲ್ಲವನ್ನೂ 'ನೀನು' ಎಂಬ ಅರಿವಿಗೆ ವಿಷಯವೆಂದು ಭಾವಿಸಬಹುದು. ನಾನು, ನೀನು – ಇವೆರಡೂ ವ್ಯವಹಾರದಲ್ಲಿ ಒಟ್ಟಿಗೆ ಕಾಣಿಸಿಕೊಳ್ಳುವವು, ಇವೆರಡೂ ಒಟ್ಟಿಗೆ ಮರೆಯಾಗುವವು.

೧೦೪. ನಾನು ಎಂಬುದು ನಮಗೆ ವ್ಯವಹಾರದಲ್ಲಿ ಬಹಳ ಮೆಚ್ಚಾಗಿರುವದು. ಹೇಗಾದರೂ ಮಾಡಿ ಅದರ ಹೆಚ್ಚಳವನ್ನು ತೋರಿಸಿಕೊಳ್ಳುವದೇ ನಮ್ಮ ವ್ಯವಹಾರದ ಗುರಿಯಾಗಿರುವದು. ಆದ್ದರಿಂದ 'ನೀನು' ಎಂಬುದನ್ನು ಹೇಗಾದರೂ ಮಾಡಿ ಬೆಲೆಯಲ್ಲಿ ತಗ್ಗಿಸುವದಕ್ಕೆ ಪ್ರಯತ್ನಮಾಡುತ್ತಿರುವೆವು.

೧೦೫. ನನ್ನಲ್ಲಿ ಇದ್ದ ಗುಣವನ್ನು ದೊಡ್ಡದು ಮಾಡಿ ಪ್ರಕಟಿಸಿಕೊಳ್ಳುವದು, ಇದ್ದ ಹೆಚ್ಚಿನ ದೋಷಗಳನ್ನು ಕಡಿಮೆಯಾಗಿ ಮಾಡುವದು ಅಥವಾ ಅವುಗಳು ಹಾಗಿರುವದು ಅನಿವಾರ್ಯವೆಂದು ತರ್ಕದಿಂದ ಸಿದ್ಧಮಾಡಿ ತೋರಿಸುವದಕ್ಕೆ ಯತ್ನಿಸುವದು – ಇವು ನಮಗೆಲ್ಲ ಸ್ವಭಾವವಾಗಿರುವದು. ಇದರಂತೆ ನಿನ್ನ ದೊಡ್ಡಗುಣಗಳನ್ನು ಕಿರಿದುಮಾಡಿ ಅನಾದರವನ್ನು ತೋರಿಸುವದು, ನಿನ್ನಲ್ಲಿರುವ ಅಲ್ಪದೋಷಗಳನ್ನು ಅಭಿಮಾನದ ಭೂತಗನ್ನಡಿಯಿಂದ ನೋಡಿ ದೊಡ್ಡದು ಮಾಡುವದು, ಇಲ್ಲದ ದೋಷಗಳನ್ನು ನಿನ್ನಲ್ಲಿ ಆರೋಪಿಸುವದು – ಇವು ನಮಗೆಲ್ಲ ಸ್ವಭಾವವಾಗಿರುವದು. ಆದರೆ ನಾನೆಂಬುದು ಯಾವದು ? ನೀನೆಂಬುದು ಯಾವದು ? – ಇದನ್ನು ವಿವೇಚನೆಮಾಡುವ ಗೋಜಿಗೆ ನಾವು ಹೋಗುವದಿಲ್ಲ. ನಾನು, ನಾನು ಎಂದು ಅಭಿಮಾನಪಡುತ್ತಿರುವದೇ ನಾನು ; ಮಿಕ್ಕದ್ದೆಲ್ಲವೂ ನೀನು – ಇಷ್ಟೇ ನಮ್ಮ ಹೇಳಿಕೆ !

೧೦೬. ನಾನು ಎಂಬುದರ ಹಿರಿಮೆಯನ್ನು ಕೊಚ್ಚಿಕೊಳ್ಳುವದಕ್ಕೆ ನೇರಾಗಿ ಪ್ರಯತ್ನಿಸದೆ ಇರಬಹುದು ; ನೀನು ಎಂಬುದನ್ನು ತಗ್ಗಿಸುವದಕ್ಕೂ ನೇರಾಗಿ ಪ್ರಯತ್ನಿಸದೆ ಇರಬಹುದು. ಆದರೆ ಅದನ್ನು ಪ್ರಕಾರಾಂತರದಿಂದಲಾದರೂ ಮಾಡದೆ ನಾವು ವ್ಯವಹಾರಮಾಡುವದೇ ಇಲ್ಲ.

೧೦೭. ನೀನು ಎಂಬುದನ್ನು ಹೊಗಳುವಂತೆ, ನಿನ್ನ ಗುಣಗಳನ್ನು ಹೆಚ್ಚಿಸಿ ಹೇಳುವಂತೆ ಕಂಡರೂ, ನಾನು ನನ್ನ ಹೆಚ್ಚುಗಾರಿಕೆಯನ್ನೇ ಪ್ರಕಟಿಸುತ್ತಿರಬಹುದು ಉದಾಹರಣೆಗೆ ನೀವು ದೊಡ್ಡಕುಲದವರು, ವಿದ್ಯಾವಂತರು, ಜಾಣರು, ರೂಪವಂತರು, ಧನವಂತರು – ಎಂದು ಮುಂತಾಗಿ ಹೊಗಳುವಾಗ ನನ್ನನ್ನು ನೀವು ಕುಲ, ವಿದ್ಯೆ, ಜಾಣತನ, ರೂಪ, ಧನ – ಮುಂತಾದವುಗಳಲ್ಲಿ ಎಲ್ಲರಿಗಿಂತಲೂ ಮಿಗಿಲೆಂದು ಒಪ್ಪಬೇಕು, ಹೊಗಳಬೇಕು ಎಂಬುದೇ ನನ್ನ ಆಶೆಯಿರಬಹುದು. ಹೀಗೆಯೇ ನನ್ನನ್ನು ನಾನು ಜರಿಯುವಂತೆ ಕಾಣುವದೂ ನನ್ನ ಹಿರಿಮೆಯ ಪ್ರಕಟನೆಗೇ ಆಗಿರಬಹುದು. ಹೇಗೆಂದರೆ ನಾನು ಅಲ್ಪಜ್ಞನು, ಬಡವನು, ದಿಕ್ಕಿಲ್ಲದವನು – ಎಂದು ಮುಂತಾಗಿ ಹೇಳಿಕೊಳ್ಳುವಾಗಲೂ ಬಹಳ ತಿಳಿವಳಿಕೆಯುಳ್ಳವನು, ಐಶ್ವರ್ಯವಂತನು, ಜನಬಾಂಧವಬಲವುಳ್ಳವನು ಎಂಬುದನ್ನು ಸೂಚಿಸುವ ಉದ್ದೇಶವೇ ನನಗಿರಬಹುದು.

೧೦೮. ನಾನು ಎಂಬುದನ್ನು ಮೇಲಕ್ಕೇರಿಸುವದಕ್ಕೆ ಜನರು ಮತ್ತೊಂದು ಉಪಾಯವನ್ನು ಉಪಯೋಗಿಸುವುದುಂಟು. ಒಬ್ಬನ ಪರೋಕ್ಷದಲ್ಲಿ ಆತನನ್ನು ಕಡಿಮೆಮಾಡುವಂತೆ ಆತನ ವಿಷಯಕ್ಕೆ ದೂರು, ನಿಂದೆ, ಇಲ್ಲದ ಅಪವಾದ – ಇವುಗಳನ್ನು ಬಗೆಬಗೆಯ ರೂಪದಿಂದ ಪ್ರಕಟಿಸಬಹುದು. ಅಥವಾ ತನ್ನ ವಿಷಯಕ್ಕೆ ಮತ್ತೊಬ್ಬರು ಬರೆದಿರುವ ಪ್ರಕಟನೆಯನ್ನು ತೋರಿಸುವದು, ಅಥವಾ ತನ್ನನ್ನು ಹೊಗಳಿ ಮತ್ತೊಬ್ಬರು ಆಡಿದಮಾತುಗಳನ್ನು ಪ್ರಸ್ತಾಪಿಸುವದು, ತನಗಿರುವ ದೊಡ್ಡ ಮನುಷ್ಯರ ಸ್ನೇಹ, ಮತ್ತೊಬ್ಬನಿಗಿರುವ ಅಲ್ಪರ ಸಹವಾಸ – ಮುಂತಾದವುಗಳನ್ನು ಪ್ರಸ್ತಾಪಿಸುವದು – ಇವೆಲ್ಲ ನಾನೆಂಬುದರ ಬಢಾಯಿಯ ರೂಪಗಳೇ.

೧೦೯. ನಾನೆಂಬುದು ಚಿಗುರಿ ಬೆಳೆಯುವದಕ್ಕೆ ಆತ್ಮಶ್ಲಾಘನೆಯೇ ಹೊಯ್ನೀರು, ಪರನಿಂದೆಯೇ ಗೊಬ್ಬರ ; ಅಭಿಮಾನಿತ್ವ, ದಂಭ – ಇವುಗಳು ಕಶಿಮಾಡುವ ಸಾಧನಗಳು. ಸಾಮಾನ್ಯವಾದ ವ್ಯಕ್ತಿಯಾಗಲಿ, ಕಂಪೆನಿಗಳಾಗಲಿ, ಸಮಾಜದ ಪಂಗಡಗಳಾಗಲಿ, ರಾಷ್ಟ್ರಗಳಾಗಲಿ – ಎಲ್ಲವೂ ಈ ಆತ್ಮಶ್ಲಾಘನೆ ಮತ್ತು ಪರನಿಂದೆಯಿಂದಲೇ ತಮ್ಮ ಬಾಳನ್ನು ಸಾಗಿಸುತ್ತಿರುವವು.

೧೧೦. ಮುಮುಕ್ಷುವಾದವನು ನಾನು ಎಂಬ ಅಭಿಮಾನವನ್ನು ಮಟ್ಟುಮಾಡಿಕೊಳ್ಳಲು ತನ್ನ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡಬೇಕು.

ಅಧ್ಯಾತ್ಮಸಾಧನಗಳ ಸಾರವೆಲ್ಲ ನಾನೆಂಬುದನ್ನು ಮಟ್ಟುಮಾಡಿಕೊಳ್ಳುವದರಲ್ಲಿದೆ. ನಾನೆಂಬ ಅಭಿಮಾನವನ್ನಿಟ್ಟುಕೊಂಡು ಯಾವ ಸಾಧನವನ್ನು ಮಾಡಿದರೂ ಸಾಧನವು ಸಾರ್ಥಕವಾಗುವದಿಲ್ಲ. ಸ್ನಾನವನ್ನು ಎಷ್ಟುಸಲ ಮಾಡಿದರೂ ಮತ್ತೆಮತ್ತೆ ಕೆಸರನ್ನು ಮೈಗೆ ಬಳಿದುಕೊಳ್ಳುತ್ತಿದ್ದರೆ ಸ್ನಾನದ ಪ್ರಯೋಜನವು ಹೇಗೆ ದೊರೆಯಬೇಕು ?

೧೧೧. ನಾನೆಂಬ ಅಭಿಮಾನವು ಒಂದು ಬಗೆಯ ಜ್ವರವೆಂದು ಭಾವಿಸಬಹುದು. ಅದು ಇರುವವರೆಗೂ ಮನುಷ್ಯನಿಗೆ ಸ್ವಾಸ್ಥ್ಯವಿಲ್ಲ. ಅಪಥ್ಯವಾದ ಕಾಮಗಳ ಸೇವನೆಯೂ ದಂಭ, ದರ್ಪ, ಅಭಿಮಾನ, ಹಿಂಸೆ, ಮೋಸ – ಮುಂತಾದ ದೋಷಗಳ ಸಂನಿಪಾತವೂ ತಪ್ಪಿದ್ದಲ್ಲ.

೧೧೨. ನಾನೆಂಬುದನ್ನು ಮಟ್ಟಹಾಕುವೆನೆಂದು ಹಟತೊಟ್ಟರೆ ಅದರಿಂದ ಯಾವ ಪ್ರಯೋಜನವೂ ಆಗುವದಿಲ್ಲ. ಆ ಹಟಕ್ಕೆ ಅಹಂಕಾರವೇ ತಳಹದಿಯಾಗಿರುತ್ತದೆ, ಅದು ಈ ಪ್ರಯತ್ನದಿಂದ ಮತ್ತಷ್ಟು ಗಟ್ಟಿಯಾಗುತ್ತದೆ. ಅದರಲ್ಲಿರುವ ದೋಷಗಳನ್ನು ಮನಸ್ಸಿಗೆ ತಂದುಕೊಳ್ಳುವದರಿಂದ ಒಂದಿಷ್ಟು ಪ್ರಯೋಜನವಾಗಬಹುದು, ಆದರೆ ಸಮೂಲವಾಗಿ ಎಂದಿಗೂ ನಾಶವಾಗುವದಿಲ್ಲ.

೧೧೩. ಅಹಂಕಾರವನ್ನು ಸುಟ್ಟು ಬೂದಿಗೈಯುವದಕ್ಕೆ ಪರಮಾತ್ಮನ ಭಕ್ತಿಯೊಂದೇ ಪರಮೌಷಧವು. ಪರಮಾತ್ಮನು ಸರ್ವಜ್ಞನು ಸರ್ವಶಕ್ತನು, ನಿತ್ಯಶುದ್ಧಬುದ್ಧಮುಕ್ತಸ್ವಭಾವನು – ಎಂಬ ಜ್ಞಾನವು ಬಂದರೆ ಅಹಂಕಾರವು ಹೇಳಹೆಸರಿಲ್ಲದೆ ನಾಶವಾಗವದು. ಆದರೆ ಆ ಜ್ಞಾನಕ್ಕೆ ಬೇಕಾದ ಶಮದಮಾದಿಗಳನ್ನೂ ಭಕ್ತಿವೈರಾಗ್ಯಗಳನ್ನೂ ಮೊದಲು ಸಂಪಾದಿಸಿಕೊಳ್ಳಬೇಕು.

೧೧೪. ಪರಮಾತ್ಮನ ಸ್ವರೂಪವನ್ನು ವರ್ಣಿಸುವ ಶಾಸ್ತ್ರಗಳನ್ನು ಅವಶ್ಯವಾಗಿ ಅವಲೋಕನಮಾಡಬೇಕು. ಆದರೆ ಶಾಸ್ತ್ರಜ್ಞಾನದ ಅಹಂಕಾರವನ್ನು ಮಾತ್ರ ಎಂದಿಗೂ ಹತ್ತಿರ ಸೇರಿಸಬಾರದು. ಪರಮಾತ್ಮನ ಭಕ್ತಿಯಿಲ್ಲದೆ ಶಾಸ್ತ್ರಗಳ ಬಲೆಯಲ್ಲಿ ಸಿಕ್ಕಿಕೊಳ್ಳುವವರಿಗೆ ಎಂದಿಗೂ ಅನರ್ಥವು ತಪ್ಪಿದ್ದಲ್ಲ. ಬರಿಯ ಪುಸ್ತಕಜ್ಞಾನದಿಂದ ಈಜುವ ವಿದ್ಯೆಯನ್ನು ತಿಳಿದೆನೆಂದು ಈಜುಬುರುಡೆಯಿಲ್ಲದೆ ನೀರಿನಲ್ಲಿಳಿಯುವದು ತಪ್ಪಲ್ಲವೆ ? ಇನ್ನು ಒಂದು ಕಲ್ಲನ್ನೂ ಕಟ್ಟಿಕೊಂಡು ಸಮುದ್ರದೊಳಕ್ಕೆ ಧುಮುಕುವವನ ಗತಿಯನ್ನು ಹೇಳುವದೇನಿದೆ ?

೧೧೫. ನಾನೆಂಬ ಅಭಿಮಾನವನ್ನು ಬೇರುಮುಟ್ಟ ಕಿತ್ತೊಗೆಯು ವದಕ್ಕೆ ಒಂದೇ ಒಂದು ಉಪಾಯವಿದೆ. ಪರಮಾತ್ಮನನ್ನು ಹೃದಯದಲ್ಲಿಟ್ಟು ಕೊಳ್ಳುವದೇ ಆ ಉಪಾಯವು. ನಮ್ಮ ಮನಸ್ಸಿನಲ್ಲಿ ಏತರ ಶ್ರದ್ಧೆಯಿರುವದೋ ಅಂಥ ಗುಣಗಳೇ ನಮ್ಮಲ್ಲಿ ಕಾಣಿಸುವವಾದ್ದರಿಂದ ಈಶ್ವರನ ಶ್ರದ್ಧೆಯಿಂದ ದೈವಸಂಪತ್ತಿನ ಗುಣಗಳೇ ನಮ್ಮಲ್ಲಿ ಕಾಣಿಸಿಕೊಳ್ಳುವವು.

೧೧೬. ಅಧ್ಯಾತ್ಮವಾಗಿ (ನಮ್ಮೊಳಗೆ) ಯಾವದರ ಭಾವವು ಬಲವಾಗಿರುವದೋ ಅದಕ್ಕನುಗುಣವಾದ ಸಂನಿವೇಶವೇ ನಮ್ಮ ಹೊರಗೂ ಕಾಣಿಸಿಕೊಳ್ಳುವದು. ಆದ್ದರಿಂದ ನಮ್ಮೊಳಗೆ ದೈವೀಸಂಪತ್ತಿನ ಭಾವನೆಯು ಎದ್ದುಕೊಂಡಂತೆಲ್ಲ ನಮ್ಮ ಸುತ್ತುವಳಯದಲ್ಲಿಯೂ ಸುಖಶಾಂತಿಗಳು ಹುಲುಸಾಗಿ ಕಾಣುವವು. ನಮ್ಮೊಳಗೆ ಉತ್ತಮಭಾವನೆಯನ್ನು ಬಿತ್ತಬೇಕು, ಬೆಳೆಯು ನಮ್ಮ ಹೊರಗೂ ಕಾಣಿಸಿಕೊಳ್ಳುವದು.

೧೧೭. ಅಧ್ಯಾತ್ಮಸಾಧನಗಳನ್ನು ಮಾಡುವದರಲ್ಲಿ ಕೂಡ ನಾನೆಂಬ ಅಭಿಮಾನಕ್ಕೆ ಎಡೆಗೊಡಬಾರದು. ನಾವು ಮಾಡುವ ಸಾಧನದಲ್ಲಿ ಪರಮಾತ್ಮನಿಗೇ ಮುಖ್ಯವಾದ ಸ್ಥಾನವಿರಬೇಕು ; ಆಗ ಆ ಭಗವಂತನೇ ನನಗೆ ತನ್ನ ಸಾಧರ್ಮ್ಯವನ್ನು ಅನುಗ್ರಹಿಸುವನು.

೧೧೮. ಪರಮಾತ್ಮನನ್ನು ಪ್ರಾರ್ಥಿಸುವದು, ಸ್ತುತಿಸುವದು, ಧ್ಯಾನಿಸುವದು – ಇದೇ ಅಧ್ಯಾತ್ಮಸಾಧನಗಳ ತಿರುಳು. ಆ ಪರಮಾತ್ಮನೇ ನಮಗೆ ಆ ಪ್ರಾರ್ಥನೆಯ, ಆ ಸ್ತುತಿಯ ಅಥವಾ ಆ ಧ್ಯಾನದ ಫಲವನ್ನು ಅನುಗ್ರಹಿಸ ಬೇಕಾಗಿದೆ. ''ದೇವ, ನಾನೆಷ್ಟರವನು ? ನೀನೇ ನನ್ನಿಂದ ಸಾಧನವನ್ನು ಮಾಡಿಸಿ ನೀನೇ ಫಲವನ್ನು ಕೊಡಬೇಕು'' ಎಂದು ಬೇಡಿಕೊಳ್ಳೋಣ.

೧೧೯. ಭಗವಂತನನ್ನು ಕಷ್ಟಪರಿಹಾರಕ್ಕಾಗಲಿ, ಆರೋಗ್ಯದ ಅಥವಾ ಧನದ ನಿಮಿತ್ತದಿಂದಲಾಗಲಿ ಪ್ರಾರ್ಥಿಸುವದು ತಪ್ಪಲ್ಲ. ಆದರೆ ಆಗ ಭಗವಂತನಿಗಿಂತ ಕಷ್ಟ, ದೇಹಸ್ವಾಸ್ಥ್ಯ, ಧನ – ಇವುಗಳೇ ನಮಗೆ ಹೆಚ್ಚೆಂದಾಗುವದು. ಆದ್ದರಿಂದ ಅದು ಅಹಂಕಾರವನ್ನು ಮಟ್ಟುಮಾಡಿಕೊಳ್ಳು ವದಕ್ಕೆ ಉಪಾಯವಾಗಲಾರದು. ಭಗವಂತನಿಗಾಗಿ ಭಗವಂತನ್ನು ಪ್ರಾರ್ಥಿಸ ಬೇಕು, ಸ್ತುತಿಸಬೇಕು. ಆಗ ಅಹಂಕಾರವೂ ಮಟ್ಟಾಗುವದು : ನಮಗೆ ಬೇಕಾದ ಕಷ್ಟಪರಿಹಾರವೇ ಮುಂತಾದವುಗಳೂ ನಾವು ಕೇಳದಿದ್ದರೂ ಭಗವಂತನ

ಅನುಗ್ರಹದಿಂದಲೇ ದೊರಕುವವು. ಭೋಗಗಳನ್ನು ಮುಖ್ಯವೆನ್ನುವವರು ಬುಭುಕ್ಷುಗಳು, ಭಗವಂತನೇ ಬೇಕೆನ್ನುವವರು ಮುಮುಕ್ಷುಗಳು.

೧೨೦. ಹೃದಯದ ಮೂಲಕವಾಗಿ ಜಗತ್ತನ್ನು ನೋಡುವದನ್ನು ಅಭ್ಯಾಸಮಾಡಬೇಕು. ಬುದ್ಧಿಯ ಮೂಲಕವಾಗಿ ನೋಡಬಾರದು. ಮನುಷ್ಯನು ತನ್ನನ್ನು ಹೃದಯದ ವೇದನೆಗಳ ಮೂಲಕವಾಗಿ ನೋಡಿಕೊಳ್ಳುತ್ತಾನೆ, ಮತ್ತೊಬ್ಬರನ್ನು ಬುದ್ಧಿಯ ಕನ್ನಡಕದಿಂದ ನೋಡುತ್ತಾನೆ. ಮತ್ತೊಬ್ಬರ ವಿಷಯಕ್ಕೆ ತರ್ಕವನ್ನು ಒಡ್ಡುತ್ತಾನೆ, ತನ್ನ ವಿಷಯಕ್ಕೆ ಭಾವಗಳನ್ನು ಉಪಯೋಗಿಸುತ್ತಾನೆ. ಇದರಿಂದ ಲೋಕದಲ್ಲಿ ಒಬ್ಬರೊಬ್ಬರಿಗೆ ಮಿಲನವಾಗುವದಿಲ್ಲ.

೧೨೧. ನನಗೆ ಕಷ್ಟವಾಗಿದೆ, ನನ್ನನ್ನು ಯಾರೂ ನೋಡಿಕೊಳ್ಳುವದಿಲ್ಲ , ನನ್ನ ಕಷ್ಟಸುಖಗಳಿಗೆ ಭಾಗಿಯಾಗುವವರು ಯಾರಿದಾರೆ ?– ಎಂದು ನಮ್ಮಲ್ಲಿ ಪ್ರತಿಯೊಬ್ಬನೂ ಜನರನ್ನು ದೂರುತ್ತೇವೆ, ನಮ್ಮ ಗೋಳನ್ನು ಹೇಳಿಕೊಳ್ಳುತ್ತೇವೆ. ಆದರೆ ಮತ್ತೊಬ್ಬರು ಹೀಗೆಯೇ ಮಾತಾಡಿದರೆ 'ಮನುಷ್ಯನಿಗೆ ಹಾಗಾಗುವದು ಸ್ವಾಭಾವಿಕ', 'ದುಃಖವು ಬಂದರೆ ಒಳ್ಳೆಯದಕ್ಕೇ ಬರುತ್ತದೆ'– ಎಂದು ಬುದ್ಧಿಯ ಪ್ರತ್ಯಯಗಳ ಕಣ್ಣಿಂದ ನೋಡಿ ಉತ್ತರಕೊಡುತ್ತೇವೆ. ಮತ್ತೊಬ್ಬರಲ್ಲಿ ಸಹಾನುಭೂತಿಯುಂಟಾಗದಿರುವದಕ್ಕೆ ಇದೇ ಕಾರಣ.

೧೨೨. ನನ್ನಲ್ಲಿರುವ ಪ್ರೇಮವನ್ನು ಮತ್ತೊಬ್ಬರಲ್ಲಿಡುವದಕ್ಕೆ ಸಾಧ್ಯವೆ ? ನಮ್ಮ ಹೆಂಡಿರು ಮಕ್ಕಳು, ಹೊಲಮನೆ ಮುಂತಾದವುಗಳಲ್ಲಿರುವ ಅಭಿಮಾನವನ್ನು ಮತ್ತೊಬ್ಬರಲ್ಲಿಡುವದು ಸಾಧ್ಯವೆ ? ನಮ್ಮ ನೆಂಟರಿಷ್ಟರಲ್ಲಿಯೂ ಗೆಳೆಯರಲ್ಲಿಯೂ ಇಟ್ಟಿರುವಂಥ ಪ್ರೇಮವನ್ನು ಮತ್ತೊಬ್ಬರಲ್ಲಿ ಇಡುವದು ಸಾಧ್ಯವೆ ?– ಎಂದು ಕೆಲವರು ಕೇಳುತ್ತಾರೆ. ಆದರೆ ನನ್ನಲ್ಲಿ, ನಮ್ಮ ಹೆಂಡಿರು ಮಕ್ಕಳಲ್ಲಿ, ನಮ್ಮ ನೆಂಟರಿಷ್ಟರಲ್ಲಿ, ಅಥವಾ ನಮ್ಮದೆಂದು ನಾವು ಭಾವಿಸಿರುವ ಯಾವದಾದರೊಂದು ವಸ್ತುವಿನಲ್ಲಿಟ್ಟಿರುವದು ನಿಜವಾದ ಶುದ್ಧವಾದ ಪ್ರೇಮವೇ ಅಲ್ಲ ; ಅದು ಪರಿಚ್ಛಿನ್ನವಾದ ಒಲವಿನ ಅಭಿಮಾನ. ಅಂಥ ಪ್ರೇಮವನ್ನು ಮತ್ತೊಬ್ಬರಲ್ಲಿಡುವದು ಅವರು ನಮ್ಮವರೇ ಆದ ಹೊರತು ಸಾಧ್ಯವೂ ಅಲ್ಲ. ಇಷ್ಟುಮಾತ್ರದಿಂದ ನಿಜವಾದ ಪ್ರೇಮವನ್ನು ಎಲ್ಲರಲ್ಲಿಯೂ ಇಡುವದಾಗುವದಿಲ್ಲವೆನ್ನಬಾರದು. ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮಾತ್ಮನಲ್ಲಿ ಎಲ್ಲೆಲ್ಲಿಯೂ ಸಮವಾದ ಪ್ರೇಮವನ್ನೇ ಇಡಬಹುದು. ಅದನ್ನೇ ನಾವು ಅಭ್ಯಾಸಮಾಡಬೇಕು.

೧೨೩. ನಮಗೆ ನಮ್ಮಲ್ಲಿ ಮಿಕ್ಕೆಲ್ಲರಿಗಿಂತಲೂ ಹೆಚ್ಚಿನ ಪ್ರೇಮವಿದೆಯಷ್ಟೆ. ಈ ಪ್ರೇಮಕ್ಕೆ ವಿಷಯವು ಯಾವದು ? ದೇಹವಲ್ಲ. ಏಕೆಂದರೆ ರೋಗಾದಿಗಳು ಬಹಳವಾಗಿ ಪೀಡಿಸಿದರೆ ಅಥವಾ ಅಪಮಾನಾದಿಗಳಿಂದ ಬಾಳು ಬೇಕಿಲ್ಲವಾದರೆ ಆತ್ಮಹತ್ಯೆಯನ್ನೂ ಮಾಡಿಕೊಳ್ಳುವದಕ್ಕೆ ಸಿದ್ಧರಾಗುವೆವು. ನಮ್ಮ ದೇಹ, ಪ್ರಾಣ, ಮನಸ್ಸು, ಬುದ್ಧಿ – ಇವೆಲ್ಲವೂ ನಮಗಾಗಿ ಬೇಕಾಗಿವೆ ; ಆದ್ದರಿಂದ ಇವೆಲ್ಲಕ್ಕಿಂತ ಬೇರೆಯಾಗಿರುವ 'ನಾನು' ಎಂಬುದರಲ್ಲಿಯೇ ನಮಗೆ ಹೆಚ್ಚಿನ ಪ್ರೇಮವೆಂದಾಯಿತು. ಆದರೆ ನಾನು ಎಂದರೆ ಅಹಂಕಾರವೇನೂ ಅಲ್ಲ ; ಒಂದೊಂದು ಕನಸಿಗೆ ಒಂದೊಂದು ಅಹಂಕಾರವು ಕಾಣಿಸಿಕೊಳ್ಳುತ್ತದೆ. ತನಿನಿದ್ರೆಯಲ್ಲಿ ಯಾವ ಅಹಂಕಾರವೂ ಇರುವದೇ ಇಲ್ಲ. ಆದ್ದರಿಂದ ಅಹಂಕಾರಕ್ಕೂ ಸಾಕ್ಷಿಯಾಗಿರುವ ಚೈತನ್ಯವೇ ನಮ್ಮ ಆತ್ಮನು. ಅದರಲ್ಲಿಯೇ ನಮಗೆ ಅತ್ಯಂತಪ್ರೇಮವಿರುತ್ತದೆ.

೧೨೪. ನಮ್ಮ ಆತ್ಮನು ನಮ್ಮ ಮನಸ್ಸು, ಬುದ್ಧಿ, ಅಹಂಕಾರ – ಇವುಗಳನ್ನು ಬೆಳಗುತ್ತಾ ಇರುತ್ತಾನೆ. ಆದರೆ ಅವನಿಗೆ ಈ ಮನಸ್ಸು, ಬುದ್ಧಿ, ಅಹಂಕಾರ – ಇವುಗಳ ಹಂಗೇನೂ ಇರುವದಿಲ್ಲ. ಇವು ಅವನನ್ನು ಸೋಂಕುವದೂ ಇಲ್ಲ. ಅವನು ಯಾವ ಎಲ್ಲೆಕಟ್ಟೂ ಇಲ್ಲದವನಾಗಿರುತ್ತಾನೆ. ಅವನನ್ನೇ ಪರಮಾತ್ಮನು ಎಂದು ಬಲ್ಲವರು ಕರೆಯುತ್ತಾರೆ. ಆ ಪರಮಾತ್ಮನು ಎಲ್ಲರಿಗೂ ಆತ್ಮನಾಗಿರುತ್ತಾನೆ. ಆದ್ದರಿಂದ ಈ ದೃಷ್ಟಿಯಿಂದ ಎಲ್ಲರನ್ನೂ ಪ್ರೀತಿಸಬಹುದು.

೧೨೫. ನನ್ನ ಆತ್ಮನು ಯಾವಾಗಲೂ ಒಂದೇ ರೂಪದಲ್ಲಿರುತ್ತಾನೆ ; ಆದರೆ ಅಂತಃಕರಣವೂ ಇಂದ್ರಿಯಗಳೂ ದೇಹವೂ ವಿಷಯಗಳೂ ಮತ್ತೆಮತ್ತೆ ಮಾರ್ಪಡುತ್ತಲೇ ಇರುತ್ತವೆ. ಆದ್ದರಿಂದ ಆತ್ಮನು ಸದ್ರೂಪನು. ಇವನೇ ಎಲ್ಲರಿಗೂ ಆತ್ಮನಾಗಿ ಹಾಗೆಯೇ ಎಲ್ಲೆಲ್ಲಿಯೂ ಸದ್ರೂಪನಾಗಿಯೂ ಇರುತ್ತಾನೆ. ಯಾವಾಗಲೂ ಇರುವ ಆತ್ಮನಲ್ಲಿ ನಮಗೆ ಪ್ರೇಮವಿರಬೇಕಾದದ್ದು ಯುಕ್ತವೇ ಆಗಿದೆ.

೧೨೬. ನನ್ನ ಆತ್ಮನು ನನ್ನ ದೇಹ, ಇಂದ್ರಿಯ, ಅಂತಃಕರಣ – ಎಲ್ಲವನ್ನೂ ತನ್ನ ಸ್ವರೂಪದಿಂದಲೇ ಅರಿಯುತ್ತಿರುತ್ತಾನೆ. ಅಂತಃಕರಣವು ಅರಿಯುವದಕ್ಕೆ ಆಗಾಗ್ಗೆ ಮಾರ್ಪಡಬೇಕಾಗಿರುತ್ತದೆ ; ಆದರೆ ಆತ್ಮನು ಅದನ್ನು ಅರಿಯುವದಕ್ಕೆ ಮಾರ್ಪಡಬೇಕಾದದ್ದೇನೂ ಇಲ್ಲ. ಮಾರ್ಪಡದೆ ಇರುವ ಆತ್ಮನಲ್ಲಿ ಪ್ರೇಮವಿರುವದು ಸಹಜ. ಈ ಆತ್ಮನು ಎಲ್ಲರಿಗೂ ಆತ್ಮನು. ಈ ದೃಷ್ಟಿಯಿಂದ ಎಲ್ಲರನ್ನೂ ನಾವು ಪ್ರೀತಿಸಬಹುದಾಗಿದೆ.

೧೨೭. ಇಂದ್ರಿಯಗಳು ಹೊರಗಿನ ಪ್ರಪಂಚವನ್ನು ನಮಗೆ ತೋರಿಸುವ ಕಿಟಕಿಗಳು. ದೇಹವೆಂಬ ನಮ್ಮ ನಮ್ಮ ಮನೆಯಲ್ಲಿ ಕುಳಿತು ನಾವು ಈ ಕಿಟಕಿಗಳ ಮೂಲಕ ಹೊರಗೆ ಇಣಕಿ ನೋಡುತ್ತಿರುವೆವು. ಆದರೆ ಈ ಕಿಟಕಿಗಳ ಕನ್ನಡಿಯ ಕದಗಳನ್ನು ನಾವು ಬಗೆಬಗೆಯ ಬಣ್ಣಗಳಿಂದ ಬಳಿದುಕೊಂಡಿರುತ್ತೇವೆ. ಇದರಿಂದ ನಮಗೆ ಒಬ್ಬೊಬ್ಬರಿಗೆ ಒಂದೊಂದು ಬಗೆಯಾಗಿ ಹೊರಗಿನ ಪ್ರಪಂಚವು ಕಾಣಿಸುತ್ತಿರುವದು.

೧೨೮. ನಾವು ಹೊರಗೆ ಕಾಣಿಸುವದನ್ನೆಲ್ಲ ನಿಜವೆಂದು ನಂಬುವ ಅಭ್ಯಾಸವುಳ್ಳವರು. ನಮ್ಮ ಕಣ್ಣಿನಲ್ಲಿ ಅಥವಾ ಕನ್ನಡಕದಲ್ಲಿ ಇರಬಹುದಾದ ದೋಷಗಳನ್ನು ನಾವು ಪರೀಕ್ಷಿಸಿಕೊಳ್ಳದೆ ಇರುವದರಿಂದ ಹೊರಗೆ ಇರವದನ್ನು ಇಲ್ಲವೆಂದೂ ಇಲ್ಲದ್ದನ್ನು ಇದೆಯೆಂದೂ ನಂಬುವ ಸಂಭವವಿದೆ, ಕಣ್ಣು ಮಬ್ಬಾಗಿರುವವರು ಆಗಾಗ್ಗೆ ಕಣ್ಣನ್ನು ದ್ರಾವಕದಿಂದ ತೊಳೆಯಿಸಿಕೊಳ್ಳುತ್ತಾರೆ ; ಕನ್ನಡಕವು ಸರಿಯಾಗಿಲ್ಲದಿದ್ದರೆ ತಮಗೆ ತಕ್ಕದ್ದನ್ನು ವೈದ್ಯರ ಸೂಚನೆಯಿಂದ ಕೊಂಡುಕೊಳ್ಳುತ್ತಾರೆ. ಪ್ರಪಂಚವನ್ನು ನೋಡಿ ಅಭಿಪ್ರಾಯವನ್ನು ಕೊಡುವ ಮುಂಚೆ ಸಾಧುಜನರೆಂಬ ನೇತ್ರವೈದ್ಯರ ಸಹಾಯವನ್ನು ನಾವು ಮೊದಲು ಪಡೆದುಕೊಳ್ಳಬೇಕು.

೧೨೯. ಕೆಲವು ಸಂದರ್ಭಗಳಲ್ಲಿ ಕುರುಡರಾಗಿರುವದೂ ಮೂಕರಾಗಿರುವದೂ ಕಿವುಡರಾಗಿರುವದೂ ಹೆಳವರೂ ಮೋಟರೂ ಆಗಿರುವದೂ ಒಂದು ಸೌಭಾಗ್ಯವಾಗಿರುತ್ತದೆ. ಎಲ್ಲೆಲ್ಲಿಯೂ ಮತ್ತೊಬ್ಬರ ದೋಷವನ್ನೇ ಕಾಣುವ, ಸ್ತ್ರೀಗಂಧಾದಿಕಾಮಗಳನ್ನೇ ಕಾಣುವ, ಭೋಗ್ಯವಿಷಯಗಳನ್ನೇ ಕಾಣುವ, ಕಣ್ಣೇತಕ್ಕೆ ? ಅಸತ್ಯ, ವಂಚನೆಯ ವಾಕ್ಯ, ಅಹಿತಕರವಾದ ವಾಕ್ಯ, ಪರನಿಂದೆ, ಆತ್ಮಪ್ರಶಂಸೆ, ಬೀಳುಮಾತುಗಳು – ಇವುಗಳನ್ನೇ ಆಡುವ ವಾಗಿಂದ್ರಿಯವಿದ್ದರೆ ತಾನೆ ಏನು ? ಭಗವಂತನ ಗುಣಲೀಲೆಗಳನ್ನು ಕೇಳದೆ ಈಶ್ವರನಿಂದೆ, ಸಾಧುನಿಂದೆ, ವಿಷಯಗಳ ಚರ್ಚೆ, ಆತ್ಮಪ್ರಶಂಸೆ – ಮುಂತಾದವುಗಳನ್ನೇ ಕೇಳುವ ಕಿವಿಯೇತಕ್ಕೆ ? ಕ್ಷೇತ್ರಯಾತ್ರಾದಿಗಳನ್ನು ಬಿಟ್ಟು ವೇಶ್ಯಾಲಯ, ಮದ್ಯಪಾನಗೃಹ, ಕಲಹಮಾಡುವ ದುಷ್ಟರ ಸಭೆ– ಮುಂತಾದ ಸ್ಥಳಗಳಿಗೆ ಹೋಗುವ ಕಾಲುಗಳೇತಕ್ಕೆ ? ದಾನಧರ್ಮಪರೋಪಕಾರವನ್ನು ಬಿಟ್ಟು ಹಿಂಸೆ, ಕುಕೃತ್ಯ – ಮುಂತಾದವುಗಳಲ್ಲಿಯೇ ನಿರತವಾಗಿರುವ ಕೈಗಳಾದರೂ ಏತಕ್ಕೆ ?

೧೩೦. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ – ಇವುಗಳು ಮಾರ್ಪಡುತ್ತಲೇ ಇರುತ್ತವೆ. ಇವುಗಳ ಸೌಂದರ್ಯ, ಪ್ರಯೋಜನ – ಮುಂತಾದವುಗಳನ್ನು ನೆನೆನೆನೆದು ಹೆಮ್ಮೆಪಡುವವರು ಮೂಢರು. ಕನಸಿನಲ್ಲಿ ನಮಗೆ ಎಷ್ಟು ದೇಹೇಂದ್ರಿಯಾದಿಗಳು ತೋರುವವು ! ಎಷ್ಟುಸಲ ಅವುಗಳಲ್ಲಿ ಅಭಿಮಾನವನ್ನು ಮಾಡಿಕೊಂಡು ಕೊನೆಗೆ ಎಚ್ಚರವಾಗುತ್ತಲೂ ಆ ಅಭಿಮಾನವನ್ನು ತೊರೆದಿರುವೆವು !

೧೩೧. ದೇಹಾದಿಗಳಲ್ಲಿ ನನ್ನದೆಂಬ ಅಭಿಮಾನವನ್ನು ಮಾಡಲೇ ಬಾರದು. ಅಥವಾ ಮಾಡಿದರೂ ಅವು ನಮಗೆ ಹಿತವನ್ನೇ ಮಾಡುವಂತೆ ಅವನ್ನು ಉಪಯೋಗಿಸುವದನ್ನು ಅಭ್ಯಾಸಮಾಡಬೇಕು. ದೇಹವು ನನ್ನದಾದರೆ ನಾನು ಹೇಳಿದಂತೆ ಕೇಳಬೇಕು, ಹೀಗೆಯೇ ಇಂದ್ರಿಯ, ಮನಸ್ಸು, ಬುದ್ಧಿ – ಎಲ್ಲವೂ ನನ್ನ ವಶದಲ್ಲಿರಬೇಕು. ನಾನು ಅವುಗಳ ವಶದಲ್ಲಿರಬಾರದು. ಹಾಗಾದರೆ ಅವು ನನ್ನವು ಎನ್ನಬಹುದು. ಇಲ್ಲದಿದ್ದರೆ ನಾನೇ ಅವಕ್ಕೆ ಅಡಿಯಾಳೆಂದಾಗುವದು.

೧೩೨. ದೇಹದಿಂದ ಮಾಡುವ ಸಾಧನವು ಹೇಗಿರಬೇಕು ? ದೇಹವು ನಾನಲ್ಲ ಎಂಬ ತಿಳಿವಳಿಕೆಗೆ ಅದು ಉಪಾಯವಾಗಿರಬೇಕು. ಹೀಗೆಯೇ ಇಂದ್ರಿಯಗಳಿಂದಲೂ ಮನೋಬುದ್ಧಿಗಳಿಂದಲೂ ಮಾಡುವ ಸಾಧನದಿಂದ ಅವುಗಳಲ್ಲಿ ನಾನೆಂಬ ಅಭಿಮಾನವು ಬಿಟ್ಟುಹೋಗುವಂತಿರಬೇಕು. ಹಾಗಾದರೆ ಅವುಗಳನ್ನು ಸದುಪಯೋಗಮಾಡಿಕೊಂಡಂತೆ ಆಗುವದು.

೧೩೩. ಒಬ್ಬ ಮನುಷ್ಯನು ರಸ್ತೆಯಲ್ಲಿ ನಡೆದು ಒಂದೂರಿಗೆ ಹೋಗುತ್ತಿದ್ದನು. ಅವನಿಗೆ ಬಹಳ ಹಸಿವಾಯಿತು. ಒಂದು ಮರದಮೇಲೆ ಬಿಟ್ಟಿದ್ದ ಹಣ್ಣುಗಳನ್ನು ಅಲ್ಲಿ ಯಾರೋ ಬಿಸಾಡಿದ್ದ ಒಂದು ಕೋಲಿನಿಂದ ಕೆಡವಿಕೊಂಡು ತಿಂದನು. ಬಹಳ ಬಾಯಾರಿಕೆಯಾಯಿತು. ರಸ್ತೆಯ ಪಕ್ಕದಲ್ಲಿದ್ದ ಒಂದು ಮುತ್ತುಗದ ಗಿಡದಲ್ಲಿದ್ದ ಎಲೆಗಳನ್ನು ಕಿತ್ತುಕೊಂಡು ಮಡಿಸಿ ಜಾಲಿ ಮುಳ್ಳಿನಿಂದ ಚುಚ್ಚಿ ದೊನ್ನೆಯನ್ನು ಮಾಡಿಕೊಂಡು ಅಲ್ಲಿದ್ದ ಪುಷ್ಕರಣಿಯ ನೀರನ್ನು ಕುಡಿದನು. ಅವನು ಆ ಕೋಲನ್ನೂ ದೊನ್ನೆಯನ್ನೂ ಅಲ್ಲಿಯೇ ಬಿಟ್ಟು ಮುಂದಕ್ಕೆ ನಡೆದಂತೆ ನೀವೂ ನಿಮ್ಮ ಶರೀರಾದಿಸಾಧನಗಳನ್ನು ಪುರುಷಾರ್ಥಸಾಧನೆಗೆ ಉಪಯೋಗಿಸಿಕೊಂಡು ಅವನ್ನು ಅತ್ತೊಗೆಯಿರಿ.

೧೩೪. ಒಬ್ಬನ ದೇಹವು ಯಾವಾಗಲೂ ಒಂದೇ ಕಡೆಯಲ್ಲಿ ಕೂತಿದ್ದರೆ, ಅಥವಾ ಮಲಗಿದ್ದರೆ, ಅದೊಂದು ಕೊರಡು ಅಥವಾ ಹಾಸುಗಲ್ಲು ಎನ್ನಬಹುದು. ಅದು ಯಾವಾಗಲೂ ಹರಿದಾಡುತ್ತಲೇ ಇದ್ದರೆ ಅದೊಂದು ಬಗೆಯ ಬಂಡಿ ಅಥವಾ ಮೋಟಾರ್ ಯಂತ್ರ ಎನ್ನಬಹುದು. ದೇಹವು ಪುಣ್ಯಕಾರ್ಯಗಳಿಗೂ ಭಗವಂತನ ಸೇವೆಗೂ ಭಗವದ್ಭಕ್ತರ ಸೇವೆಗೂ ಉಪಯುಕ್ತವಾದರೆ ನಿಜವಾದ ದೇಹವೆನಿಸುತ್ತದೆ.

೧೩೫. ದೇಹಕ್ಕೆ ಆಹಾರ, ವಿಹಾರ, ನಿದ್ರೆ, ವಿಷಯಭೋಗಗಳು – ಇವೆಲ್ಲ ಎಷ್ಟು ಬೇಕು ? ದೇಹವು ಆರೋಗ್ಯವಾಗಿದ್ದು, ಚಟುವಟಿಕೆಯಿಂದ ಕೆಲಸ ಮಾಡುವದಕ್ಕೆ ತಕ್ಕ ಸಾಧನವಾಗಿರಬೇಕಾದರೆ ಹಿತಮಿತವಾದ ಆಹಾರ, ವಿಹಾರ, ನಿದ್ರೆ – ಇವುಗಳು ಅವಶ್ಯ ; ರಾಗದ್ವೇಷವಿಲ್ಲದೆ ಅತ್ಯವಶ್ಯವಾದ ವಿಷಯಸೇವೆಯೂ ಬೇಕು. ಶರೀರವು ಕೊಬ್ಬಿ ಬೆಳೆಯುವದಕ್ಕೂ ರೋಗಗಳ ಗೂಡಾಗುವದಕ್ಕೂ ಅವಕಾಶವನ್ನು ಕಲ್ಪಿಸಿಕೊಳ್ಳುವವನು ದೇಹದ ಪ್ರಯೋಜನವನ್ನು ಅರಿಯನು.

೧೩೬. ಕಷ್ಟಪಟ್ಟು ಧರ್ಮಮಾರ್ಗದಿಂದ ದುಡಿದ ಆಹಾರವನ್ನು ಭಗವಂತನ ಪ್ರಸಾದವಾಗಿ ಮಾಡಿಕೊಂಡು ಭೋಜನಮಾಡುವದು ; ತನಗಾಗಿಯೂ ತನ್ನ ಪೋಷ್ಯವರ್ಗದವರಿಗಾಗಿಯೂ ಅತಿಥಿಅಭ್ಯಾಗತರಿಗಾಗಿಯೂ ಅನಾಥರ ಉಪಕಾರಕ್ಕಾಗಿಯೂ ದುಡಿಯುವದಕ್ಕೆ ದೇಹವನ್ನು ವಿನಿಯೋಗಿಸುವದು, ಭಗವಂತನ ಅರ್ಚನ, ನಮಸ್ಕಾರ, ತೀರ್ಥಕ್ಷೇತ್ರಗಳ ಪರ್ಯಟನಕ್ಕೆ ಅದನ್ನು ಹಾಕುವದು – ಇವೆಲ್ಲ ದೇಹದ ಸದ್ವಿನಿಯೋಗವೆನಿಸುವವು.

೧೩೭. ಮಹಾಯಜ್ಞಗಳಿಂದಲೂ ಯಜ್ಞಗಳಿಂದಲೂ ಈ ಶರೀರವು ಬ್ರಾಹ್ಮಣಶರೀರವಾಗುವದು ಎಂದು ಸ್ಮೃತಿಕಾರರು ಹೇಳುತ್ತಾರೆ. ಭಗವಂತನ ಸಂಬಂಧವಾದ ಆಚಾರಗಳಿಂದ ಶರೀರವು ನಿಜವಾಗಿಯೂ ಬ್ರಾಹ್ಮಣಶರೀರವಾಗುವದು. ಸ್ವೇಚ್ಛಾವಿಹಾರದಿಂದ ಕಂಡಕಂಡ ಆಹಾರವನ್ನು ನಿಯಮವಿಲ್ಲದೆ ಸೇವಿಸುವದರಿಂದಲೂ ಕಾಲನಿಯಮವಿಲ್ಲದೆ ನಿದ್ರೆಗೆ ವಶನಾಗುವದರಿಂದಲೂ ಯೋಗ್ಯಾಯೋಗ್ಯಕೃತ್ಯಗಳೆಂಬ ವಿಚಾರವಿಲ್ಲದೆ ವಿಷಯಭೋಗಗಳಿಗೆ ಅಡಿಯಾಳಾಗುವದರಿಂದಲೂ ಶರೀರವು ಚಂಡಾಲಶರೀರವಾಗುವದು.

೧೩೮. ದೇಹವು ದೇವಾಲಯವು, ಜೀವನೇ ಸನಾತನದೇವನು ; ಅಜ್ಞಾನನಿರ್ಮಾಲ್ಯವನ್ನು ತೆಗೆದು ಸೋऽಹಂಭಾವದಿಂದ ಪೂಜೆಮಾಡಬೇಕು– ಎಂಬುದೊಂದು ಅಭಿಯುಕ್ತರ ವಚನವು. ದೇಹವು ನಿಜವಾಗಿಯೂ ದೇವಾಲಯವಾಗಬೆ ೕಕಾದರೆ ಅದು ಶುದ್ಧಾಚಾರಗಳಿಂದ ನಿರ್ಮಲವಾಗಿರುವದು ಅತ್ಯಂತ ಅವಶ್ಯವು. ಇಂದ್ರಿಯಗಳಿಗೂ ಮನಸ್ಸಿಗೂ ದೈವಸಂಪತ್ತಿನ ವ್ಯವಹಾರವನ್ನು ಕಲಿಸಿಕೊಟ್ಟವರಿಗೆ ಮಾತ್ರವೇ ದೇಹವು ಪವಿತ್ರವಾದ ದೇವಾಲಯವಾಗುವದು. ಅಂಥವರ ಹೃದಯದಲ್ಲಿ ಮಾತ್ರವೇ ಆ ಸನಾತನ ದೇವನು ಪ್ರಕಟವಾಗುವನು.

೧೩೯. ಶರೀರವೆಂಬ ಶಬ್ದವು ಅದು ಬೇಗನೆ ನಾಶವಾಗುವ ದೆಂಬುದನ್ನು ಸೂಚಿಸುವದು ; ದೇಹವೆಂಬ ಶಬ್ದವು ಅದು ಕೆಲವು ದಿನಗಳೊಳಗೆ ದಗ್ಧವಾಗುವದೆಂಬುದನ್ನು ಸೂಚಿಸುವದು. ನಶ್ವರವಾದ ಈ ದೇಹವನ್ನು ಆದಷ್ಟು ಬೇಗನೆ ಸತ್ಸಾಧನಕ್ಕೆ ಉಪಯೋಗಿಸಿಕೊಳ್ಳುವವನೇ ಜಾಣನು.

೧೪೦. ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ – ಇವೆಲ್ಲ ಸೇರಿ ಒಂದೊಂದು ಕಾರ್ಯಕರಣಸಂಘಾತವೆನಿಸುವವು. ಸಂಹತವಾಗಿರುವ ಪದಾರ್ಥಗಳು ಒಂದಕ್ಕೊಂದು ಹೊಂದಿಗೆಯಿಂದ ಕೆಲಸಮಾಡುತ್ತಿರುವವು. ಆದ್ದರಿಂದ ದೇಹಕ್ಕನುಗುಣವಾಗಿ ಇಂದ್ರಿಯಮನೋಬುದ್ಧಿಗಳೂ ಇಂದ್ರಿಯ ಮನೋಬುದ್ಧಿಗಳಿಗನುಗುಣವಾಗಿ ದೇಹವೂ ಮಾರ್ಪಡುತ್ತಿರುವವು. ದೇಹ ವನ್ನು ಶುಚಿಯಾಗಿಟ್ಟುಕೊಂಡವನ ಇಂದ್ರಿಯಗಳೂ ಶುಚಿಯಾಗಿರುವದಕ್ಕೆ ಅವಕಾಶವಿರುತ್ತದೆ ; ಇಂದ್ರಿಯಾದಿಗಳನ್ನು ಶುಚಿಯಾಗಿಟ್ಟುಕೊಂಡವನಿಗೆ ದೇಹವನ್ನು ಶುಚಿಯಾಗಿಟ್ಟುಕೊಳ್ಳುವ ಬಲವು ಬರುತ್ತದೆ.

೧೪೧. ಸಂಹತವಾದದ್ದು ಪರಾರ್ಥವಾಗಿರುತ್ತದೆ. ದೇಹವು ದೇಹಕ್ಕಾಗಿಯಲ್ಲ, ದೇಹದ ಒಡೆಯನಿಗಾಗಿ ; ಇಂದ್ರಿಯಗಳು ಇಂದ್ರಿಯಗಳಿಗಾಗಿ ಯಲ್ಲ , ಇಂದ್ರಿಯಗಳುಳ್ಳವನಿಗಾಗಿ ; ಮನೋಬುದ್ಧಿಗಳೂ ಮನೋಬುದ್ಧಿಗಳಿ ಗಾಗಿಯಲ್ಲ, ಮನೋಬುದ್ಧಿಗಳಿರುವ ಆತ್ಮನಿಗಾಗಿರುವವು.

೧೪೨. ದೇಹೇಂದ್ರಿಯಗಳ ಸಂಘಾತವು ನಮಗೆ ತಮ್ಮತಮ್ಮ ವಿಷಯದ ಭೋಗವನ್ನುಂಟುಮಾಡುತ್ತಿರುತ್ತವೆ. ಆದರೆ ನಾವು ಈ ಸಂಘಾತದಿಂದಾಗುವ ಭೋಗಕ್ಕಾಗಿ ಜೀವಿಸಬಾರದು. ಒಂದು ಯಂತ್ರವು

ನಡೆಯಬೇಕಾದರೆ ಅದಕ್ಕೆ ನೀರಿನ ಆವಿಯಾಗಬಹುದು ; ಆ ಆವಿಗಾಗಿ ಕಲ್ಲಿದ್ದಲು ಮುಂತಾದ ಉರಿಯುವ ಸಾಮಾನು ಬೇಕಾಗಬಹುದು. ಆದರೆ ಯಂತ್ರವು ಆವಿಯನ್ನಾಗಲಿ, ಕಲ್ಲಿದ್ದಲು ಮುಂತಾದದ್ದನ್ನಾಗಲಿ ತಿನ್ನುವದಕ್ಕಾಗಿ ಹುಟ್ಟಿಲ್ಲ. ಅದಕ್ಕೆ ಮತ್ತೊಂದು ಬೇರೆಯ ಪ್ರಯೋಜನವಿದೆ. ಹಾಗೆ ನಾವು ದೇಹೇಂದ್ರಿಯಾದಿಗಳ ಸಂಘಾತದಿಂದೊಡಗೂಡಿರುವದು ವಿಷಯಗಳ ಭೋಗಕ್ಕಲ್ಲ. ಅಭ್ಯುದಯ– ನಿಃಶ್ರೇಯಸಗಳೆಂಬ ಪುರುಷಾರ್ಥಗಳೇ ನಮ್ಮ ಜೀವನದ ಗುರಿ.

೧೪೩. ನಾವು ಒಬ್ಬೊಬ್ಬರೂ ಒಂದೊಂದು ದೇಹೇಂದ್ರಿಯಗಳ ಸಂಘಾತಕ್ಕೆ ಗಂಟುಬಿದ್ದಿರುವೆವು. ಈ ಸಂಘಾತದ ಸಂಬಂಧದಿಂದ ನಮಗೆ ಹೆಂಡತಿ, ಮಕ್ಕಳು, ಹಣಕಾಸು, ಹೊಲಮನೆ – ಮುಂತಾದ ಬಾಹ್ಯಪರಿವಾರವು ಸಂಬದ್ಧವಾಗಿರುತ್ತದೆ. ನಾವು ಕುಟುಂಬದಲ್ಲಿದ್ದುಕೊಂಡು ಒಬ್ಬರಿಗೊಬ್ಬರು ಸಹಾಯಮಾಡಿಕೊಂಡಿರುವದು ಕರ್ತವ್ಯವಾದರೂ ಬರಿಯ ಹೊಟ್ಟೆಬಟ್ಟೆ ಮುಂತಾದ ಬಾಹ್ಯವಿಷಯಗಳ ರಾಶಿಗಾಗಿ ಮಾತ್ರವೇ ಹೀಗೆ ಒಟ್ಟುಗೂಡಿರುವೆವೆಂದು ಭಾವಿಸಬಾರದು. ಒಂದು ಕುಟುಂಬದವರ ಕ್ಷೇಮ, ಸ್ಥೈರ್ಯ, ವಿಜಯ, ಆಯುರಾರೋಗ್ಯಾದಿಗಳು ಇವೆಲ್ಲ ಬೇಕಾಗಿರುವದು ಯಂತ್ರಗಳಂತೆ ಸುಮ್ಮನೆ ಚಲನೆವಲನೆಗಳನ್ನು ಮಾಡಿಕೊಂಡಿರುವದಕ್ಕಲ್ಲ , ಪರಸ್ಪರಪುರುಷಾರ್ಥಕ್ಕೆ ಸಹಾಯಕರಾಗಿರುವದಕ್ಕೆ.

೧೪೪. ನಮ್ಮ ಕುಟುಂಬದವರು, ನೆಂಟರಿಷ್ಟರು, ಪರಿಚಯದ ವರು, ಸಮಾಜದವರು – ಇವರನ್ನೆಲ್ಲ ಈ ದೃಷ್ಟಿಯಿಂದಲೇ ನೋಡಬೇಕು. ನಮ್ಮಗಳೆಲ್ಲರ ಧರ್ಮಾರ್ಥಕಾಮಗಳೆಂಬ ತ್ರಿವರ್ಗವನ್ನು ಪರಸ್ಪರಸಹಕಾರದಿಂದ ಸಂಪಾದಿಸಿಕೊಳ್ಳುವ ರೀತಿಯಿಂದಲೇ ನಾವು ವರ್ತಿಸಬೇಕು. ನಮಗೆ ಹೇಗೆ ಮತ್ತೊಬ್ಬರಿಂದ ಒಳ್ಳೆಯದೇ ಆಗಬೇಕೆಂದು ನಾವು ಬಯಸುತ್ತೇವೆಯೋ ಹಾಗೆಯೇ ಅವರನ್ನೂ ನಾವು ಕಾಣಬೇಕೆಂಬುದು ಯುಕ್ತವಾಗಿದೆ. ನಮಗೆ ಮತ್ತೊಬ್ಬರು ಹೇಗೆ ಕೆಟ್ಟದ್ದನ್ನು ಮಾಡಬಾರದೋ ಹಾಗೆಯೇ ನಾವೂ ಮತ್ತೊಬ್ಬರಿಗೆ ಕೇಡನ್ನು ಬಗೆಯಬಾರದೆಂಬುದಕ್ಕೆ ಇದೇ ಕಾರಣ.

೧೪೫. ದೇಹೇಂದ್ರಿಯಾದಿಗಳ ಸಂಘಾತವು ನಮಗೆ ಒಂದೊಂದು ಜನ್ಮಕ್ಕೆ ಒಂದೊಂದು ಬರುತ್ತಿರುತ್ತದೆ ಎಂದು ತಿಳಿಯಬಾರದು. ಹೊರಗಿನ

ದೇಹವು ಬೇರೆಬೇರೆಯಾಗಿ ಬರುತ್ತಿದ್ದರೂ ಇಂದ್ರಿಯಮನೋಬುದ್ಧಿಗಳಿಂದೊಡಗೂಡಿದ ಪ್ರಾಣವು ತಾನೊಂದೇ ಮತ್ತೆ ಮತ್ತೆ ಕರ್ಮಾನುಗುಣವಾಗಿ ಶರೀರದಿಂದ ಶರೀರಕ್ಕೆ ಹೋಗುತ್ತಿರುವದು. ನಮ್ಮ ಇಂದ್ರಿಯಮನೋಬುದ್ಧಿಗಳ ಸಂಸ್ಕಾರಕ್ಕೆ ಅನುಗುಣವಾಗಿ ಆಯಾ ಶರೀರವನ್ನು ನಾವು ಉಪಯೋಗಿಸುತ್ತಿರುವೆವು. ಮತ್ತೆ ಮತ್ತೆ ಧರ್ಮಾಧರ್ಮಗಳನ್ನು ಮಾಡಿ ಮುಂದಿನ ಜನ್ಮದ ಶರೀರರಚನೆಗೆ ಕಾರಣರಾಗುತ್ತಿರುವೆವು.

೧೪೬. ಪ್ರತಿಯೊಬ್ಬ ಜೀವನೂ ಆಯಾ ಜನ್ಮದ ಶರೀರಕ್ಕೆ ಸಂಬಂಧಪಟ್ಟ ಬಂಧುಬಾಂಧವಾದಿಗಳನ್ನು ಸೇರಿದ್ದರೂ ಅವರು ಎಂದೆಂದಿಗೂ ತನ್ನೊಡನೆ ಬರುವರೆಂದು ಮಾತ್ರ ತಿಳಿಯಬಾರದು. ಒಂದೇ ರೈಲುಗಾಡಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದ ಮಾತ್ರದಿಂದ ಪ್ರಯಾಣಿಕರೆಲ್ಲರೂ ನಾವು ಹೋಗುವ ಊರಿಗೇ ಬರುವರೇನು ? ಪ್ರಯಾಣಿಕರ ಗುರಿಯು ಬೇರೆಬೇರೆಯಾಗಿರುವಂತೆ ನಮ್ಮೊಡನೆ ಸೇರಿರುವವರ ಮುಂದಿನ ಗತಿಯು ಬೇರೆಬೇರೆಯಾಗಿರುವದೆಂಬುದನ್ನು ನೆನಪಿನಲ್ಲಿಟ್ಟು ನಡೆಯಬೇಕು.

೧೪೭. ಶರೀರೇಂದ್ರಿಯಸಂಘಾತವು ಗೂಡಿನಿಂದ ಗೂಡಿಗೆ ಹೋಗುವ ಹಕ್ಕಿಯ ರೆಕ್ಕೆಪುಕ್ಕಗಳಂತೆ ಬರಿಯ ಚಲನಸಾಮಗ್ರಿಯಲ್ಲ , ಬರಿಯ ಭೋಗಸಾಮಗ್ರಿಯೂ ಅಲ್ಲ , ಅದು ಜ್ಞಾನಸಾಮಗ್ರಿಯೂ ಆಗಿರುತ್ತದೆ. ಈ ಸಂಘಾತವನ್ನು ಆತ್ಮಜ್ಞಾನಕ್ಕಾಗಿ ಯಾವನು ಉಪಯೋಗಿಸಿಕೊಳ್ಳುವನೋ ಅವನೇ ಜಾಣನು.

೧೪೮. ಜೀವನು ಸರ್ವಾತ್ಮನಾದ ಶ್ರೀವಿಷ್ಣುವಿನ ಪರಮಪದವನ್ನು ಸೇರುವದಕ್ಕೆ ಸೊಂಟಕಟ್ಟಿರುವ ಪ್ರಯಾಣಿಕನಾಗಿರುತ್ತಾನೆ, ಆದರೆ ತಮ್ಮ ಉದ್ದೇಶದ ನಗರಿಗೆ ಟಿಕೆಟ್ಟನ್ನು ಕೊಂಡುಕೊಂಡಿದ್ದರೂ ನಡುನಡುವಿನ ಸ್ಟೇಷನ್ನುಗಳಲ್ಲಿ ಮಾರಾಟಕ್ಕೆಂದು ಬರುವ ಹಲಸಿನಹಣ್ಣು , ಸೌತೇಕಾಯಿ, ಇಡ್ಲಿ , ಕಾಫಿ, ಬೋಂಡ, ಪಕೋಡ, ಬೀಡಿ, ವಿಳ್ಳೆದೆಲೆ – ಮುಂತಾದ ಕ್ಷುದ್ರ ಪದಾರ್ಥಗಳ ನಾಮಘೋಷಣೆ ಆದಕೂಡಲೆ ತಮ್ಮ ಗಂಟನ್ನು ಕೂಡ ನೋಡಿಕೊಳ್ಳುವ ಎಚ್ಚರಿಕೆಯನ್ನು ಬಿಟ್ಟು ಪ್ಲಾಟುಫಾರಮ್ಮಿನಮೇಲೆ ಅತ್ತಿತ್ತ ಯಾವ ಯೋಚನೆಯೂ ಇಲ್ಲದವರಂತೆ ತಿರುಗಾಡುತ್ತಿದ್ದು ಆಮೇಲೆ ತಟ್ಟನೆ ರೈಲಿನ ಸಿಳ್ಳನ್ನು ಕೇಳಿ ಬೇಗನೆ ಯಾವದಾದರೊಂದು ಗಾಡಿಯಲ್ಲಿ ಧುಮುಕಿಕೊಳ್ಳುವದಕ್ಕೆ

ಪ್ರಯತ್ನಿಸುತ್ತಿರುವಲ್ಲಿ ರೈಲು ಹೊರಟೇಹೋಗಲು ಬೆಪ್ಪರಾಗಿ ಮೂಗಿನ ಮೇಲೆ ಬೆರಳಿಟ್ಟುಕೊಂಡು ನೋಡುವ ಮೂರ್ಖರಂತೆ ಎಷ್ಟೋ ಜೀವರು ತಮ್ಮ ಜನ್ಮದ ಸಾರ್ಥಕ್ಯವೇನೆಂಬುದನ್ನು ಲಕ್ಷ್ಯದಲ್ಲಿಡದೆ ಅಲ್ಲಾಡಿ ಇಲ್ಲಾಡಿ, ವ್ಯರ್ಥಾಲಾಪ, ವ್ಯರ್ಥಾಹಾರವಿಹಾರಗಳಿಂದ ಜೀವನವನ್ನು ಕಳೆದು ಕೊನೆಯಲ್ಲಿ ಅಯ್ಯೋ, ಇನ್ನೂ ನಮ್ಮ ವ್ಯವಹಾರವು ಒಂದು ವ್ಯವಸ್ಥೆಗೆ ಬರಲೇ ಇಲ್ಲವಲ್ಲ , ಎಂದು ಕೊರಗುತ್ತಾ ಯಾವದೋ ದೇಹಾಂತರವನ್ನೈದುವರು.

೧೪೯. ಶರೀರ, ಇಂದ್ರಿಯ, ಪ್ರಾಣ, ಮನಸ್ಸು – ಮೊದಲಾದವುಗಳು ನಮ್ಮ ಮುಖ್ಯಪ್ರಯಾಣಕ್ಕೆ ಏರ್ಪಟ್ಟಿರುವ ರೈಲುಗಾಡಿಯಂತೆ ಇರುವವು ನಾವು ಕೂತುಕೊಳ್ಳುವ ರೈಲುಗಾಡಿಯನ್ನು ಚೊಕ್ಕಟವಾಗಿಟ್ಟುಕೊಂಡಿರುವದು ನಮಗೆ ಕರ್ತವ್ಯ ಮತ್ತು ಪ್ರಯೋಜನಕಾರಿ. ಆದರೆ ಆ ಗಾಡಿಯಲ್ಲಿರುವ ಸ್ಥಾನ (ಸೀಟು)ಗಳಿಗಾಗಿ ಹೋರಾಡುತ್ತಾ ಒಬ್ಬರ ಗಂಟನ್ನೊಬ್ಬರು ಅತ್ತಿತ್ತ ಜಗ್ಗಾಡುವದು, ಅಥವಾ ಮುಸರೆ, ಎಂಜಲು – ಮೊದಲಾದವುಗಳನ್ನು ತಿಂದು ಹೊಲಸು ಮಾಡುವದು– ಯಾರೊಬ್ಬರಿಗೂ ಯಾವ ಪ್ರಯೋಜನವನ್ನೂ ಮಾಡಿಕೊಡಲಾರದು, ಅದಕ್ಕೆ ಬದಲು ಎಲ್ಲರ ಮನಸ್ಸಿಗೂ ಅಸಹ್ಯವಾಗಬಹುದು. ಒಬ್ಬರ ವಿಷಯದಲ್ಲೊಬ್ಬರ ಮನಸ್ಸಿನಲ್ಲಿ ಬೇಸರವುಂಟಾಗಬಹುದು. ಮಾತುಗಳಿಂದ ಮೊದಲಾಗಿ ಕೈಕೈಗುದ್ದಾಟಕ್ಕೂ ಪ್ರಾರಂಭವಾಗಬಹುದು ; ಅಷ್ಟೆ. ಹೀಗೆ ದೇಹಾದಿಗಳನ್ನು ನಮ್ಮ ದೀರ್ಘಪ್ರಯಾಣಕ್ಕೆ ಸಾಧನವನ್ನಾಗಿ ಉಪಯೋಗಿಸಬೇಕೆನ್ನುವವರು ಅವನ್ನು ಪವಿತ್ರವಾಗಿಟ್ಟುಕೊಂಡು ನಮ್ಮ ಸುತ್ತಮುತ್ತಲಿನವರಿಗೂ ಹರ್ಷವನ್ನುಂಟುಮಾಡುವದು ನಮ್ಮ ಕರ್ತವ್ಯವು. ಆದರೆ ಇವುಗಳನ್ನು ಸ್ವೇಚ್ಛಾಚಾರದಿಂದ ಕೆಡಿಸಿಕೊಂಡು ಹತ್ತಿರಿರುವವರೆಲ್ಲರ ರಾಗದ್ವೇಷಗಳು ಬೆಳೆಯುವದಕ್ಕೆ ಕ್ಷೇತ್ರವಾಗಿ ಮಾಡಿಕೊಳ್ಳುವದು ಯಾರೊಬ್ಬರಿಗೂ ಹಿತಕರವಲ್ಲ.

೧೫೦. ಪರಮಾತ್ಮನು ಈಗಲೇ ಇಲ್ಲಿಯೇ ನಮ್ಮ ಆತ್ಮನಾಗಿದ್ದುಕೊಂಡಿದ್ದರೂ ಅವನನ್ನು ಮುಟ್ಟುವದಕ್ಕೆ ನಾವು ಹಿಡಿದಿರುವ ದಾರಿಯು ಬಲು ದೂರವಾಗಿರುವದು. ನಾಲಿಗೆಯ ಚಾಪಲ್ಯವನ್ನು ನೀಗಿಕೊಳ್ಳುವದಕ್ಕಾಗಿ ಪ್ರಯಾಣದ ಟಿಕೆಟ್ಟನ್ನೇ ವ್ಯರ್ಥಮಾಡಿಕೊಳ್ಳುವ ಮೂರ್ಖರಂತೆ ನಾವು ಎಂದಿಗೂ ನಮ್ಮ ಪರಮಧ್ಯೇಯವನ್ನು ಮುಟ್ಟುವದಕ್ಕೆ ಅಡ್ಡಿಯಾಗುವ ಕ್ಷುದ್ರಕಾಮಗಳಿಗೆ ನಾಲಗೆಯನ್ನು ನೀಡಬಾರದು. ನಡುವೆ ಆಯಾ ಸ್ಟೇಷನ್ನುಗಳಲ್ಲಿ ಸಿಕ್ಕಬಹುದಾದ ಭೋಗಸಾಮಗ್ರಿಗಳನ್ನು ಅನುಕೂಲವಾದಂತೆ ಕೊಂಡು

ಅಥವಾ ಕೊಳ್ಳದೆ ಮುಂದಕ್ಕೆ ಸಾಗುವ ಜಾಣಪಯಣಿಗರಂತೆ ನಾವು ಬೇರೆ ಬೇರೆಯ ಶರೀರಗಳಲ್ಲಿ ದೊರಕಬಹುದಾದ ಭೋಗಗಳನ್ನು ಯಥಾಸಂಭವ ವಾಗಿ ಉಪಯೋಗಿಸಿಕೊಂಡು ಅಥವಾ ತಿರಸ್ಕರಿಸಿ ಮುಂದೆ ಹೋಗಿ ಮಜಲು ಮುಟ್ಟಬೇಕು.

೧೫೧. ಶರೀರಕ್ಕೆ ಭೋಗವು ಬೇಕು. ಬೇರೆಬೇರೆಯ ವಿಷಯಗಳ ಅನುಭವದಿಂದಾಗುವ ಜ್ಞಾನವೂ ಬೇಕು. ಆದರೆ ಭೋಗಕ್ಕಾಗಿ ಜ್ಞಾನವನ್ನು ಸಂಪಾದಿಸುವವನು ಮೂರ್ಖನು. ಜ್ಞಾನಕ್ಕಾಗಿ ಜೀವಿಸಿರಬೇಕಾಗಿರುವದರಿಂದ ತತ್ತತ್ಕಾಲದಲ್ಲಿ ಒದಗಿಬಂದ ಭೋಗಗಳನ್ನು ಆಶೆಯಿಲ್ಲದೆ ಭೋಗಿಸಿಕೊಂಡು ಮುಂದೆ ಸಾಗುವವನು ಜಾಣನು.

೧೫೨. ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಮನೋಬುದ್ಧಿ ಗಳು – ಇವು ಪ್ರತಿಯೊಂದು ಜೀವಿಯನ್ನೂ ಜನ್ಮಜನ್ಮಾಂತರಕ್ಕೂ ಹಿಂಬಾಲಿಸಿ ಕೊಂಡು ಬರುತ್ತಿರುವವು. ಆ ಜೀವನ ತಿಳಿವಳಿಕೆ, ವಾಸನಾ, ಹೊಸ ಅನುಭವ – ಇವುಗಳಿಗನುಗುಣವಾಗಿ ಇವುಗಳ ಒಟ್ಟಾಗಿರುವ ಸೂಕ್ಷ್ಮಶರೀರದಲ್ಲಿ ಏನಾದರೊಂದು ಮಾರ್ಪಾಡು ಆಗುತ್ತಲೇ ಇರುವದು. ಮನೋಬುದ್ಧಿಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳದೆ ಇಂದ್ರಿಯಗಳನ್ನು ಹರಿಯಬಿಟ್ಟಿರುವ ಜೀವನು ಮತ್ತಷ್ಟು ಸಂಸಾರದ ಸಂಕೋಲೆಗಳನ್ನು ಹಾಕಿಕೊಳ್ಳುತ್ತಿರುವನು. ಆದರೆ ಯಾವನು ಸಜ್ಜನ, ಸಚ್ಛಾಸ್ತ್ರಗಳ ಲಾಭವನ್ನು ಪಡೆದು ಮನಇಂದ್ರಿಯಗಳನ್ನು ಸ್ವಾಧೀನ ದಲ್ಲಿಟ್ಟುಕೊಂಡು ಸುಸಂಸ್ಕಾರವನ್ನು ಕೂಡಿಹಾಕಿಕೊಳ್ಳುತ್ತಾ ಹೋಗುವನೋ ಅವನೇ ಈ ದೀರ್ಘಪಯಣದ ಕೊನೆಯನ್ನು ಮುಟ್ಟುವನು. ಆ ಪರಮಾತ್ಮನಾದ ವಿಷ್ಣುವನ್ನು ಸಾಕ್ಷಾತ್ಕರಿಸಿಕೊಳ್ಳುವನು.

೧೫೩. ಈ ಜನ್ಮದ ಧ್ಯೇಯವು ಹೆಂಡಿರುಮಕ್ಕಳಲ್ಲ, ಕ್ಷೇತ್ರವಿತ್ತಾದಿ ಗಳಲ್ಲ, ವಿದ್ಯಾಖ್ಯಾತಿಗಳಲ್ಲ, ಅಧಿಕಾರಧನಸಂಪತ್ತಲ್ಲ. ಈ ಕ್ಷುದ್ರಲಾಭಗಳಿಗಾಗಿ ಜನ್ಮವನ್ನು ಸೂರೆಗೊಡದಿರಿ. ಸರ್ವಾತ್ಮನಾದ ಮಹಾವಿಷ್ಣುವನ್ನು ಸೇವಿಸಿ ನಿತ್ಯಾನಂದದಿಂದಿರುವದೇ ನಿಮ್ಮ ಗುರಿಯು. ಈ ಗುರಿಯನ್ನು ಹಿಂದಕ್ಕೆ ಒತ್ತದಿರಿ. ಮತ್ತೊಂದನ್ನು ಕಣ್ಣೆತ್ತಿ ನೋಡದಿರಿ.

೧೫೪. ಊಟಕ್ಕೆ ಕುಳಿತವನಿಗೆ ಹಸಿವಾಗಿದ್ದರೆ ಅವನು ಊಟದ ಎಲೆಯ ವಿಚಾರವನ್ನು ಅಷ್ಟಾಗಿ ಮಾಡುವದಿಲ್ಲ ; ಅದು ಊಟಕ್ಕೆ ಸಾಧನ

ಮಾತ್ರವೆಂದು ತಿಳಿದು ಉಪೇಕ್ಷಿಸುವನು. ಶಾಸ್ತ್ರದಲ್ಲಿ ವರ್ಣಿಸಿರುವ ವರ್ಣಗಳೂ ಆಶ್ರಮಗಳೂ ಮುಮುಕ್ಷುವಾದವನಿಗೆ ಮೋಕ್ಷಕ್ಕೆ ಸಾಧನಮಾತ್ರವಾಗಿರುವವು. ಅವನು ತಾನಿರುವ ವರ್ಣವನ್ನು ಅಥವಾ ಆಶ್ರಮವನ್ನು ಮೋಕ್ಷಕ್ಕೆ ಬೇಕಾದ ಸಾಧನಮಾತ್ರವೆಂದು ತಿಳಿದು ಅದರ ವಿಷಯದಲ್ಲಿ ಯಾವ ಅಭಿಮಾನವೂ ಇಲ್ಲದೆ ಇರುವನು.

೧೫೫. ಮತಗ್ರಂಥಗಳೂ ಮತಾಚಾರ್ಯರೂ ನಮ್ಮ ಸ್ವರೂಪವನ್ನು ತಿಳಿಯಿಸುವದರಿಂದ ಮುಖವನ್ನು ಪ್ರತಿಬಿಂಬಿಸುವ ಕನ್ನಡಿಯಂತೆ ಇರುತ್ತಾರೆ. ಕನ್ನಡಿಯಲ್ಲಿ ತನ್ನ ಮುಖದ ಪ್ರತಿಬಿಂಬವನ್ನು ಕಂಡವನು ಮುಖದ ಸ್ವರೂಪವನ್ನೂ ತಿಳಿದುಕೊಂಡೆನೆಂದು ಭಾವಿಸುವನೇ ಹೊರತು ಕನ್ನಡಿಯ ರೂಪಾಕಾರಗಳಿಗೂ ಅದರಲ್ಲಿ ಕಂಡ ಪ್ರತಿಬಿಂಬದ ಭೇದಗಳಿಗೂ ಮರುಳಾಗುವದಿಲ್ಲವಷ್ಟೆ ?

೧೫೬. ಗರಡಿಯ ಮನೆಯ ಸಾಧನೆಯೂ ಸೇನೆಗೆ ಸೇರಿದಾಗ ಮಾಡುವ ಕವಾಯತ್ತೂ ಸ್ವತಂತ್ರವಾಗಿ ಸ್ವಪ್ರಧಾನವಾಗಿರುವದೆಂದು ಯಾವನುತಾನೆ ಭಾವಿಸುತ್ತಾನೆ ? ಗರಡಿಯ ಸಾಧನೆಯ ಬೆಲೆ ಕುಸ್ತಿಯ ಕಾಲದಲ್ಲಿ ಗೊತ್ತಾಗಬೇಕು ; ಕವಾಯತ್ತಿನ ಬೆಲೆ ಯುದ್ಧರಂಗದಲ್ಲಿ ತಿಳಿಯಬೇಕು. ಇದರಂತೆ ನಾವು ಮಾಡುವ ಜಪ, ಉಪವಾಸ, ಪೂಜೆ – ಮುಂತಾದವುಗಳು ತಾವೇ ಸ್ವಪ್ರಧಾನದ ಬೆಲೆಯುಳ್ಳವಲ್ಲ ; ಅವು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಎಷ್ಟರಮಟ್ಟಿಗೆ ಸಾಧನವೋ ಅಷ್ಟರಮಟ್ಟಿಗೇ ಅವಕ್ಕೆ ಬೆಲೆ. ಆದ್ದರಿಂದ ತಮ್ಮ ಅಧ್ಯಾತ್ಮಸಾಧನಗಳನ್ನು ಪ್ರದರ್ಶನಮಾಡುವದೂ ಅವುಗಳ ವಿಷಯವಾಗಿ ಮತ್ತೊಬ್ಬರಲ್ಲಿ ಕೊಚ್ಚಿಕೊಳ್ಳುವದೂ ಮೂರ್ಖತನವು.

೧೫೭. ನಿಮ್ಮ ಸ್ನೇಹಿತರಿಗೆ ಶಕ್ಯವಲ್ಲದ ಯೋಗಾಸನಗಳನ್ನು ಹಾಕುವದಕ್ಕೆ ಬಂದರೆ, ಅವರಿಗೆ ಸಾಧ್ಯವಿಲ್ಲದ ಇಂದ್ರಿಯಪಾಟವವು ನಿಮಗೆ ಸಿದ್ಧಿಸಿದ್ದರೆ ಅಷ್ಟರಿಂದ ಹಿಗ್ಗಬೇಡಿರಿ. ದೂರದರ್ಶಿತ್ವ, ಆಕಾಶಯಾನ, ನೀರಿನ ಮೇಲೆ ಸಂಚರಿಸುವದು, ದೀರ್ಘಕಾಲ ಉಸಿರುಕಟ್ಟುವದು – ಇವು ಮನುಷ್ಯರಲ್ಲದ ಕೀಳುಪ್ರಾಣಿಗಳಲ್ಲಿ ಕೂಡ ಕಾಣುವವು. ಅವನ್ನು ಸಿದ್ಧಪುರುಷರೆನ್ನುವರೇನು ?

೧೫೮. ವೇದದಲ್ಲಿಯೂ ಉಪನಿಷತ್ತುಗಳಲ್ಲಿಯೂ ಭಗವದ್ಗೀತೆಯಲ್ಲಿಯೂ ಪರಮಾರ್ಥವನ್ನೂ ಪರಮಾರ್ಥಸಾಧನವನ್ನೂ ಬಹುವಾಗಿ ವರ್ಣಿಸಿದೆ. ಆದರೆ ವೇದಾಧ್ಯಯನ, ಉಪನಿಷಚ್ಛ್ರವಣ, ಗೀತಾಪಾರಾಯಣ – ಇವುಗಳಿಂದಲೇ ಯಾವ ಸಿದ್ಧಾಂತವಾಗಲಿ ಸಾಧನವಾಗಲಿ ಅಳವಟ್ಟಿತೆಂದು ಹೇಳುವದಕ್ಕೆ ಬರುವದಿಲ್ಲ. ರೇಡಿಯೊ ಮೂಲಕ ಎಷ್ಟೋ ರಾಜಕೀಯವಿಚಾರಗಳನ್ನು ಪ್ರಚಾರಮಾಡುತ್ತಾರೆ ; ಸಂಗೀತಗಳನ್ನು ಜನರಿಗೆ ತಿಳಿಸಿಕೊಡುತ್ತಾರೆ. ಆದ ಮಾತ್ರಕ್ಕೆ ರೇಡಿಯೊ ಯಂತ್ರವು ರಾಜನೀತಿದಕ್ಷನೆಂದೂ ಸಂಗೀತವಿದ್ವಾಂಸನೆಂದೂ ಎನ್ನಿಸಿಕೊಳ್ಳುವದೇನು ?

೧೫೯. ದೀಕ್ಷೆಗಳು, ನಾಮಗಳು, ತುಳಸೀರುದ್ರಾಕ್ಷಾದಿಮಾಲೆಗಳು– ಇವೇ ಮುಂತಾದ ಹೊರಗಿನ ಚಿಹ್ನೆಗಳು ಮನಸ್ಸಿನ ಒಳಗಿನ ಸ್ಥಿತಿಯ ಚಿಹ್ನೆಗಳಾಗಿದ್ದರೆ ಮಾತ್ರ ಅವಕ್ಕೆ ಬೆಲೆ. ಮನೆಯ ಗೋಡೆಗಳನ್ನು ಸುಣ್ಣ, ಕೆಮ್ಮಣ್ಣು ಚಿತ್ರ – ಮುಂತಾದವುಗಳಿಂದ ಅಲಂಕರಿಸಿದ್ದರೆ ಅಷ್ಟುಮಾತ್ರದಿಂದ ಮನೆಯೊಳಗೆ ಹಬ್ಬಹರಿದಿನಗಳಾಗುತ್ತಿವೆಯೆಂದು ಊಹಿಸಬಹುದೇನು ?

೧೬೦. ಅಧ್ಯಾತ್ಮತತ್ತ್ವಗಳನ್ನು ಬರಿಯ ಗ್ರಂಥಗಳಿಂದಲೇ ತಿಳಿದುಕೊಳ್ಳಬಹುದೆಂಬ ಆಶೆಯನ್ನಿಟ್ಟುಕೊಳ್ಳಬಾರದು. ಸಂಗೀತದ ಪುಸ್ತಕಗಳಿಂದಲೇ ಸಂಗೀತವನ್ನು ಕಲಿತುಕೊಳ್ಳವದೂ ಪ್ರೌಢಗಣಿತಗ್ರಂಥಗಳಿಂದಲೇ ಗಣಿತಶಾಸ್ತ್ರದ ಮರ್ಮವನ್ನು ವಶಪಡಿಸಿಕೊಳ್ಳುವದೂ ಸಾಮಾನ್ಯರಿಗೆ ಆಗುವ ಮಾತಲ್ಲವಷ್ಟೆ !

೧೬೧. ಪ್ರೌಢವಾದ ವಿಷಯಗಳನ್ನೊಳಗೊಂಡಿರುವ ತತ್ತ್ವವಿಚಾರದ ಗ್ರಂಥಗಳಿಗಿಂತಲೂ ಆಚಾರವಿಚಾರಗಳನ್ನು ತಮ್ಮ ನಡೆನುಡಿಗಳಿಂದ ತಿಳಿಸಬಲ್ಲ ಗುರುಗಳೇ ಹೆಚ್ಚು ಸಹಾಯಕರಾಗಿರುವರು. ಗ್ರಂಥಗಳನ್ನು ಹೇಗೆ ಬೇಕಾದರೂ ಓದಿ ಏನು ಬೇಕಾದರೂ ಅರ್ಥಮಾಡಿಕೊಳ್ಳಬಹುದು. ಆದರೆ ತತ್ತ್ವೋಪದೇಶಕನಾದ ಸದ್ಗುರುವಿನ ಬೋಧೆಯ ಪರಿಣಾಮವು ಎಂದಿಗೂ ನಿಷ್ಫಲವಾಗದು. ಕೋಟೆಯ ಗೋಡೆಯ ಮೇಲೆ ಚಿತ್ರಿಸಿರುವ ಯೋಧರ ಸೇನೆಗಿಂತಲೂ ನಿಜವಾಗಿ ಕಾದಬಲ್ಲ ಹತ್ತಾರು ಸಿಪಾಯಿಗಳೇ ಮೇಲಲ್ಲವೆ ?

೧೬೨. ದೇಶದೇಶಗಳಲ್ಲಿ ಪ್ರಖ್ಯಾತಿಯನ್ನು ಹೊಂದಿರುವದರಿಂದಾಗಲಿ ರಾಶಿಹಾಕಿಕೊಂಡಿರುವ ಪುಸ್ತಕಗಳಿಂದಾಗಲಿ ಸೇವೆಗೆಂದು ಇಟ್ಟುಕೊಂಡಿರುವ

ಶಿಷ್ಯರುಗಳ ಸಂಖ್ಯೆಯಿಂದಾಗಲಿ ಯಾರೊಬ್ಬರನ್ನೂ ಗುರುವೆಂದು ಆರಿಸಿಕೊಳ್ಳುವದಕ್ಕೆ ಹವಣಿಸಬಾರದು. ನಿಷ್ಪ್ರಯೋಜನವಾದ ವಸ್ತುಗಳಿಗೂ ವರ್ತಮಾನಪತ್ರಿಕೆಗಳಲ್ಲಿ ಪ್ರಕಟನೆ ಹೆಚ್ಚಾಗಿರುತ್ತದೆ. ಮಹಾವಿದ್ವಾಂಸರ ಮಕ್ಕಳುಗಳ ಮನೆಯಲ್ಲಿ ಪುಸ್ತಕಗಳು ಅಲ್ಲಲ್ಲಿಯೇ ರಾಶಿರಾಶಿಯಾಗಿ ಬಿದ್ದಿರಬಹುದು. ಆಶೋತ್ತರಗಳನ್ನು ತೋರಿಸಿ ನೂರಾರು ಜನ ಅನುಯಾಯಿಗಳನ್ನು ಎಷ್ಟೋ ಜನರು ಇಟ್ಟುಕೊಂಡಿರಬಹುದು.

೧೬೩. ಇತರ ಮತಾಚಾರ್ಯರುಗಳನ್ನು ಮನಬಂದಂತೆ ನಿಂದಿಸುತ್ತಿರುವವನೂ ತನ್ನ ಸಾಧನವನ್ನೂ ಜ್ಞಾನವನ್ನೂ ಆಗಾಗ್ಗೆ ಕೊಚ್ಚಿಕೊಳ್ಳುತ್ತಿರುವವನೂ, ಧನಸಂಗ್ರಹ, ವಿಷಯ ಭೋಗದ ಆಕಾಂಕ್ಷೆ – ಇವುಗಳನ್ನು ತೋರಿಸುತ್ತಿರುವವನೂ ಎಂದಿಗೂ ಮತ್ತೊಬ್ಬರಿಗೆ ಗುರುವಾಗಲಾರನು. ತಾನೇ ತಿರುಕನಾಗಿರುವವನು ಬಡವರಿಗೆಲ್ಲ ಅನ್ನಸಂತರ್ಪಣೆ ಮಾಡಲಾಪನೆ ?

೧೬೪. ವಾಗ್ವೈಖರಿಯಿಂದಲಾಗಲಿ, ಶಾಸ್ತ್ರವ್ಯಾಖ್ಯಾನದಲ್ಲಿರುವ ಕೌಶಲದಿಂದಲಾಗಲಿ, ವಾದದಲ್ಲಿ ಮತ್ತೊಬ್ಬರನ್ನು ಬಾಯಿಮುಚ್ಚಿಸುವ ಜಾಣತನದಿಂದಲಾಗಲಿ, ಒಬ್ಬನು ಒಳ್ಳೆಯ ಉಪದೇಶಕನಾಗಬಹುದೆಂದು ಆಶಿಸಬೇಡಿರಿ. ಸದ್ಗುರುವಾದವನು ಮೌನದಿಂದಲೇ ಇದ್ದು ಆಸ್ತಿಕರ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡಬಲ್ಲನು ; ವಿವಿಧಶಾಸ್ತ್ರಗಳ ಪ್ರದರ್ಶನವಿಲ್ಲದಿದ್ದರೂ ಹೃದಯವನ್ನು ಅರಳಿಸುವ ಸದುಪದೇಶವನ್ನು ಮಾಡುವನು. ಅವನಿಗೆ ವಾದವಿವಾದಗಳು ಹುಂಜಗಳ ಜೂಜಿನಂತೆಯೂ ಟಗರುಗಳ ಕಾದಾಟದಂತೆಯೂ ವೈರಸ್ಯವನ್ನುಂಟುಮಾಡುವವು.

೧೬೫. ಯಾವನ ದರ್ಶನಮಾತ್ರದಿಂದ ಮನಸ್ಸಿನ ಸಾಂಸಾರಿಕ ಭಾವಗಳು ಹಾರಿಹೋಗುವವೋ, ಯಾವನ ಹಿತೋಕ್ತಿಗಳಿಂದ ಮನುಷ್ಯನ ದರ್ಪಾಹಂಕಾರಗಳು ಅಡಗಿಬಿಡುವವೋ, ಯಾವನ ತತ್ತ್ವಬೋಧೆಯಿಂದ ಚಿತ್ತದ ರೋಗವು ಅಡಗಿ ವಿಷಯಗಳಲ್ಲಿ ವೈರಾಗ್ಯವುಂಟಾಗಿ ಪರಮೇಶ್ವರನಲ್ಲಿಯೇ ಭಕ್ತಿಯು ನೆಲೆನಿಂತುಬಿಡುವದೋ ಅವನೇ ಸದ್ಗುರುವು. ಇಂಥ ಮಹಾತ್ಮನ ರೂಪ, ವೇಷ, ಕುಲ, ಧನ, ಶಿಷ್ಯಸಂಪತ್ತು – ಮುಂತಾದವುಗಳನ್ನು ಎತ್ತೆಣಿಸಿ ಕುಹಕದ ಮಾತುಗಳನ್ನು ಎಂದಿಗೂ ಆಡಬಾರದು.

೧೬೬. ನಾಟಕದಲ್ಲಿರುವ ಸೇನಾಪತಿಗಳಿಂದ ನಮ್ಮ ಅಂಜಿಕೆಯು ಎಂದಿಗೂ ಕಡಿಮೆಯಾಗುವದಿಲ್ಲ. ನಮ್ಮೂರಿನ ಪೋಲೀಸು ದಫೇದಾರನೇ ಅವರಿಗಿಂತ ಎಷ್ಟೋ ಉತ್ತಮ. ವೇಷಧಾರಿ ಗುರುಗಳ ದಂಡಿಗಿಂತಲೂ ನಿಜವಾದ ಅಧ್ಯಾತ್ಮಸಾಧನವನ್ನು ಬೋಧಿಸಬಲ್ಲ ಸಾಮಾನ್ಯ ಉಪದೇಶಕನೇ ಉತ್ತಮ.

೧೬೭. ಪಾಕಶಾಸ್ತ್ರದ ಭಕ್ಷ್ಯಭೋಜ್ಯಗಳನ್ನು ಪಟ್ಟಿಮಾಡಿ ಹೇಳುವವನಿಗಿಂತ ಅನ್ನ ಸಾರು ಮಾಡಿ ಬಡಿಸುವವನೇ ಉತ್ತಮ. ದೊಡ್ಡದೊಡ್ಡ ಘನತತ್ತ್ವಗಳನ್ನು ಕುರಿತು ಉಪನ್ಯಾಸಮಾಡುವವನಿಗಿಂತ ಅನುಭವಕ್ಕೆ ಬರುವ ಯಾವದಾದರೊಂದು ತತ್ತ್ವವನ್ನು ಉಪದೇಶಮಾಡುವ ಗುರುವೇ ಮೇಲು.

೧೬೮. ಸದ್ಗುರುಚರಣವಾಗಲಿ ಸಚ್ಛಾಸ್ತ್ರವಾಗಲಿ ಪರಮೇಶ್ವರನ ದಯೆಯಿಲ್ಲದೆ ಎಂದಿಗೂ ದೊರಕಲಾರದು. ಅದು ದೊರಕಿದ ಮೇಲೆ ಅದರ ಸದುಪಯೋಗವನ್ನು ಮಾಡಿಕೊಳ್ಳದೆ ಇರುವದು ಮೂರ್ಖತನವು. ಅನೇಕ ವರ್ಷಗಳಿಂದ ಬಯಸಿ ಕಾಶಿಗೆ ಹೋದಬಳಿಕವೂ ಗಂಗಾಸ್ನಾನವನ್ನು ಮಾಡದೆ ಇರುವದು ಎಂಥ ಅವಿವೇಕ !

೧೬೯. ಸದ್ಗುರುವಿನ ಉಪಯೋಗವನ್ನು ಮಾಡಿಕೊಳ್ಳುವದಕ್ಕೆ ಮೊದಲು ನಮ್ಮಲ್ಲಿ ಶಿಷ್ಯಲಕ್ಷಣಗಳಿರಬೇಕು. ಸದ್ಗುರುವು ಶ್ರೋತ್ರಿಯನಾಗಿರಬಹುದು ; ಆದರೆ ನಮಗೆ ಶಾಸ್ತ್ರದಲ್ಲಿ ಅಭಿರುಚಿಯೇ ಇಲ್ಲದಿದ್ದರೆ ಆತನು ಯಾವ ಶಾಸ್ತ್ರವಾಕ್ಯದಿಂದ ನಮ್ಮನ್ನು ತೃಪ್ತಿಗೊಳಿಸಿಯಾನು ? ಕುರುಡನಾದವನಿಗೆ ಬೀದಿಯಲ್ಲಿರುವ ವಿದ್ಯುದ್ದೀಪದ ಬೆಳಕು ಹೇಗೆ ಸಹಾಯಮಾಡೀತು ?

೧೭೦. ಮನೆಯಲ್ಲಿ ಹಾಲುಕರೆಯುವ ಕಾಮಧೇನುವಿದ್ದರೂ ಅದರ ಹಾಲು ತನಗೆ ಬೇಕೆಂಬ ಹಂಬಲಿಕೆಯಿಲ್ಲದವನಿಗೆ ಯಾವ ಪ್ರಯೋಜನವೂ ಆಗಲಾರದು. ಸದ್ಗುರುವಿನ ಉಪದೇಶದಿಂದ ಕೃತಾರ್ಥನಾಗಬೇಕೆಂಬ ಹಂಬಲಿಕೆಯಿಲ್ಲದವನು ಆ ಗುರುವಿನ ಬಳಿಯಲ್ಲಿಯೇ ಇದ್ದರೂ ಯಾವ ಪ್ರಯೋಜನವೂ ಆಗಲಾರದು.

೧೭೧. ಕಣ್ಣಿಲ್ಲದವನಿಗೆ ಯಾವ ವಸ್ತುವಿನ ಸೌಂದರ್ಯವೂ ಚಿತ್ತಾಕರ್ಷಕವಾಗಲಾರದು ; ಕಿವಿಯಿಲ್ಲದವನಿಗೆ ಎಂಥ ಇಂಪಾದ ಗಾನವೂ ಮನಸ್ಸಿಗೆ ಉಲ್ಲಾಸವನ್ನುಂಟುಮಾಡಲಾರದು. ಯೌವನದ ಉಕ್ಕು ಇಲ್ಲದವನ ಮನಸ್ಸನ್ನು ಯಾವ ತರುಣಿಯೂ ಸೆಳೆಯಲಾರಳು. ಇದರಂತೆ ಶಮದಮಾದಿ

ಗಳೂ ವೈರಾಗ್ಯವೂ ಮುಮುಕ್ಷುತೆಗಳೂ ಇಲ್ಲದವನಿಗೆ ಬ್ರಹ್ಮನಿಷ್ಠನಾದ ಸದ್ಗುರುವಿನ ಉಪದೇಶವು ಎಂದಿಗೂ ಸೊಗಸಲಾರದು.

೧೭೨. ಒಬ್ಬ ಸಾಹುಕಾರನು ನೆರೆಮನೆಯಲ್ಲಿದ್ದ ಬಡವರ ಹುಡುಗನೊಬ್ಬನನ್ನು ದತ್ತುತೆಗೆದುಕೊಂಡನು. ಅಂದಿನಿಂದ ಆ ಹುಡುಗನಿಗೆ ಊಟ, ಉಪಚಾರ, ಉಡಿಗೆತೊಡಿಗೆಗಳು, ಪಾಠಶಾಲೆಯಲ್ಲಿ ವಿದ್ಯಾಭ್ಯಾಸ, ಆಳುಕಾಳುಗಳ ಸೌಕರ್ಯ – ಇವೆಲ್ಲವೂ ದೊರೆತವು. ಇದರಂತೆ ಸಂಸಾರದಲ್ಲಿ ಅನಾಥನಾಗಿ ಅಲೆಯುತ್ತಿರುವವನು ಸದ್ಗುರುವಿನ ಪವಿತ್ರಪಾದಗಳಿಗೆ ಎರಗಿದರೆ ಅಂದಿನಿಂದ ಅವನಿಗೆ ಪರಮಾರ್ಥದ ಉಪದೇಶವೂ ಭಗವಂತನ ಭಕ್ತಿಯ ಮರ್ಮವೂ ಮನಸ್ಸಿನ ಸಾತ್ತ್ವಿಕಪರಿವರ್ತನೆಯೂ ದೊರಕುವವು.

೧೭೩. ಗುರುವಿನ ಬಳಿಯಲ್ಲಿರುವವನು ಸಮಯವರಿತು ತನಗೆ ಬೇಕಾದ ವಿಷಯಗಳನ್ನು ಕುರಿತು ಪ್ರಶ್ನೆಮಾಡುತ್ತಿರಬೇಕು. ಅಳದೆ ಇರುವ ಮಗುವಿಗೆ ಯಾವ ತಾಯಿತಾನೆ ಹಾಲುಕುಡಿಸುವಳು ?

೧೭೪. ಗುರುವಿನೊಡನೆ ವಾದವಿವಾದವನ್ನು ಮಾಡಬಾರದು. ಆತನ ಉಪದೇಶಾಮೃತವನ್ನು ಕುಡಿಯುವದಕ್ಕೆ ಮಾತ್ರ ಕಿವಿಗಳನ್ನು ಸಜ್ಜುಗೊಳಿಸಬೇಕು. ತಾನು ತಿಳಿದದ್ದನ್ನು ತಿಳಿಸುವದಕ್ಕಲ್ಲ , ಗುರುವಿನ ಬಳಿಗೆ ಬಂದಿರುವದು ; ಆತನ ಉಪದೇಶದಿಂದ ಕೃತಾರ್ಥನಾಗುವದಕ್ಕೆ. ಬಡವನಾದವನು ಸಾಹುಕಾರನ ಮನೆಗೆ ಬಂದಾಗ 'ನಿಮಗೆ ಹಣಕಾಸಿನ ಕೊರತೆಯೇನಾದರೂ ಇದೆಯೆ ?' ಎಂದು ಕೇಳುವನೇನು ?

೧೭೫. ಸದ್ಗುರುವಿನ ಸೇವೆಯಿಂದ ಪಾಪವು ನಾಶವಾಗುವದು, ಚಿತ್ತವು ಶುದ್ಧವಾಗುವದು, ಮನಸ್ಸಿಗೆ ವಿಚಾರಶಕ್ತಿಯು ಬರುವದು, ಬುದ್ಧಿಯು ಕೇಳಿದರ್ಥವನ್ನು ನಿಶ್ಚಯಿಸಿಕೊಳ್ಳುವದಕ್ಕೆ ತಕ್ಕದ್ದಾಗುವದು. ಆದ್ದರಿಂದ ಗುರುಸೇವೆಗೆ ಎಂದಿಗೂ ಹಿಂಜರಿಯಬಾರದು, ನಾಚಿಕೊಳ್ಳಬಾರದು. ಕೃಷಿಕನಾದವನು ಹೊಲವನ್ನು ಉಳುವದು, ಗೊಬ್ಬರಹಾಕುವದು, ಬಿತ್ತುವದು, ನೀರು ಹಾಯಿಸುವದು – ಮುಂತಾದ ಕಾರ್ಯಗಳಿಗೆ ಬೇಸತ್ತರೆ ಹೇಗೆತಾನೆ ಅವನಿಗೆ ಉತ್ತಮವಾದ ಪೈರು ಸಿಕ್ಕೀತು ?

೧೭೬. ಸದ್ಗುರುವಾದವನನ್ನು ಮನುಷ್ಯನೆಂದು ಎಂದಿಗೂ ಭಾವಿಸಬಾರದು. ಅವನೊಡನೆ ಹಾಸ್ಯದ ಮಾತನ್ನಾಗಲಿ ಸಲಿಗೆಯ ಸಂಭಾಷಣೆ

ಯನ್ನಾಗಲಿ ಎಂದಿಗೂ ಮಾಡಬಾರದು. ಅವನಲ್ಲಿ ಯಾವದಾದರೂ ಕುಂದು ಕೊರತೆಗಳು ಕಂಡರೂ ಅವುಗಳ ಕಡೆಗೆ ಕಣ್ಣುಹಾಕದೆ ಆತನ ಅನುಗ್ರಹಕ್ಕೇ ಪಾತ್ರನಾಗಬೇಕು. ಸಾಲಗ್ರಾಮಶಿಲೆಯನ್ನು ತೂಕದ ಕಲ್ಲಾಗಿ ಉಪಯೋಗಿಸುವವನೂ ಅದೊಂದು ಒಡಕುಕಲ್ಲೆಂದು ಅಸಡ್ಡೆ ಮಾಡುವವನೂ ಅದನ್ನು ಹೇಗೆ ತಾನೆ ಪೂಜಿಸಿ ಪುಣ್ಯವನ್ನು ಸಂಪಾದಿಸಿಕೊಂಡಾನು ?

೧೭೭. ಸದ್ಗುರುವಿನಿಂದ ಆಗಬೇಕಾದ ಉಪಯೋಗವೇನು ? ಯಾವದೋ ಒಂದು ಮಂತ್ರೋಪದೇಶ, ಯಾವದೋ ಒಂದು ದೀಕ್ಷೆ, ಯಾವದೋ ಒಂದು ಸಿದ್ಧಿ – ಇವುಗಳಿಗಾಗಿ ಕಾದುಕೊಂಡಿರುವ ಶಿಷ್ಯರು ಅನೇಕರಿರುವರು. ಆದರೆ ನಡೆನುಡಿಗಳಿಂದ ವಿಷಯಗಳಲ್ಲಿ ವೈರಾಗ್ಯವೂ ಆತ್ಮಜ್ಞಾನದಲ್ಲಿ ಹೆಚ್ಚಿನ ಇಚ್ಛೆಯೂ ಅಂತರ್ಮುಖತ್ವವೂ ನಿಜವಾದ ಗುರುವಿನಿಂದ ದೊರಕಬೇಕಾದ ಫಲಗಳು. ಒಂದು ಮಾವಿನ ಮರವು ನೆರಳು, ಕಟ್ಟಿಗೆ – ಮುಂತಾದವನ್ನು ಕೊಡಬಹುದು ; ಆದರೆ ಅದರ ಹಣ್ಣಿಗಾಗಿಯಲ್ಲವೆ, ನಾವು ಅದನ್ನು ಹಾಕಿಕೊಂಡಿರುವದು ?

೧೭೮. ತತ್ತ್ವಜ್ಞಾನವನ್ನು ಮಂತ್ರೋಪದೇಶದಂತೆ ಕೇವಲೋಪದೇಶದಿಂದ ಪಡೆದುಕೊಳ್ಳುವದಕ್ಕಾಗುವದಿಲ್ಲ. ಗ್ರಂಥಗಳಲ್ಲಿರುವ ಅನಾತ್ಮ ವಿಚಾರಗಳನ್ನು ಅರಿತುಕೊಳ್ಳುವಂತೆ ಆತ್ಮಜ್ಞಾನವನ್ನು ತರ್ಕದಿಂದ ಅರಿತುಕೊಳ್ಳುವದಕ್ಕೂ ಆಗುವದಿಲ್ಲ. ಏಕೆಂದರೆ ಸ್ವತಃಸಿದ್ಧವಾದ ಆತ್ಮವಸ್ತುವನ್ನು ತಿಳಿಯುವದಕ್ಕೆ ತರ್ಕವು ಬೇಕಿರುವದಿಲ್ಲ. ಆದ್ದರಿಂದ ಅನಾತ್ಮವಾದ ದೇಹಾದಿಗಳಲ್ಲಿರುವ ಅಭಿಮಾನವನ್ನು ತಗ್ಗಿಸುವದೇ ಇಲ್ಲಿ ಬೇಕಾಗಿರುವದು. ಸದ್ಗುರುವಾದವನ ಅನುಗ್ರಹದಿಂದ ಆತ್ಮಾನಾತ್ಮಗಳಿಗೆ ಬಿದ್ದಿರುವ ಕಗ್ಗಂಟು ಬಿಚ್ಚಿಹೋಗುವದು. ಇದಕ್ಕೇ ಗ್ರಂಥಿಭೇದವೆಂದು ಹೆಸರು.

೧೭೯. ಪೇಟೆಗೆ ಹೋದರೆ ವಸ್ತುಗಳ ಬೆಲೆಯ ವಿಚಾರವು ಮನಸ್ಸಿಗೆ ಹತ್ತಿಕೊಳ್ಳುವದು ; ಬ್ರಾಡ್‌ಕ್ಯಾಸ್ಟ್ ಕೇಳುವದಕ್ಕೆ ಹೋದರೆ ನಾನಾದೇಶಗಳ ವಾರ್ತೆಯ ವಿಚಾರವು ಹತ್ತಿಕೊಳ್ಳುವದು ; ಭೋಜನಸಮಾರಂಭಕ್ಕೆ ಹೋದರೆ ಭಕ್ಷ್ಯಭೋಜ್ಯಗಳ ವಿಚಾರವು ಹತ್ತಿಕೊಳ್ಳುವದು. ಅಲ್ಲವೆ ? ಇದರಂತೆ ಸದ್ಗುರುವಿನ ಬಳಿಯಲ್ಲಿ ಪರಮೇಶ್ವರನ ವಿಚಾರವು ಮನಸ್ಸಿಗೆ ಹತ್ತಿಕೊಳ್ಳುತ್ತದೆ.

೧೮೦. ಸದ್ಗುರು, ಸಚ್ಛಾಸ್ತ್ರ – ಇವು ಎರಡೂ ಅಮೂಲ್ಯವಾದ ರತ್ನಗಳು. ಪರಮೇಶ್ವರನ ಅನುಗ್ರಹವಾಗುವವರೆಗೂ ಈ ರತ್ನಗಳು ಯಾವನೊಬ್ಬನಿಗೂ ದೊರಕಲಾರವು. ಆದ್ದರಿಂದ ಎಡೆಬಿಡದೆ ಪರಮೇಶ್ವರನ ಸ್ಮರಣೆ ಮಾಡುತ್ತಿರಬೇಕು. ಸದ್ಗುರು, ಸಚ್ಛಾಸ್ತ್ರ – ಈ ಎರಡು ರೂಪಗಳಿಂದ ಪರಮೇಶ್ವರನೇ ನಮಗೆ ಕೃಪೆಯಿಂದ ಮೈದೋರುವನು.

೧೮೧. ಮುಮುಕ್ಷುತ್ವವೆಂಬುದು ಒಂದು ಬಗೆಯ ಹಸಿವು. ಹಸಿವಿಲ್ಲದವನಿಗೆ ಎಂಥ ಮೃಷ್ಟಾನ್ನವನ್ನು ಎದುರಿಗೆ ಬಡಿಸಿದ್ದರೆತಾನೆ ಏನು ಪ್ರಯೋಜನ ? ಬುಭುಕ್ಷುಗಳಿಗೆ ಮಾತ್ರವೇ ಭೋಜನದ ಸವಿ ಹತ್ತುವಂತೆ ಮುಮುಕ್ಷುಗಳಿಗೆ ಮಾತ್ರವೇ ಅಧ್ಯಾತ್ಮವಿಚಾರಗಳು ಸೊಗಸುವವು.

೧೮೨. ಒಂದು ಮದುವೆಯ ಸಮಾರಂಭದಲ್ಲಿ ಬಗೆಬಗೆಯ ಭಕ್ಷ್ಯಗಳನ್ನು ಬೀಗರಿಗೆ ಮಾಡಿ ಬಡಿಸಿದ್ದರು. ಆದರೆ ಆ ಬೀಗರು ಮೊದಲೇ ಕಾಫಿ, ಫಲಾಹಾರ – ಮುಂತಾದವುಗಳಿಂದ ತೃಪ್ತರಾಗಿದ್ದರು. ಆದ್ದರಿಂದ ಅವರು ಬಡಿಸಿದ್ದನ್ನು ಅತ್ತಿತ್ತ ಸರಿಯಿಸುವದು, ಭಕ್ಷ್ಯಗಳನ್ನು ಮಾಡಿದ್ದ ಬಗೆಯಲ್ಲಿ ತಪ್ಪನ್ನು ಕಂಡುಹಿಡಿಯುವದು, ಅಥವಾ ಯಾವದೋ ರಾಜಕೀಯವಿಚಾರಗಳ ಮಾತಿನಿಂದ ಕಾಲಹರಣಮಾಡುವದು– ಹೀಗೆ ಉದಾಸೀನರಾಗಿದ್ದರು. ಪ್ರಾಪಂಚಿಕವಿಷಯಗಳ ಸೇವನೆಯಿಂದ ತೃಪ್ತರಾಗಿ ಅಧ್ಯಾತ್ಮವಿಚಾರವು ಬೇಕಿಲ್ಲದವರಿಗೆ ಎಂಥ ಉತ್ತಮ ವಿಚಾರಗಳನ್ನು ಮುಂದಿಟ್ಟರೂ ಅವರು ಬೇರೆಯ ವಿಷಯಗಳ ಮಾತನ್ನು ಪ್ರಸ್ತಾಪಿಸುವದು, ಅಥವಾ ಉಪದೇಶಕರ ಭಾಷೆಯಲ್ಲಿರುವ ವ್ಯಾಕರಣದೋಷಗಳನ್ನು ಹುಡುಕುವದು– ಮುಂತಾದ ರೀತಿಗಳಿಂದ ಉದಾಸೀನರಾಗಿರುತ್ತಾರೆ.

೧೮೩. ಹರಿಕಥೆಯನ್ನು ಕೇಳುವದಕ್ಕೆ ಬಂದಿರುವವರಲ್ಲಿ ಅನೇಕರು ಕೀರ್ತನಕಾರನ ವೇಷ, ರೂಪು, ವಿದ್ಯೆ, ಸಂಗೀತ – ಮುಂತಾದವುಗಳನ್ನು ನೋಡುವದರಲ್ಲಿಯೇ ಕಾಲವನ್ನು ಕಳೆಯುತ್ತಾರೆ. ಅವನು ಹೇಳುವ ಹರಿಕಥೆಯು ಅವರ ಮನಸ್ಸಿಗೆ ಹತ್ತುವದೇ ಇಲ್ಲ ; ಉಪಕಥೆಯನ್ನು ಕೇಳುವಾಗ ಕಿವಿಗಳು ನೆಟ್ಟಗಾಗುವವು. ಯಾರು ನಿಜವಾಗಿ ಮುಮುಕ್ಷುಗಳಾಗಿರುವರೋ ಅವರಿಗೆ ಮಾತ್ರ ಸದ್ಗುರುವಿನ ಉಪದೇಶವು ಸವಿಹತ್ತುವದು ; ಮಿಕ್ಕವರಿಗೆ ಗುರುವಿನ ವೇಷಭಾಷಾಚರ್ಯಾದಿಗಳ ಕಡೆಗೇ ಕಣ್ಣು ಹೋಗುತ್ತದೆ.

೧೮೪. ಪುರಾಣಶ್ರವಣ, ಭಜನೆ, ನಾಮಸ್ಮರಣೆ, ಸಾಧನಗಳ ಅನುಷ್ಠಾನ ಇವು ಯಾವನಿಗೆ ರುಚಿಸುವದಿಲ್ಲವೋ ಇವುಗಳನ್ನು ಮಾಡುವದನ್ನು ಯಾವನು ಹಾಸ್ಯಮಾಡುತ್ತಿರುವನೋ ಅವನಿಗೆ ಅಧ್ಯಾತ್ಮದ ಅಭಿಲಾಷೆ ಇಲ್ಲವೆಂದು ನಿಶ್ಚಯಿಸಬೇಕು. ಊಟದ ವೇಳೆಗೆ ಪೇಟೆಗೆ ಹೋಗಬೇಕೆಂದು ನಿತ್ಯವೂ ಜನರನ್ನು ಕರೆಯುತ್ತಿರುವವನಿಗೆ ಆಗ್ಗೆ ಹಸಿವಾಗಿಲ್ಲವೆಂದೇ ನಿಶ್ಚಯಿಸಬೇಕಷ್ಟೆ.

೧೮೫. ಸತ್ತ್ವ, ರಜಸ್ಸು, ತಮಸ್ಸು – ಎಂಬ ಮೂರು ಗುಣಗಳಿರುವವೆಂದೂ ಎಲ್ಲಾ ಪದಾರ್ಥಗಳೂ ಈ ಗುಣತ್ರಯದ ಕಾರ್ಯವೆಂದೂ ಸಾಂಖ್ಯರು ಹೇಳುತ್ತಾರೆ. ಸಾಮಾನ್ಯವಾಗಿ ಮನುಷ್ಯನ ಅಂತಃಕರಣದಲ್ಲಿ ಈ ಮೂರು ಗುಣಗಳೂ ಬೆರೆತುಕೊಂಡೇ ಇರುತ್ತವೆ. ಕಡಲೆ, ಹುರುಳಿ – ಮುಂತಾದ ಧಾನ್ಯಗಳನ್ನು ಬೆಳೆಯುವ ಹೊಲದಲ್ಲಿ ಬರಿಯ ಆಯಾ ಧಾನ್ಯದ ಗಿಡಗಳೇ ಇರುವದಿಲ್ಲ. ಬೇರೆಯ ಕೆಲವು ಕ್ಷುದ್ರಧಾನ್ಯಗಳ ಗಿಡಗಳೂ ಬೆಳೆದುಕೊಂಡೇ ಇರುತ್ತವೆ. ಮೊದಲೇ ಚೆನ್ನಾಗಿ ಉತ್ತು ಹರಗದೆ ಇರುವ ಹೊಲದಲ್ಲಿ ಕಳೆಯು ಬೆಳೆದುಕೊಳ್ಳುವದು ಸ್ವಾಭಾವಿಕವಷ್ಟೆ. ಹೀಗೆಯೇ ಯಾವ ಸಂಸ್ಕಾರವೂ ಇಲ್ಲದ ಪ್ರಾಪಂಚಿಕರ ಮನಸ್ಸಿನಲ್ಲಿ ಮೂರು ಗುಣಗಳೂ ಬಗೆಬಗೆಯ ಪ್ರಮಾಣದಲ್ಲಿ ಬೆರೆತುಕೊಂಡೇ ಇರುತ್ತವೆ, ಆದ್ದರಿಂದ ಪ್ರಾಪಂಚಿಕರ ಮನಸ್ಸಿನ ಫಲವು ಈ ಗುಣಗಳ ಮಿಶ್ರಣವೇ ಆಗಿರುತ್ತದೆ.

೧೮೬. ಮನಸ್ಸಿಗೆ ಸತ್ತ್ವವೆಂದೂ ಹೆಸರುಂಟು. ಸತ್ತ್ವಗುಣವೇ ಮನಸ್ಸಿಗೆ ಸ್ವಾಭಾವಿಕವಾದದ್ದು. ಆದರೆ ಎಚ್ಚರಿಕೆಯಿಂದ ನೋಡಿಕೊಳ್ಳದ ಹೂದೋಟದಲ್ಲಿ ಒಳ್ಳೊಳ್ಳೆಯ ಹೂಗಿಡಗಳಿಗಿಂತ ದತ್ತೂರಿ, ತುಂಬೆ – ಮುಂತಾದ ಗಿಡಗಳೇ ಹೆಚ್ಚಾಗಿ ಬೆಳೆದುಕೊಳ್ಳುವಂತೆ ಪ್ರಾಪಂಚಿಕರ ಮನಸ್ಸಿನಲ್ಲಿ ಸತ್ತ್ವಗುಣದ ಭಾವನೆಗಳಿಗಿಂತ ರಜಸ್ತಮೋಗುಣಗಳ ಭಾವನೆಗಳೇ ಹೇರಳವಾಗಿ ಹೊರಹೊಮ್ಮುತ್ತಿರುವವು.

೧೮೭. ಒಂದೆರಡು ದತ್ತೂರಿಗಿಡಗಳು, ತುಂಬೆಗಿಡಗಳು ಅಥವಾ ಮಿರಜೀ ಮುಳ್ಳಿನ ಬಳ್ಳಿಗಳು ಅವಕಾಶವನ್ನು ಪಡೆದ ಹೊಲದಲ್ಲಿ ಬಲುಬೇಗನೆ ಎಲ್ಲೆಲ್ಲಿಯೂ ಅವೇ ಹರಡಿಕೊಂಡುಬಿಡುವವು. ಇದರಂತೆ ಒಂದೆರಡು ರಾಜಸತಾಮಸಭಾವನೆಗಳಿಗೆ ಎಡೆಯಿತ್ತವನ ಮನಸ್ಸಿನಲ್ಲಿ ಬಲುಬೇಗನೆ ಅವೇ

ಬೇರೂರಿಕೊಂಡುಬಿಡುತ್ತವೆ. ತುಂಬೆಗಿಡವು ಆವರಿಸಿಕೊಂಡಿರುವ ಹೊಲವು ಹೇಗೆ ಪೈರು ಬೆಳೆಯುವದಕ್ಕೆ ಅಯೋಗ್ಯವಾಗಿರುವದೋ ಹಾಗೆ ರಾಜಸತಾಮಸ ಗುಣಗಳ ಪ್ರಾಪಂಚಿಕಮನಸ್ಸು ಅಧ್ಯಾತ್ಮವಿಚಾರಗಳನ್ನು ಬೆಳೆಯಿಸುವದಕ್ಕೆ ಅಯೋಗ್ಯವಾಗಿರುತ್ತದೆ.

೧೮೮. ಹೂಗಿಡಗಳೂ ತರಕಾರಿಯ ಗಿಡಬಳ್ಳಿಗಳೂ ಆಹಾರ ಧಾನ್ಯದ ಪೈರೂ ಬಹಳ ಪ್ರಯತ್ನದಿಂದ ಬೆಳೆಸಿದರೂ ಕೈಗೆ ಬರುವ ಫಲವನ್ನು ಕೊಡುವಂತಾಗುವದು ಕಷ್ಟ. ಗೊಬ್ಬರವನ್ನು ಹಾಕಿ ನೀರುಹಾಯಿಸಿದಮೇಲೂ ದನಕರುಗಳ ಅಥವಾ ಕ್ರಿಮಿಕೀಟಗಳ ಹಾವಳಿಯಿಂದ ಅವು ನಡುವೆ ಹಾಳಾಗಬಹುದು. ಆದರೆ ಮುಳ್ಳುಗಿಡಗಳು ಯಾವ ಆರೈಕೆಯೂ ಇಲ್ಲದೆಯೇ ಹುಲುಸಾಗಿ ಬೆಳೆಯುವವು ; ಅವನ್ನು ನಾಶಪಡಿಸುವದೇ ಕಷ್ಟ. ಇದರಂತೆ ಪ್ರಾಪಂಚಿಕವಾದ ನಡೆನುಡಿಗಳೂ ದುರ್ವ್ಯಸನಗಳ ಭಾವನೆಗಳೂ ಯಾರ ಪ್ರೇರಣೆಯನ್ನೂ ಬಯಸದೆ ಬಲುಬೇಗನೆ ಮನುಷ್ಯರಲ್ಲಿ ನಿಂತು ಬೆಳೆದುಕೊಳ್ಳುತ್ತವೆ. ಅವುಗಳಿಂದ ತಪ್ಪಿಸಿಕೊಳ್ಳುವದಕ್ಕೆ ಎಷ್ಟು ಪ್ರಯತ್ನಿಸಿದರೂ ಅವು ಬೇಗನೆ ಹೋಗುವದಿಲ್ಲ. ಆದರೆ ಶಾಂತಿದಾಂತ್ಯಾದಿಗಳೂ ಭಕ್ತಿಜ್ಞಾನವೈರಾಗ್ಯಪ್ರಧಾನವಾದ ಭಾವನೆಗಳೂ ಎಷ್ಟು ಸಾಧನೆಮಾಡಿದರೂ ಮನಸ್ಸಿನಲ್ಲಿ ನಿಲ್ಲುವದೂ ಬೆಳೆದುಕೊಳ್ಳುವದೂ ಕಷ್ಟತರವಾಗಿರುತ್ತದೆ.

೧೮೯. ಬೆಳ್ಳುಳ್ಳಿಯನ್ನು ತಿಂದ ಹಸುವಿನ ಹಾಲು ಬೆಳ್ಳುಳ್ಳಿಯ ವಾಸನೆಯಿಂದಲೇ ಕೂಡಿರುತ್ತದೆ. ಇದರಂತೆ ವಿಷಯಭೋಗದಲ್ಲಿ ಮುಳುಗಿ ರುವವರ ಮಾತಿನಲ್ಲಿ ವಿಷಯವಾಸನೆಯೇ ಎದ್ದುಕಾಣುತ್ತಿರುತ್ತದೆ.

೧೯೦. ಬೆಳ್ಳುಳ್ಳಿಯ ವಾಸನೆಯ ಹಾಲನ್ನು ಹಾಕಿದ ಪಾತ್ರೆಯನ್ನು ಎಷ್ಟು ಉಜ್ಜಿ ತೊಳೆದರೂ ಒಂದಿಷ್ಟಾದರೂ ಅದರ ವಾಸನೆಯು ಪಾತ್ರೆಗೆ ಅಂಟಿಕೊಂಡೇ ಇರುತ್ತದೆ. ವಿಷಯವಾಸನೆಯ ಜನರ ಸಂಗದಲ್ಲಿದ್ದವನು ಎಷ್ಟು ಅಧ್ಯಾತ್ಮಸಾಧನಗಳನ್ನು ಮಾಡಿದರೂ ಮನಸ್ಸಿನಲ್ಲಿ ಒಂದಿಷ್ಟಾದರೂ ವಿಷಯವಾಸನೆಯು ಇಲ್ಲದೆ ಇರುವದಿಲ್ಲ.

೧೯೧. ಹೆಂಗಸರು, ಹಣ, ನಾಸ್ತಿಕರು – ಮುಂತಾದವರ ಸಂಗವು ವಿಷಯಸಂಗವು ಬಲವಾಗುವದಕ್ಕೆ ಸಹಕಾರಿಯಾಗಿರುತ್ತದೆ. ಈ ಸಂಗದಲ್ಲಿಯೇ ರತರಾಗಿರುವವರ ಸಂಗವು ವಿಷಯಸಂಗಕ್ಕೆ ಮತ್ತಷ್ಟು ಪ್ರೋತ್ಸಾಹಕವಾಗಿರು

ತ್ತದೆ. ಅವರ ಸಂಗದಲ್ಲಿರುವವರಿಗೆ ನಾವು ವಿಷಯಸಂಗಕ್ಕೆ ಸಿಲುಕಿಬಿದ್ದಿರುವೆವೆಂಬ ಅರಿವೇ ಇರುವದಿಲ್ಲ. ಹೊಸದಾಗಿ ದನದ ಕೊಟ್ಟಿಗೆಗೆ ಬಂದವರಿಗೆ ಗಂಜಲವೇ ಮುಂತಾದದ್ದರ ವಾಸನೆಯು ಮೂಗಿಗೆ ಕೂಡಲೆ ತಟ್ಟುತ್ತದೆ. ಆದರೆ ಕೊಟ್ಟಿಗೆಯ ಒಂದು ಭಾಗದಲ್ಲಿಯೇ ನಿರಂತರವಾಗಿ ವಾಸವಾಗಿರುವವರಿಗೆ ಆ ವಾಸನೆಯಿದೆ– ಎಂಬುದರ ಅರಿವು ಇರುವದೇ ಇಲ್ಲವಲ್ಲವೆ ?

೧೯೨. ದೂರದ ಹಳ್ಳಿಯಲ್ಲಿರುವವರಿಗೆ ಪಟ್ಟಣದಲ್ಲಿರುವವರ ಗದ್ದಲವು ಒಗ್ಗುವದಿಲ್ಲ. ಪಟ್ಟಣದಲ್ಲಿಯೂ ಊರ ಹೊರಭಾಗದಲ್ಲಿರುವವರಿಗೆ ಊರೊಳಗೆ ಇರುವ ಜನರ ಗದ್ದಲವು ಒಗ್ಗುವದಿಲ್ಲ. ಆದರೆ ರೈಲುನಿಲ್ದಾಣ, ಗಿರಣಿ – ಮುಂತಾದ ಕಡೆಗಳಲ್ಲಿರುವವರು ಎಷ್ಟು ಗಲಾಟೆಯಾದರೂ ಅದು ಇದೆ ಎಂಬ ಅರಿವೇ ಇಲ್ಲದೆ ತಮ್ಮ ವ್ಯವಹಾರವನ್ನು ಸಲೀಸಾಗಿ ಮಾಡಿಕೊಂಡು ಹೋಗುವರು. ಇದರಂತೆ ಪರಮಾತ್ಮನ ಧ್ಯಾನದಲ್ಲಿರುವ ಏಕಾಂತವಾಸಿಗಳಿಗೆ ಒಂದಿಷ್ಟು ಸದ್ದಾದರೂ ಮನಸ್ಸಿಗೆ ವಿಕ್ಷೇಪವಾಗುತ್ತದೆ. ಆದರೆ ಪ್ರಾಪಂಚಿಕರಿಗೆ ತಮ್ಮ ವ್ಯವಹಾರದಲ್ಲಿ ಆಗುತ್ತಲೇ ಇರುವ ಅಳು, ಗದರಿಕೆ, ಜಗಳ – ಮುಂತಾದವುಗಳ ಸದ್ದೂ ವೀಣೆಯ ಧ್ವನಿಯಂತೆ ಇಂಪಾಗಿ ಕಾಣುತ್ತಿರುತ್ತದೆ.

೧೯೩. ಒಂದು ಮಗು ಮೊದಲು ಹುಟ್ಟಿದಾಗ ಅದನ್ನು ಒಂದು ಮೊರದಲ್ಲಿ ಮಲಗಿಸುತ್ತಾರೆ. ಅದಕ್ಕೊಂದು ಸಣ್ಣ ಅರಿವೆಯನ್ನು ಹೊದಿಸಿದರೆ ಸಾಕಾಗಿರುತ್ತದೆ. ಆದರೆ ಮನುಷ್ಯನು ದೊಡ್ಡವನಾದ ಮೇಲೆ ಅವನಿಗೆ ಎಷ್ಟು ದೊಡ್ಡ ಮನೆಯಾದರೂ ಸಾಲದಾಗಿರುತ್ತದೆ. ಅವನ ಉಡಿಗೆತೊಡಿಗೆಗಳನ್ನು ಇಟ್ಟುಕೊಳ್ಳುವದಕ್ಕೆ ನಾಲ್ಕಾರು ಪೆಟ್ಟಿಗೆಗಳೂ ಸಾಲದಾಗುತ್ತವೆ. ಹೊರಗಿನ ಅರಿವು ಹೆಚ್ಚಿದಂತೆ ಮನುಷ್ಯನ ಬೇಕುಗಳೂ ಹೆಚ್ಚುತ್ತವೆ. ಇದು ಮಾಯೆಯ ವಿಲಾಸ.

೧೯೪. ಹುಟ್ಟಿದ ಮಗುವಿಗೆ ಮೊದಲು ಎಣ್ಣೆಯ ಬತ್ತಿಯನ್ನು ಚೀಪಿಸುತ್ತಾರೆ. ಕೆಲವು ದಿನಗಳಾದ ಮೇಲೆ ಅದಕ್ಕೆ ತಾಯಿಯ ಸ್ತನ್ಯವನ್ನು ಊಡಿಸುತ್ತಾರೆ. ಮುಂದೆ ಹಸುವಿನ ಹಾಲು, ಪಾಯಸ, ಭಕ್ಷ್ಯಭೋಜ್ಯಗಳು, ಲೇಹ್ಯಚೋಷ್ಯಗಳು – ಇವುಗಳ ಸವಿ ಹತ್ತುತ್ತದೆ. ವಯಸ್ಕನಾದ ಮೇಲೆ ಮನುಷ್ಯನಿಗೆ ಪಾಕಶಾಸ್ತ್ರದಲ್ಲಿ ಹೇಳಿರುವ ನೂರಾರು ಅಡಿಗೆಗಳೂ ಸಾಲದೆನಿಸುವವು. ಅಡಿಗೆಯನ್ನು ಎಷ್ಟು ನಾಗರಿಕತೆಯಿಂದ ಮಾಡಿದರೂ ಅವನ ನಾಲಗೆಯು

ಇನ್ನೂ ಸ್ವಲ್ಪ ಉತ್ತಮವಾಗಿ ಮಾಡಿದ್ದರೆ ಸವಿಯಾಗಿರುತ್ತಿತ್ತು- ಎಂದು ಹೇಳುವದಕ್ಕೆ ಮೊದಲುಮಾಡುತ್ತದೆ. ಮಾಯೆಯನ್ನು ಸವಿದಂತೆಲ್ಲ ಮನುಷ್ಯನ ನಾಲಗೆ ಚುರುಕಾಗುತ್ತದೆ.

೧೯೫. ಹುಟ್ಟಿದ ಮಗುವಿನ ಕಣ್ಣಿಗೆ ಮಿನುಗುಟ್ಟುವ ಹರಳೆಣ್ಣೆಯ ದೀಪವೇ ಅತ್ಯಾಶ್ಚರ್ಯವಾದ ನೋಟವಾಗಿರುತ್ತದೆ. ಮಗುವು ಹುಡುಗನಾದ ಮೇಲೆ ಬೆಂಕಿ, ಮಿಂಚು, ನಕ್ಷತ್ರಗಳು, ಚಂದ್ರ, ಸೂರ್ಯ - ಇವುಗಳ ಬೆಳಕೂ ಸಾಲದಾಗುವದು. ನೂರಾರು ವಿದ್ಯುದ್ದೀಪಗಳಿಂದ ಅಲಂಕೃತವಾದ ನಾಟಕ ರಂಗದಲ್ಲಿ ಬೆಳಕು ಸಾಲದೆನ್ನುವವರೂ ಉಂಟು. ಮಾಯೆಯ ಬೆಳಕನ್ನು ಕಂಡಷ್ಟೂ ಮನುಷ್ಯನ ಕುರುಡು ಹೆಚ್ಚುವದು.

೧೯೬. ಚಿಕ್ಕಮಗುವಿನ ಕಿವಿಗೆ ತಾಯಿಯ ಮೃದುವಾದ ಮಾತೇ ಇಂಪಾಗಿರುವದು. ಅದು ತೊಟ್ಟಿಲಲ್ಲಿರುವಾಗ ಜೋಗುಳದ ಹಾಡಿಗೆ ಮನ ಸೋತು ನಿದ್ರೆಹೋಗುವದು. ಹುಡುಗನಿಗೆ ಗುರುಹಿರಿಯರು ಹೇಳಿಕೊಡುವ ಪುಸ್ತಕಪಾಠವೂ ಬೇಕು. ಇನ್ನೂ ದೊಡ್ಡವನಾದ ಮೇಲೆ ಸಂಗೀತವೇ ಅಲ್ಲದೆ ಜನಗಳ ಬಯ್ಗುಳು, ಬಂಡಿಮೋಟಾರುಗಳ ಗದ್ದಲ, ಸಂತೆಯ ದೊಂಬಿ, ಮದ್ದು ಗುಂಡುಫಿರಂಗಿಗಳ ಆರ್ಭಟ - ಇವೇ ಮುಂತಾದ ಶಬ್ದಗಳೆಲ್ಲ ಅವನಿಗೆ ಸಹಜವಾಗುವವು. ಸಹಜವಾದ ನಿಶ್ಶಬ್ದಸ್ವರೂಪವನ್ನು ಮರೆಯಿಸುವದು ಮಾಯೆಯ ಸ್ವಭಾವವಷ್ಟೆ !

೧೯೭. ನಾವು ಹುಡುಗರಾಗಿದ್ದಾಗ ಮರಗಿಡಬಳ್ಳಿಗಳ ಎಲೆ-ಹೂ ಹಣ್ಣುಗಳು ಒಂದು ಬಗೆಯ ಸುವಾಸನೆಯನ್ನು ಕೊಡುವಂತೆ ಕಾಣುತ್ತಿತ್ತು, ಒಂದಿಷ್ಟು ಊದುಬತ್ತಿಯನ್ನು ಹತ್ತಿಸಿದರೆ ಮನೆಯೆಲ್ಲ ಘಮಘಮಿಸುವಂತೆ ಕಾಣು ತ್ತಿತ್ತು, ಸಹಜವಾದ ಒಂದೆರಡು ಹೂಗಳ ವಾಸನೆಯೂ ದೇವರಿಗೆ ಅರ್ಪಿಸಿದ ಶ್ರೀಗಂಧದ ಶೇಷವೂ ನಮಗೆ ಪರಿಮಳವಾಗಿ ಕಾಣುತ್ತಿದ್ದವು. ಆದರೆ ದೊಡ್ಡವರಾದ ಮೇಲೆ ಎಷ್ಟೇ ಸೆಂಟುಗಳನ್ನು ಮೂಸಿದರೂ ಮೂಗಿಗೆ ಆ ಆನಂದವು ದೊರಕುವದಿಲ್ಲವಲ್ಲ ! ಪೃಥಿವಿಯಲ್ಲಿ ಪುಣ್ಯಗಂಧವೇ ಇರುವದೆಂದೂ ಪಾಪವಶದಿಂದ ಅದರಲ್ಲಿ ಕೆಟ್ಟನಾತವು ತೋರುವದೆಂದೂ ಬಲ್ಲವರು ಹೇಳುತ್ತಾರೆ. ಮಾಯೆಗೆ ಶುಭವಾಸನೆಯನ್ನು ಅಳಿಸಿಹಾಕುವದೊಂದು ಚೇಷ್ಟೆಯಿರುತ್ತದೆ.

೧೯೮. ನಾವು ಹುಡುಗರಾಗಿದ್ದಾಗ ಲೀಲೆಯಿಂದ ಎಲ್ಲೆಂದರೆ ಅಲ್ಲಿ ಹಗಲೆಲ್ಲ ಓಡಾಡಿಕೊಂಡಿದ್ದೆವು. ಆಯಾಸವಾದಾಗ ಎಲ್ಲೆಂದರೆ ಅಲ್ಲಿ ನಿದ್ರಿಸುತ್ತಿದ್ದೆವು. ನಮಗೆ ಎಲ್ಲಾ ದಿಕ್ಕುಗಳೂ ಸುಖಮಯವಾಗಿ ಕಾಣುತ್ತಿದ್ದವು ; ನೆಲವೆಲ್ಲ ಮೆದುವಾದ ಹಾಸಿಗೆಯಾಗಿ ಕಾಣುತ್ತಿತ್ತು. ದೊಡ್ಡವರಾದಮೇಲೆ ಆ ಸುಖವು ಎಲ್ಲಿ ತಡಕಾಡಿದರೂ ಕಾಣಿಸದೆ ಇದೆ ; ಎಂಥ ಸುಪ್ಪತ್ತಿಗೆಯ ಮೇಲೆ ಮಲಗಿದರೂ ನಿದ್ರಿಸಿ ಎಚ್ಚತ್ತಮೇಲೆ ಆ ಅಂಗಲಾಘವವು ಕಾಣಿಸದೆ ಇರುತ್ತದೆ. ಈಗ ಆದ ಹೆಚ್ಚುಕಡಿಮೆಯೇನು ? ನಮ್ಮನ್ನೂ ನಮ್ಮ ಜಗತ್ತನ್ನೂ ಮಾಯೆಯು ಆವರಿಸಿಕೊಂಡುಬಿಟ್ಟಿದೆ. ಸುಖವೆಂಬುದು ಸ್ವಪ್ನದಲ್ಲಿಯೂ ದುರ್ಲಭವಾಗಿ ಬಿಟ್ಟಿರುತ್ತದೆ !

೧೯೯. ಹುಡುಗರು ಇನ್ನೂ ಚಿಕ್ಕವರಾದಾಗ ಅವರಿಗೆ ನಾನು ಎಂದರೇನೆಂಬುದು ತಿಳಿಯುವದೇ ಇಲ್ಲ. ತಮ್ಮ ವಿಷಯವಾಗಿ ಮಾತಾಡುವಾಗ ''ರಾಮ ಬಂದ'', ''ಸೀತೆ ಬಂದಳು'' ಎಂದೇ ಅವರು ಅನ್ನುತ್ತಿರುತ್ತಾರೆ. ಹೀಗೆಯೇ ತಮ್ಮ ಎದುರಿಗೆ ಇರುವವರನ್ನು 'ನೀನು' ಎನ್ನುದಕ್ಕೂ ಅವರಿಗೆ ಬರುವದಿಲ್ಲ. 'ಅಪ್ಪ ಬಂದ !' ಎನ್ನುತ್ತಾರೆಯೇ ಹೊರತು 'ನೀನು ಬಂದೆ' ಎನ್ನುವದಿಲ್ಲ. ಸ್ವಲ್ಪ ದೊಡ್ಡವರಾದ ಮೇಲೂ ಕಂಡವರನ್ನೆಲ್ಲ 'ಮಾವಯ್ಯ', 'ಅಜ್ಜ'– ಎನ್ನುತ್ತಿರುತ್ತಾರೆ. ಅಲ್ಲಿಯವರೆಗೂ ಅವರಿಗೆ ಎಲ್ಲವೂ ಆನಂದಮಯ ವಾಗಿ ಕಾಣುತ್ತಿರುತ್ತದೆ. ಎಲ್ಲಾ ಪದಾರ್ಥಗಳನ್ನೂ ಎಲ್ಲಾ ಜನರನ್ನೂ ಅವರು ಹರ್ಷದಿಂದ ಬರಮಾಡಿಕೊಳ್ಳುತ್ತಿರುತ್ತಾರೆ. ಆದರೆ ಎಂದೋ ಒಂದು ದಿನ ಅವರ ಹೃದಯದೊಳಕ್ಕೆ ನಾನು ಎಂಬ ಅರಿವು ಪ್ರವೇಶಿಸುತ್ತದೆ. ಜ್ವರದ ಗೆಡ್ಡೆಯಿರುವವರಿಗೆ ಊಟದ ಸುಖವು ತೋರದಂತೆ ಅಂದಿನಿಂದ ಅವರಿಗೆ ಇಂದ್ರಿಯಾರ್ಥಗಳ ಸುಖವು ತೋರದಂತಾಗಿಬಿಡುತ್ತದೆ.

೨೦೦. ನಾವು ಹುಡುಗರಾಗಿದ್ದಾಗ ಹಗಲೆಲ್ಲ ಮನಬಂದಂತೆ ಆಟವಾಡುತ್ತಾ ಓಡಾಡುತ್ತಿದ್ದೆವು. ಆಯಾಸವಾಗಿ ನಿದ್ರೆ ಬಂದರೆ ಎಲ್ಲೆಂದರೆ ಅಲ್ಲಿ ಮಲಗಿ ವಿಶ್ರಾಂತಿಯನ್ನು ಪಡೆಯುತ್ತಿದ್ದೆವು. ಆದರೆ ವಯಸ್ಸಾಗುತ್ತಾ ಆಗುತ್ತಾ ಎಷ್ಟು ಮೆತ್ತನೆಯ ಹಾಸಿಗೆಯ್ನು ಹಾಸಿಕೊಂಡರೂ ನಿದ್ರೆ ಹತ್ತುವದಿಲ್ಲ ; ಮೃದುವಾಗಿರುವ ಬಟ್ಟೆಗಳು ಕೂಡ ಮೈಗೆ ಒತ್ತುವ ಕಲ್ಲುಗಳಂತೆ ಆಗುವದುಂಟು. ಮಾಯೆಗೆ ಬೂರುಗದ ಹತ್ತಿಯನ್ನು ಕೂಡ ಕಲ್ಲುಮುಳ್ಳುಗಳೆಂಬಂತೆ ಕಾಣಿಸುವ ಶಕ್ತಿಯಿದೆ !

೨೦೧. ಪ್ರಪಂಚವು ಇದ್ದಂತೆಯೇ ಇದ್ದರೂ ನಮ್ಮಲ್ಲಾಗಿರುವ ಮನಸ್ಸಿನ ಪರಿವರ್ತನೆಯಿಂದ ಅದರಲ್ಲಿರುವ ಆನಂದವು ಮರೆಯಾಗಿ ದುಃಖವು ಕಾಣಿಸುವದಕ್ಕೆ ಮೊದಲಾಗುತ್ತದೆ. ಹುಡುಗರಿಗೆ ಸುಖಮಯವಾಗಿ ಕಾಣಿಸುವ ಪ್ರಪಂಚವೇ ನಮಗೆ ದುಃಖಮಯವಾಗಿ ಈಗ ತೋರುವದಕ್ಕೆ ಮನಸ್ಸಿಗೆ ಮಾಯೆಯು ಬಳಿದುಕೊಂಡದ್ದೇ ಕಾರಣವಲ್ಲದೆ ಮತ್ತೇನಿದ್ದೀತು ?

೨೦೨. ಮಾಯೆಯ ಬಲೆಯಿಂದ ತಪ್ಪಿಸಿಕೊಳ್ಳುವದಕ್ಕೆ ಹುಡುಗರ ಮನಸ್ಸು ಅತ್ಯವಶ್ಯ. ನಾವು ಈಗ ಮತ್ತೆ ಬಾಲ್ಯಕ್ಕೆ ಹಿಂತೆರಳುವದು ಆಗಲಾರದು. ದೇಹವೂ ಮನೋಬುದ್ಧಿಗಳೂ ಬಲಿತುಕೊಂಡಿವೆ. ಆದರೆ ಹಮ್ಮನ್ನು ಹಣ್ಣುಮಾಡಿಕೊಳ್ಳುವದು ಸಾಧ್ಯ. ಹುಡುಗರಂತೆ ಎಲ್ಲಾ ಚರ್ಯೆಯನ್ನೂ ಅನುಸರಿಸುವದು ಆಗುವಂತೆಯೂ ಇಲ್ಲ, ಅದು ನಮಗೆ ಇಷ್ಟವೂ ಅಲ್ಲ. ಮಕ್ಕಳಂತೆ ಆಗಬೇಕು ಎಂದು ಶಾಸ್ತ್ರದಲ್ಲಿ ಹೇಳಿದೆ. ಮಕ್ಕಳಿಗೆ ಇಂದ್ರಿಯಗಳು ಎದ್ದುಕೊಂಡಿರುವದಿಲ್ಲ; ಅವರಿಗೆ ತಾವು ಬಹಳ ತಿಳಿದವರೆಂಬ ಹೆಮ್ಮೆಯೂ ಇರುವದಿಲ್ಲ. ನಾವೂ ಅವರಂತೆ ದಂಭವಿಲ್ಲದೆ ದರ್ಪವಿಲ್ಲದೆ ಇರುವದನ್ನು ಸಾಧಿಸಿಕೊಳ್ಳಬೇಕು.

೨೦೩. ತತ್ತ್ವವನ್ನು ತಿಳಿಯುವದಕ್ಕೆ ಶಾಸ್ತ್ರಜ್ಞಾನವು ಬೇಕು. ಧರ್ಮಾಚರಣೆಯೂ ಆಗಬೇಕು. ಆದರೆ ನಮ್ಮ ಪಾಂಡಿತ್ಯವನ್ನು ತೋರಿಸಿಕೊಳ್ಳಬೇಕಾದದ್ದೇನೂ ಅವಶ್ಯವಿಲ್ಲ, ಅದು ಶ್ರೇಯಸ್ಸಿಗೆ ಅಡ್ಡಿಯೂ ಆಗುತ್ತದೆ. ಧಾರ್ಮಿಕನೆಂದು ತೋರಿಸಿಕೊಳ್ಳುವದೂ ಹೀಗೆಯೇ ಒಂದು ತೊಡರು. ಈ ವಿಷಯದಲ್ಲಿ ನಾವು ಹಸುಳೆಗಳಾಗಬೇಕು. ಬಾಲ್ಯವೇ ಆಧ್ಯಾತ್ಮಿಕಬಲ.

೨೦೪. ಮಕ್ಕಳಿಗೆ ಯಾವದೊಂದರಲ್ಲಿಯೂ ಹೆಚ್ಚಿನ ಅಭಿನಿವೇಶವಿರುವದಿಲ್ಲ. ಅವು ಯಾವದು ಸಿಕ್ಕಿದರೆ ಅದನ್ನು ತಮ್ಮ ಆಟಕ್ಕೆ ಉಪಕರಣವಾಗಿ ಮಾಡಿಕೊಳ್ಳುತ್ತವೆ. ಯಾವಾಗಲೂ ನಗುತ್ತಾ ಕಾಲವನ್ನು ಕಳೆಯುವದೇ ಮಕ್ಕಳ ಸ್ವಭಾವ. ಅವಕ್ಕೆ ಯಾವದಾದರೂ ಅಡಚಣೆಯಾದರೆ ದುಃಖವಾಗುವದು ನಿಜ, ಆದರೆ ಮತ್ತೆ ಯಾವದಾದರೊಂದು ವಿನೋದದ ವಸ್ತು ಸಿಕ್ಕಿದರೆ ಸಾಕು. ಕೂಡಲೆ ಮೊದಲಿನ ಸಂಕಟವನ್ನು ಮರೆತುಬಿಡುತ್ತವೆ. ಸಾಧಕನಾದವನು ಮಕ್ಕಳಂತೆಯೇ ನಗುತ್ತಿರುವದನ್ನು ಕಲಿಯಬೇಕು. ಪ್ರಿಯಾಪ್ರಿಯಗಳು ಬಂದು ಹೋಗುವವೆಂಬುದನ್ನರಿತು ಅವುಗಳಿಂದ ತನ್ನ ಮನಸ್ಸಿನ ಶಾಂತತೆಯನ್ನು ಕಳೆದುಕೊಳ್ಳದೆ ಇರುವದಕ್ಕೆ ಪ್ರಯತ್ನಿಸಬೇಕು.

೨೦೫. ಸಾಧುಗಳೂ ಸಂನ್ಯಾಸಿಗಳೂ ನಮಗೆ ಮತ್ತೆಮತ್ತೆ ಅದೇ ವಿಷಯವನ್ನು ಉಪದೇಶಿಸುತ್ತಿರುತ್ತಾರೆ. ಆದರೆ ಅದನ್ನು ಪುನರುಕ್ತಿಯೆಂದು ಉಪೇಕ್ಷಿಸಬಾರದು. ಏಕೆಂದರೆ ಈ ಸಂಸಾರವೇ ಪುನರುಕ್ತಿಗಳ ಮಾಲೆಯಾಗಿರುತ್ತದೆ. 'ಪುನರಪಿ ಜನನಮ್, ಪುನರಪಿ ಮರಣಮ್' – ಹೀಗಿರುವ ಅನಾದ್ಯನಂತ ಸಂಸಾರದಲ್ಲಿ ಎಷ್ಟು ಪುನರುಕ್ತಿಯಾಗಿರಬೇಡ !

೨೦೬. ಒಂದೊಂದು ಜನ್ಮದಲ್ಲಿಯೂ ನಮ್ಮ ಜೀವನವು ಪುನರುಕ್ತಿಯ ಪ್ರವಾಹವಾಗಿರುತ್ತದೆ. ನಾವು ಮತ್ತೂಮತ್ತೂ ಅವೇ ಅಪರಾಧಗಳನ್ನು ಮಾಡುತ್ತಲೇ ಇರುವೆವು ; ಆದರೆ ಆ ಅಪರಾಧಗಳಿಂದಾಗಿ ನಮಗೆ ಆಗುತ್ತಿರುವ ಸುಖದುಃಖಗಳ ಪುನರುಕ್ತಿಯನ್ನು ಮಾತ್ರ ಸಹಿಸಲಾರೆವು ; ಈ ಸುಖದುಃಖಗಳ ಪರಂಪರೆಯಿಂದ ಬಿಡುಗಡೆಯಾಗುವದಕ್ಕೆ ಸಾಧುಗಳು ಉಪದೇಶಿಸುವ ಪುನರುಕ್ತಿಗಳನ್ನು ಹೇಗೆ ಸಹಿಸಿಯೇವು ?

೨೦೭. ಬಾಲ್ಯದಲ್ಲಿ ಎಲ್ಲಾ ಮಕ್ಕಳೂ ಆಟಪಾಟಗಳಲ್ಲಿ ಮಗ್ನರಾಗಿರುತ್ತವೆ. ತಮ್ಮ ಹುಡುಗನು ಬಹಳ ಚುರುಕು, ಬಹಳ ಜಾಣ – ಎಂದು ಪ್ರತಿಯೊಬ್ಬನ ತಾಯಿತಂದೆಗಳೂ ಹೊಗಳಿಕೊಳ್ಳುತ್ತಾರೆ. ಆದರೆ ದೊಡ್ಡವರಾದ ಬಳಿಕ ಆ ಹುಡುಗರ ಚಟುವಟಿಕೆಯೂ ಜಾಣತನವೂ ಎಲ್ಲಿಯೋ ಮಾಯವಾಗಿ ಬಿಡುತ್ತವೆ. ಇದೇನು ಮಾಯೆ !

೨೦೮. ಯೌವನದಲ್ಲಿ ಪ್ರತಿಯೊಬ್ಬನೂ ತನ್ನ ಶರೀರಸೌಂದರ್ಯವನ್ನೂ ಬಲವನ್ನೂ ಬುದ್ಧಿವಂತಿಕೆಯನ್ನೂ ಜಾಣತನವನ್ನೂ ಪ್ರದರ್ಶಿಸುತ್ತಾನೆ. ಆದರೆ ಯೌವನದಲ್ಲಾದ ತಪ್ಪುಗಳನ್ನು ಸ್ವಲ್ಪ ವಯಸ್ಸಾದ ಬಳಿಕ ಪಶ್ಚಾತ್ತಾಪದಿಂದ ನೆನೆಸಿಕೊಳ್ಳುತ್ತಾನೆ ! ಆದರೆ ಯೌವನವು ಅಹಂಕಾರವು ಬಲಿತುಕೊಳ್ಳುವ ಕಾಲವಾಗಿರುತ್ತದೆ ಎಂಬುದು ಎಲ್ಲಿಯೋ ಒಬ್ಬೊಬ್ಬರಿಗೆ ಮಾತ್ರ ಮನವರಿಕೆಯಾಗುತ್ತದೆ. ಏಕೆಂದರೆ ಯೌವನವು ಸ್ವಲ್ಪಕಾಲದಲ್ಲಿ ಮಾಯವಾದರೂ ಅಹಂಕಾರದ ಯೌವನವು ಹೋಗಿರುವದೇ ಇಲ್ಲ. ಆದ್ದರಿಂದ ಮನುಷ್ಯರಿಗೆ ಎಷ್ಟು ವಯಸ್ಸಾದರೂ ತಾವು ಹರೆಯದವರೆಂಬ ಭ್ರಾಂತಿಯು ಇದ್ದುಕೊಂಡೇ ಇರುತ್ತದೆ.

೨೦೯. ಯೌವನವೆಂಬುದು ಒಂದು ಬಗೆಯ ಕುರುಡೆಂದು ಕೆಲವರು ಹೇಳುತ್ತಾರೆ. ಏಕೆಂದರೆ ಯುವಕರಿಗೆ ಹಿರಿಯವರು, ದೊಡ್ಡವರು –

ಎಂಬುದು ಯಾವದೂ ಕಾಣಿಸುವದಿಲ್ಲವಂತೆ ! ಆದರೆ ನಿಜವಾಗಿ ಯೌವನವಲ್ಲ, ಕುರುಡಿಗೆ ಕಾರಣ ; ಮತ್ತೇನೆಂದರೆ ಆಗ ಬಲಿತುಕೊಂಡ ಅಹಂಕಾರವೇ. ಅಹಂಕಾರವು ಬಲವಾಗಿರುವವರೆಗೂ ತತ್ತ್ವವು ಕಾಣಿಸುವದೇ ಇಲ್ಲ.

೨೧೦. ಅಹಂಕಾರವು ಬಲಿತಿರುವವರು ಬರಿಯ ಕುರುಡರೆನ್ನಬಾರದು. ಅವರು ಕಿವುಡರೂ ಅಹುದು ; ಅವರಿಗೆ ತತ್ತ್ವೋಪದೇಶವಾಕ್ಯಗಳು ಕೇಳಿಸುವದೇ ಇಲ್ಲ. ಅವರು ಹೆಳವರೂ ಅಹುದು ; ಸತ್ಪುರುಷರೂ ಸತ್ಕ್ಷೇತ್ರಗಳೂ ಇರುವಲ್ಲಿಗೆ ಅವರು ಹೋಗಲೇ ಆರರು.

೨೧೧. ಒಬ್ಬ ತರುಣನು ಒಬ್ಬ ಸಾಧುಗಳ ಬಳಿಯಲ್ಲಿ ಕುಳಿತಿದ್ದನು. ಅವರು "ಮಾಯೆಯಿಂದ ತತ್ತ್ವವು ಮರೆಯಾಗಿದೆ. ಮಾಯೆಯನ್ನು ದಾಟುವದು ಪರಮದುರ್ಲಭ. ಮಾಯೆಯನ್ನು ದಾಟುವದಕ್ಕೆ ಭಗವಂತನನ್ನು ಶರಣುಹೋಗಬೇಕು ; ಇಲ್ಲವೆ, ಭಗವದ್ಭಕ್ತರ ಸೇವೆಯನ್ನಾದರೂ ಮಾಡಬೇಕು" ಎಂದು ಮುಂತಾಗಿ ಜನರಿಗೆ ಉಪದೇಶಿಸುತ್ತಿದ್ದರು. ಆದರೆ ತರುಣನು "ಆ ಮಾಯೆ ಎಲ್ಲಿದೆ, ಸ್ವಾಮಿ ? ನನಗೆ ಅದೆಲ್ಲಿಯೂ ಕಾಣಿಸುವದೇ ಇಲ್ಲವಲ್ಲ !" ಎಂದು ಕೇಳಿದನು. ಸಾಧುಗಳು "ಇಷ್ಟು ದಿನಗಳೂ ನೀವು ಸಾಕಿಕೊಂಡ ಮಾಯೆ ನಿಮಗೆ ಕಾಣಿಸುವದಿಲ್ಲವೆ ? ಏನಾಶ್ಚರ್ಯ !" ಎಂದರು. ಪಾಪ ! ಅಹಂಕಾರವೇ ಮಾಯೆ ಎಂಬುದು ಆತನಿಗೇನು ಗೊತ್ತು !

೨೧೨. ಒಬ್ಬನಿಗೆ ಒಂದು ಬಗೆಯ ಚಳಿಜ್ವರವು ಬಂದು ದೀರ್ಘಕಾಲ ಅವನನ್ನು ಪೀಡಿಸುತ್ತಿತ್ತು. ಆಗ ಅವನಿಗೆ ಆಹಾರವು ರುಚಿಸುತ್ತಿರಲಿಲ್ಲ ; ಒಂದು ವೇಳೆ ಏನಾದರೂ ತಿಂದರೆ ಅಜೀರ್ಣವಾಗುತ್ತಿತ್ತು. ಅಪಥ್ಯವಾದ ಆಹಾರವನ್ನು ತೆಗೆದುಕೊಳ್ಳುವದು, ಅದು ವಿರೇಚನವಾಗಿ ಮತ್ತೆ ಹಸಿವಾದಂತೆ ಕಾಣುವದು– ಹೀಗೆಲ್ಲ ಆಗುತ್ತಿತ್ತು. ಆದರೆ ಹಳ್ಳಿಯ ಮುದುಕನೊಬ್ಬನು ಅವನಿಗೆ ಬಿಲ್ವಪತ್ರೆಯ ಕಷಾಯವನ್ನು ಮಾಡಿಕೊಟ್ಟು ಸಪ್ಪೆಯಲ್ಲಿಟ್ಟು ಕ್ರಮಕ್ರಮವಾಗಿ ಆಹಾರವು ಸೇರುವಂತೆ ಮಾಡಿದನು. ಅಹಂಕಾರವು ಅಂಥ ಹಳೆಯ ಜ್ವರವಾಗಿರುತ್ತದೆ. ಅದು ಇರುವವರೆಗೂ ಯಾವ ತತ್ತ್ವೋಪದೇಶವೂ ಮನುಷ್ಯನಿಗೆ ರುಚಿಸುವದಿಲ್ಲ. ಅವನು ಏನಾದರೂ ಓದಿದರೆ ಅಥವಾ ದೊಡ್ಡವರ ಸೂಕ್ತಿಯನ್ನು ಕೇಳಿದರೆ ಅದರಿಂದ ವಿಪರೀತಪರಿಣಾಮವೇ ಆಗುತ್ತಿರುತ್ತದೆ. ಅಧ್ಯಾತ್ಮವಿಚಾರದಿಂದ ಲಾಭವಾಗಬೇಕಾದರೆ ಮೊದಲು

ಅಹಂಕಾರಜ್ವರವನ್ನು ಮಟ್ಟುಮಾಡುವ ಸಾಧನಗಳ ಕಷಾಯವೂ ಸಪ್ಪೆಯ ಪಥ್ಯವೂ ಅವಶ್ಯ.

೨೧೩. ಓದುಬರಹದ ತಿಳಿವಳಿಕೆಯಿಲ್ಲದವರ ಅಹಂಕಾರಕ್ಕಿಂತಲೂ ಆ ತಿಳಿವಳಿಕೆಯಿರುವವರ ಅಹಂಕಾರವು ಅಧ್ಯಾತ್ಮಜ್ಞಾನಕ್ಕೆ ಹೆಚ್ಚಿನ ಪ್ರತಿಬಂಧಕ ವಾಗಿರುತ್ತದೆ. ಓದಿದವರ ಅಹಂಕಾರವು ತನಗೆ ಅಹಂಕಾರವಿಲ್ಲವೆಂದೇ ವಾದಿಸ–ತೊಡಗುತ್ತದೆಯಾದ್ದರಿಂದ ತನಗೆತಾನೇ 'ಆಪರೇಷನ್' (ಶಸ್ತ್ರಚಿಕಿತ್ಸೆಯನ್ನು) ಮಾಡಿಕೊಳ್ಳುವ ವೈದ್ಯನಂತೆ ಯಾವ ಅಪಾಯಕ್ಕೂ ಅಂಜದೆ ಇರುತ್ತದೆ.

೨೧೪. ಹೊಸದಾಗಿ ಬಂಡಿಗೆ ಹೂಡಿದ ಹೋರಿಗಳು ಕುಣಿದಾಡುತ್ತಿರುತ್ತವೆ ; ಆದರೆ ಕೆಲವು ದಿನಗಳು ಪಳಗಿದ ಮೇಲೆ ಅದೇ ಎತ್ತುಗಳು ನೊಗಕ್ಕೆ ತಾವೇ ಕತ್ತನ್ನು ಚಾಚುವದಕ್ಕೆ ಮೊದಲುಮಾಡುತ್ತವೆ. ಅಹಂಕಾರವು ಬಲಿತು ಕೊಳ್ಳದೆ ಇರುವ ಹುಡುಗರು ವ್ಯವಹಾರದಲ್ಲಿ ಯಾವ ಹೊಣೆಗಾರಿಕೆಯನ್ನೂ ತೆಗೆದುಕೊಳ್ಳುವದಕ್ಕೆ ಒಪ್ಪುವದಿಲ್ಲ. ಆದರೆ ಮದುವೆಯಾಗಿ ಮಕ್ಕಳನ್ನು ಹಡೆದ ಬಳಿಕ ಅವರಿಗೆ ಕುಟುಂಬರಕ್ಷಣೆಯೂ ಸಂಸಾರವೂ ಸ್ವಭಾವವಾಗಿಬಿಡುತ್ತದೆ.

೨೧೫. ಮನುಷ್ಯನಿಗೆ ವ್ಯವಹಾರವು ಬಲಿತುಕೊಂಡರೆ ಅವನು ವ್ಯವಹಾರವನ್ನು ಮೆಚ್ಚಿ ಅದರಲ್ಲಿಯೇ ಮುಳುಗಿಕೊಂಡುಬಿಡುತ್ತಾನೆ. ಇಷ್ಟು ಮಾತ್ರವಲ್ಲ, ಸಾಧುಗಳು, ಸಂನ್ಯಾಸಿಗಳು – ಮುಂತಾದ ವಿರಕ್ತರನ್ನು ಕಂಡರೆ "ನೀವೇಕೆ ಏನಾದರೂ ವ್ಯವಹಾರವನ್ನು ಕೈಗೊಳ್ಳಬಾರದು ? ಸೋಮಾರಿಗಳಾಗಿ ಏಕೆ ತಿರುಗುತ್ತಿರುವಿರಿ ?" ಎನ್ನುವರು. ಊಟ, ಓಟ, ಆಟ !– ಹೀಗೆ ನಡೆಯುತ್ತಿರುವದೇ ಚಟುವಟಿಕೆ ಎಂದು ಅವನ ಭಾವನೆ.

೨೧೬. ಒಂದು ಹುಚ್ಚರ ಆಸ್ಪತ್ರೆಯಲ್ಲಿ ಒಬ್ಬ ಯುವಕನು ಒಂದು ಸಣ್ಣಪಂಚೆಯನ್ನುಟ್ಟುಕೊಂಡು ಮೂಗುಹಿಡಿದುಕೊಂಡು ನೀರಿನಲ್ಲಿ ಮುಳುಗು ವವನಂತೆ ನಟಿಸುತ್ತಿದ್ದನು. ಪಕ್ಕದಲ್ಲಿದ್ದವನು 'ಇದೇಕಯ್ಯ ? ಹೀಗೆ ?' ಎನ್ನಲು ಅವನು 'ಈ ದಿನ ತುಲಾಸಂಕ್ರಮಣವಲ್ಲವೆ ? ಕಾವೇರಿಸ್ನಾನವಿಲ್ಲದೆ ಸುಮ್ಮನೆ ಏತಕ್ಕೆ ಕುಳಿತಿದ್ದೀರಿ ?' ಎಂದನು. ಕೆಲಸವಿಲ್ಲದೆ ಇದ್ದರೂ ಓಡಾಡುವರು ಈ ಲೋಕದಲ್ಲಿ ಬಹಳ ಜನರಿರುತ್ತಾರೆ. ಆದರೆ ಅವರು ಮಿಕ್ಕವರನ್ನು ಅಯ್ಯೋ ! ನಿರುದ್ಯೋಗಿಗಳಾಗಿ ಹೇಗೆ ಜನವು ಕಾಲಹಾಕುತ್ತಿರುವದಲ್ಲ !' ಎಂದು

ಕೊರಗುವರು. ವಿಧವಿಧವಾದ ಯೋಜನೆಗಳನ್ನು ಬೋಧಿಸುವ ಅಹಂಕಾರವು ಅವರದ್ದು!

೨೧೭. ಒಂದು ದಿನ ಕಾಡಿನಲ್ಲಿ ಒಂದು ಎತ್ತು ಒಂದು ಮರವನ್ನು ಸುಮ್ಮನೆ ಸುತ್ತುಹಾಕುತ್ತಿತ್ತು. ವಿಚಾರಿಸಿದ್ದರಲ್ಲಿ ಅದು ಗಾಣಿಗರವನ ಮನೆಯಲ್ಲಿ ಕೆಲಸಮಾಡಿ ಸೋತಿದ್ದ ಮುದಿಎತ್ತು ಎಂದು ತಿಳಿಯಬಂತು. ವ್ಯವಹಾರದಲ್ಲಿದ್ದು ವಿಶ್ರಾಂತರಾಗಿರುವ ಜನರೂ ಹೀಗೆಯೇ. ಅವರು ಯಾವದಾದರೊಂದು ಸಭೆಯ ಡೈರೆಕ್ಟರರಾಗುವದಕ್ಕೆ ಅಥವಾ ಸದಸ್ಯರಾಗುವದಕ್ಕೆಂದು ಹವಣಿಸುತ್ತಾ ಇರುತ್ತಾರೆ. ಮತ್ತೊಬ್ಬರಿಗೆ ಅವರ ಸಹಾಯವು ಬೇಕಿಲ್ಲದಿದ್ದರೂ ತಾವು ಕೆಲಸ ಮಾಡಬಲ್ಲೆವೆಂಬುದನ್ನು ತೋರಿಸಿಕೊಳ್ಳುವ ಹೆಮ್ಮೆಯು ಅವರನ್ನು ಬಿಟ್ಟಿರುವದಿಲ್ಲ.

೨೧೮. ಅಹಂಕಾರವೆಂಬುದು ಒಂದು ನೀರುಗುಳ್ಳೆಯಂತೆ. ಗುಳ್ಳೆಯಲ್ಲಿ ಹೊರಗೆ ಕಾಣುವ ಆಕಾರವೆಷ್ಟೋ ಅಷ್ಟುಮಾತ್ರ ನೀರಿರುತ್ತದೆ ; ಒಳಗೆ ಟೊಳ್ಳೇ. ಇದರಂತೆ ಇವನು ಇಂಥವನು ಎಂದು ಜನರು ತಿಳಿಯುವಮಟ್ಟಿಗೆ ಅಹಂಕಾರವು ಕಾಣಿಸುತ್ತದೆ ; ಅದರೊಳಗೆ ಯಾವ ಹೂರಣವೂ ನಿಜವಾಗಿ ಇರುವದೇ ಇಲ್ಲ.

೨೧೯. ಕೆಲವು ಜನರ ಅಭಿಮಾನವು ಕುಲ, ರೂಪು, ವಯಸ್ಸು, ಅಧಿಕಾರ, ಹಣ, ಹೆಂಡತಿ, ಮಕ್ಕಳು, ಆಳುಕಾಳು, ಹೊಲಮನೆ, ವಿದ್ಯೆ, ಕೀರ್ತಿ—ಮುಂತಾದವುಗಳ ಮೇಲೆ ಕುಳಿತುಕುಳಿತು ಸಾಕಾಗಿರುತ್ತದೆ. ಅವರಿಗೆ ಈ ಸ್ಥಿತಿಯಲ್ಲಿ ಏತರ ಅಭಿಮಾನವೂ ಇರುವದಿಲ್ಲವೆಂಬಂತೆ ಕಾಣಿಸುತ್ತಿರುತ್ತದೆ ; ಆದರೆ ಸಮಯವು ಸಿಕ್ಕಿದರೆ ಮತ್ತೆ ಯಾವದಾದರೊಂದರಮೇಲೆ ಕುಳಿತುಕೊಳ್ಳುವದಕ್ಕೆ ಅದು ಹೊಂಚುಹಾಕುತ್ತಲೇ ಇರುತ್ತದೆ. ಆಕಾಶದಲ್ಲಿ ಎಷ್ಟು ದೂರವಾಗಿ ಎಷ್ಟು ಎತ್ತರದಲ್ಲಿ ಹಾರಾಡುತ್ತಿರುವ ಹಕ್ಕಿಯೂ ಸಾಯಂಕಾಲಕ್ಕೆ ತನ್ನ ಗೂಡಿಗೆ ಬಂದೇತೀರಬೇಕಷ್ಟೆ ?

೨೨೦. ಕೆಲವರಿಗೆ 'ನನಗೆ ಅಹಂಕಾರವಿಲ್ಲ' ಎಂಬ ಅಹಂಕಾರವಿರುತ್ತದೆ. ಅವರು ನನಗೆ ಯಾವದೊಂದೂ ಬೇಡವಾಗಿದೆ ಎಂದು ವಿರಕ್ತಿಯನ್ನು ನಟಿಸುತ್ತಾರೆ. ಆದರೂ ಅವರಿಗೆ ತಮಗೆ ವಿರಕ್ತಿಯಿದೆ ಎಂದು ಯಾರೊಬ್ಬರೂ ಎಲ್ಲಿ ತಿಳಿದುಕೊಳ್ಳದೆ ಹೋಗುವರೋ ಎಂಬ ಶಂಕೆಯು

ಇರುತ್ತದೆ. ಒಂದು ಬೆಕ್ಕು ತಾನು ಸಂಸಾರದಲ್ಲಿ ವಿರಕ್ತನಾದೆನೆಂದು ಮೈಗೆ ಭಸ್ಮದ ತ್ರಿಪುಂಡ್ರವನ್ನು ಧರಿಸಿಕೊಂಡು ಒಂದು ಮರದಡಿಯಲ್ಲಿ ಕಣ್ಣುಮುಚ್ಚಿಕೊಂಡು ಕುಳಿತಿದ್ದ ಕಥೆಯನ್ನು ನೀವು ಕೇಳಿರಬಹುದು. ಇನ್ನೊಂದು ಬೆಕ್ಕು ಬೆಕ್ಕಿನಾಕಾರದ ಚೀಲವೆಂದು ಕಾಣಿಸುವಂತೆ ಗೂಟಕ್ಕೆ ನೇತುಹಾಕಿಕೊಂಡಿತ್ತೆಂಬ ಕಥೆಯನ್ನೂ ಕೇಳಿರಬಹುದ್ದು. ಏನಾದರೇನು ? ಚೀಲಿಯು ಚೀಲಿಯೇ.

೨೨೧. ಮನೆಯಲ್ಲಿ ಸಾಕಿದ ಬೆಕ್ಕು ಎಷ್ಟೆಷ್ಟು ಅಟ್ಟಿದರೂ ಮತ್ತೆಮತ್ತೆ ಬಂದುಬಂದು ಕಾಲಿಗೆ ತೊಡರುವಂತೆ ಮನಸ್ಸಿನಲ್ಲಿ ಸಾಕಿದ ಅಭಿಮಾನವು ಎಷ್ಟೆಷ್ಟು ವಿಚಾರಮಾಡಿದರೂ ಅದನ್ನು ಎಷ್ಟೆಷ್ಟು ಬಿಟ್ಟೆನೆಂದು ಹೇಳಿಕೊಂಡರೂ ಮತ್ತೆಮತ್ತೆ ಬಂದೇತೀರುತ್ತದೆ. ಮನೆಗೆ ಹೊಸಬೆಕ್ಕು ಬಂದರೆ ಎರಡೂ ಕಾದಾಡಿ ಗದ್ದಲಮಾಡುವಂತೆ ಅಹಂಕಾರವನ್ನು ಬಿಟ್ಟೆನೆಂಬ ಹೊಸ ಅಹಂಕಾರವು ಬಂದಾಗ ನಮಗೆ ಅದನ್ನು ಹೇಗೆ ಹೊಡೆದಟ್ಟಬೇಕೆಂಬುದೇ ತೋಚದೆ ಪೇಚಾಟವಾಗುತ್ತದೆ.

೨೨೨. 'ನಾನು ಇದನ್ನು ಮಾಡಿ ಇದನ್ನು ಪಡೆಯುವೆನು' ಎಂಬುದು ಲೋಕದ ವ್ಯವಹಾರವು. ಕರ್ಮವನ್ನು ಮಾಡುವಾಗ ಈ ಕರ್ಮವು ನನ್ನದು ಎಂಬ ಅಭಿಮಾನವು ಇರುತ್ತದೆ ; ಫಲವು ಬಂದಾಗ ಈ ಫಲವು ನನ್ನದು ಎಂದಿರುತ್ತದೆ ; ಫಲವನ್ನು ಭೋಗಿಸುವಾಗ ಇದು ನನಗೆ ಆದ ಭೋಗವು ಎಂಬ ಅಭಿಮಾನವಿರುತ್ತದೆ. ಈ ಮೂರು ವಿಧವಾದ ಅಭಿಮಾನವನ್ನೂ 'ಸಂಗ' ಎಂದೇ ಕರೆಯುವರು. ಸಂಗವೇ ಸಂಸಾರಬಂಧವು.

೨೨೩. ಸಂಗ ಎಂದರೆ ಅಂಟಿಕೊಳ್ಳುವದು. ಹಲಸಿನ ಹಣ್ಣನ್ನು ಬಿಚ್ಚುವಾಗ ಕೈಗೆ ಎಣ್ಣೆಯನ್ನು ಸವರಿಕೊಂಡರೆ ಅದರ ಅಂಟು ಕೈಗೆ ಹತ್ತದೆ ಇರುವಂತೆ ಕರ್ಮವನ್ನು ಮಾಡುವಾಗ ಇದನ್ನು ಈಶ್ವರನಿಗಾಗಿ ಮಾಡುವೆನು ಎಂಬ ಎಣ್ಣೆಯನ್ನು ಬುದ್ಧಿಗೆ ಸವರಿಕೊಳ್ಳಿರಿ ; ಆಗ ಕರ್ಮಫಲಭೋಗಗಳ ಅಂಟು ನಿಮಗೆ ಹತ್ತುವದಿಲ್ಲ.

೨೨೪. ಎಲ್ಲಾ ಬಗೆಯ ಕರ್ಮವೂ ಅವಿದ್ಯೆಯಿಂದಲೂ ಕಾಮದಿಂದಲೂ ಆಗತಕ್ಕದ್ದು. ಆದರೆ ಲೌಕಿಕಕರ್ಮವೂ ಲೋಕವ್ಯವಹಾರದ ಜ್ಞಾನವೂ ಅವಿದ್ಯೆಯೊಳಗಿನ ಹೆಚ್ಚಿನ ಅವಿದ್ಯೆಯು. ಅಮಾವಾಸ್ಯೆಯದಿನ ಮೋಡವೂ ಇದ್ದರೆ ಹೆಚ್ಚು ಕತ್ತಲೆಯು ತೋರುವಂತೆ ಲೌಕಿಕಕರ್ಮಜ್ಞಾನವು

ಹೆಚ್ಚಿನ ಅವಿದ್ಯೆಯಾಗಿರುವದರಿಂದ ಅದು ಜನರನ್ನು ಕೊಲ್ಲುವ ಮೃತ್ಯು ಎಂದು ಶಾಸ್ತ್ರಕಾರರು ಹೇಳುತ್ತಾರೆ.

೨೨೫. ಲೌಕಿಕಕರ್ಮಜ್ಞಾನಗಳೆಂಬ ಮೃತ್ಯುವಿನಿಂದಲೇ ಮನುಷ್ಯನು ಮರ್ತ್ಯನಾಗಿರುತ್ತಾನೆ. ಅವನು ಶರೀರೇಂದ್ರಿಯಗಳನ್ನು ನಾನು ನನ್ನವು ಎಂದು ತಿಳಿದುಕೊಂಡು ತನಗೆ ಇಷ್ಟವಾದದ್ದನ್ನು ಸಂಪಾದಿಸಿಕೊಳ್ಳುವ ಕರ್ಮದಲ್ಲಿ ತೊಡಗುತ್ತಾನೆ. ಅದರಿಂದ ಬೋನಿನೊಳಗಿನ ವಡೆಯನ್ನು ತಿನ್ನುವದಕ್ಕೆ ಹೋಗುವ ಇಲಿಯಂತೆ ಅವನು ಮೃತ್ಯುವಿನ ದವಡೆಯಲ್ಲಿ ಮತ್ತೆಮತ್ತೆ ಸಿಕ್ಕಿಕೊಳ್ಳುತ್ತಿರುತ್ತಾನೆ.

೨೨೬. ಮುಳ್ಳಿನಿಂದ ಮುಳ್ಳನ್ನು ಕಿತ್ತುಹಾಕುವಂತೆ ಶಾಸ್ತ್ರೀಯಕರ್ಮವೆಂಬ ಅವಿದ್ಯೆಯಿಂದ ಲೌಕಿಕಕರ್ಮವೆಂಬ ಅವಿದ್ಯೆಯನ್ನು ತಪ್ಪಿಸಿಕೊಳ್ಳಬಹುದು. ಶಾಸ್ತ್ರೀಯಕರ್ಮದಲ್ಲಿ ಹಮ್ಮು ಕಡಿಮೆ.

೨೨೭. ಶಾಸ್ತ್ರೀಯಕರ್ಮವನ್ನು ಮಾಡುವದು ಬಲುಕಷ್ಟ. ಅದಕ್ಕೆ ಜಾತಿ, ವಯಸ್ಸು, ಅಧಿಕಾರ, ಸಾಧನಸಂಪತ್ತು – ಮುಂತಾದ ಹಲವುಸಾಮಗ್ರಿಗಳು ಬೇಕು. ಕಲಿಗಾಲದಲ್ಲಿ ಅದನ್ನು ಪೂರ್ತಿಯಾಗಿ ಮಾಡಿ ಜಯಿಸುವೆನೆಂಬ ಎದೆ ಯಾರಿಗೂ ಬರುವಂತೆ ಇಲ್ಲ. ಒಂದು ವೇಳೆ ಬಂದರೆ ಅದೇ ಒಂದು ಅಹಂಕಾರವಾಗಿಬಿಡುತ್ತದೆ. ಯಾಗಮಾಡುವೆನು, ಹೋಮಮಾಡುವೆನು, ದಾನಮಾಡುವೆನು, ತಪಸ್ಸನ್ನು ಮಾಡುವೆನು – ಎಂಬ ದಂಭದ ಮುಳ್ಳು ಮುರಿದುಕೊಂಡರೆ ಅದನ್ನು ಕಿತ್ತುಹಾಕುವದು ಬಹಳ ಕಷ್ಟವಾಗುತ್ತದೆ. ಒಂದು ಮುಳ್ಳನ್ನು ತೆಗೆಯುವದಕ್ಕೆಂದು ಹೋಗಿ ಕಾಲಿನಲ್ಲಿ ಸೂಜಿಯನ್ನೇ ಮುರಿಯುವಂತೆ ಚುಚ್ಚಿಕೊಂಡುವವನು ಎಂಥ ಅವಿವೇಕಿಯು !

೨೨೮. ಯಾವ ಕರ್ಮವನ್ನು ಮಾಡಿದರೂ ಅದನ್ನು ನಾನು ಮಾಡುತ್ತೇನೆಂಬ ಸಂಗವಾಗಲಿ ಫಲಾಶೆಯಾಗಲಿ ಇರಬಾರದು. ಹಾಗಲುಕಾಯಿ, ಸೌತೇಕಾಯಿ – ಮುಂತಾದವುಗಳ ಕಹಿಯನ್ನು ತೆಗೆಯುವಂತೆ ಕರ್ಮದ ಈ ಕಹಿಯನ್ನು ಭಗವದರ್ಪಣೆಯ ಮೂಲಕ ತೆಗೆದುಹಾಕಬೇಕು. ಆಗಲೇ ಕರ್ಮವು ನಮ್ಮನ್ನು ಮೇಲಕ್ಕೆತ್ತುತ್ತದೆ.

೨೨೯. ಒಬ್ಬನು ಸೊಂಟಕ್ಕೆ ಹಗ್ಗವನ್ನು ಕಟ್ಟಿಕೊಂಡು ಹೊಳೆಯಲ್ಲಿ ಈಜುತ್ತಿದ್ದನು. ಅವನು ಒಂದು ಸುಳಿಯಲ್ಲಿ ಸಿಕ್ಕಿಕೊಂಡು ಮುಳುಗುವ

ಅಂಜಿಕೆಯು ತೋರುತ್ತಲೂ ಆ ಹಗ್ಗವನ್ನು ಮೇಲಿದ್ದವನೊಬ್ಬನು ಹಿಡಿದೆಳೆದನು. ಅವನನ್ನು ಮೇಲಕ್ಕೆತ್ತಿದ್ದು ಹಗ್ಗವೆನ್ನಲಾಗದಷ್ಟೆ ? ಇದರಂತೆ ನಾವು ಮಾಡುವ ಕರ್ಮವೇ ನಮ್ಮನ್ನು ಮೇಲಕ್ಕೆತ್ತುವದಿಲ್ಲ ; ಅದನ್ನು ನೆಪಮಾಡಿಕೊಂಡು ಭಗವಂತನೇ ನಮ್ಮನ್ನು ಉದ್ಧಾರಮಾಡುತ್ತಾನೆ. ಹಗ್ಗವನ್ನು ನಂಬುವದಕ್ಕಿಂತಲೂ ಈಜು ಬರುವನೊಬ್ಬನನ್ನೇ ನಂಬುವದು ಮೇಲು ; ಇದರಂತೆ ಕರ್ಮವನ್ನು ನಂಬುವದಕ್ಕಿಂತ ಭಗವಂತನನ್ನು ನಂಬುವದೇ ಮೇಲು.

೨೩೦. ಅಹಂಕಾರವು ಮನುಷ್ಯನನ್ನು ಕೆಳಕ್ಕೆಳೆಯುತ್ತದೆ ; ಆದರೆ ನಾನು 'ಭಗವಂತನ ದಾಸನು' ಎಂಬ ಅಹಂಕಾರವು ಅವನನ್ನು ಮೇಲಕ್ಕೆ ಹಾರಿಸುತ್ತದೆ. ಹನುಮಂತನು 'ನಮೋऽಸ್ತು ರಾಮಾಯ', 'ದಾಸೋऽಹಂ ಕೋಸಲೇಂದ್ರಸ್ಯ' ಎಂಬ ಎರಡು ಮಂತ್ರಗಳಿಂದ ಸಮುದ್ರವನ್ನು ಹಾರಿ ಲಂಕೆಗೆ ಹೋಗಿ ಮತ್ತೆ ಸುಖವಾಗಿ ಬಂದನಲ್ಲವೆ ?

೨೩೧. 'ನನಗೆ ಎಲ್ಲವೂ ತಿಳಿದಿದೆ. ನಾನು ಏನು ಬೇಕಾದರೂ ಮಾಡಿಕೊಳ್ಳುತ್ತೇನೆ' ಎಂಬುದು ಮುಳುಗಿಸುವ ಅಹಂಕಾರ. 'ನಿನ್ನ ಇಚ್ಛೆಯಂತೆ ನಡೆಯುವೆನು' ಎಂದು ಭಗವಂತನ ದಾಸನಾಗಿರುವದು ತೇಲಿಸುವ ಸಾತ್ತ್ವಿಕಾಹಂಕಾರ.

೨೩೨. ಬೇಸಗೆಯಲ್ಲಿ ದೊಡ್ಡ ದೊಡ್ಡ ನದಿಗಳು ಕೂಡ ಒಣಗಿ ಹೋಗಿರುವಂತೆ ಕಾಣುತ್ತವೆ ; ಆದರೆ ಮಳೆಯು ಬಂದಾಗ ಸಣ್ಣ ಸಣ್ಣ ಗುಂಡಿ ಗೊಟರುಗಳು ಕೂಡ ನೀರುತಂಬಿರುತ್ತವೆ. ಹೀಗೆಯೇ ಪ್ರಕೃತಿನಿಯಮದಿಂದ ನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ಅಹಂಕಾರವು ಯಾರೊಬ್ಬರಿಗೂ ಕಾಣಿಸುವದಿಲ್ಲ. ಆದರೇನು ? ಎಚ್ಚರವಾದ ಕೂಡಲೆ ಎಂದಿನಂತೆ ಅಹಂಕಾರವು ಮತ್ತೆ ಎದ್ದುಕೊಳ್ಳುತ್ತದೆ.

೨೩೩. ಎಚ್ಚರದಲ್ಲಿ ಕೂಡ ಅಹಂಕಾರವು ಯಾವಾಗಲೂ ತೋರುತ್ತಿರುವದಿಲ್ಲ. ಮೈಮೇಲೆ ಹುಣ್ಣೆದ್ದಿರುವಾಗಲೇ ತಟಗುಟ್ಟುವಂತೆ ಮನುಷ್ಯನು ತನ್ನ ತನ್ನ ವಿಷಯವನ್ನು ಹೆಚ್ಚಾಗಿ ವಿಚಾರಿಸುವಾಗ ಮಾತ್ರ ಅಹಂಕಾರವು ಎದ್ದು ತೋರುತ್ತದೆ. ಅಹಂಕಾರವು ಕೆಲವು ಕಾಲ ತೋರದೆ ಇರುವದು ಸ್ವಾಭಾವಿಕವು ; ಅದು ನಮ್ಮಲ್ಲಿ ತೋರುವಾಗಲೂ ನಮ್ಮನ್ನು ಗೋಳುಗುಟ್ಟಿಸದಂತೆ ಮಾಡಿಕೊಳ್ಳುವದು ಪುರುಷಾರ್ಥಕ್ಕೆ ಕಾರಣವು.

೨೩೪. ಅಹಂಕಾರವು ಹೋಗುವದಕ್ಕೆ ಸಮಾಧಿಯನ್ನು ಸಂಪಾದಿಸಿಕೊಳ್ಳಬೇಕೆಂಬುದು ಕೆಲವರ ಅಭಿಪ್ರಾಯ. ಇದು ನಿಜ. ಆದರೆ ಸಮಾಧಿ ಎಂದರೇನು ? ಪರಮಾತ್ಮನಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವದು. ಈ ಸಮಾಧಿಗೆ ಭಗವದ್ಭಕ್ತಿಯು ಬೇಕು, ಪಾತಂಜಲಯೋಗವೇನೂ ಅವಶ್ಯವಿಲ್ಲ.

೨೩೫. ನಾವೆಲ್ಲರೂ ಕೀಲುಗೊಂಬೆಗಳಂತೆ ಇರುತ್ತೇವೆ. ಭಗವಂತನು ಸೂತ್ರಗಳನ್ನಿಟ್ಟುಕೊಂಡು ನಮ್ಮ ಎಲ್ಲ ಕರಣಗಳನ್ನೂ ಆಯಾ ವ್ಯಾಪಾರವನ್ನು ಮಾಡುವಂತೆ ಪ್ರೇರಿಸುವ ಆಟಗಾರನಾಗಿರುತ್ತಾನೆ. ಆದರೆ ಇಲ್ಲೊಂದು ವಿಶೇಷ. ಭಗವಂತನು ಎಲ್ಲಾ ಪ್ರವೃತ್ತಿಗೂ ತನ್ನ ಸಂನಿಧಿಯಿಂದಲೇ ಕಾರಣನಾಗಿರುತ್ತಾನೆ ; ಆತನಿಗೆ ಅಹಂಕಾರದ ಅಂಟು ಒಂದಿಷ್ಟೂ ಇಲ್ಲ. ನಾವು ಆತನ ಸನ್ನಿಧಿಯಲ್ಲಿಯೇ ಈ ವ್ಯಾಪಾರಗಳನ್ನು ಮಾಡುತ್ತಿರುವೆವು ; ಆದರೂ ಇವುಗಳೆಲ್ಲ ನಮ್ಮವೇ ಎಂಬ ಅಹಂಕಾರವು ನಮ್ಮನ್ನು ಕಾಡುತ್ತಿರುವದು !

೨೩೬. ಜ್ವರವು ಹೆಚ್ಚಿ ಧಾತುಗಳು ವಿಷಮಿಸಿದ ಹಾಗೆಲ್ಲ ಅಸಂಬದ್ಧ ಪ್ರಲಾಪವು ಹೆಚ್ಚುವದು, ಮೈಯ ಶಕ್ತಿಯು ಕುಗ್ಗಿ ಯಾವ ಕೆಲಸವೂ ಸಾಗದೆ ಇರುವದು. ಅಹಂಕಾರವು ಹೆಚ್ಚಿದಷ್ಟೂ ಮನುಷ್ಯನು ಯಾವ ಕೆಲಸವನ್ನು ಮಾಡುವದಕ್ಕೂ ಅನರ್ಹನಾಗುತ್ತಾನೆ.

೨೩೭. ಅಧ್ಯಾತ್ಮಗ್ರಂಥಗಳು ನಮ್ಮಲ್ಲಿರುವ ಅಹಂಕಾರವನ್ನು ಮಟ್ಟುಮಾಡುವ ಉಪದೇಶಗಳಿಂದ ತುಂಬಿರುತ್ತವೆ. ಆದರೆ ಅವುಗಳನ್ನು ಅನಧಿಕಾರಿಗಳೇ ಬಹಳವಾಗಿ ಓದುತ್ತಿರುವದರಿಂದ ಅವರಿಗೆ ಅಹಂಕಾರವು ಮಟ್ಟಾಗುವ ಮೊದಲು ಬೆಟ್ಟವಾಗಿ ಬೆಳೆದುಕೊಳ್ಳುತ್ತದೆ. ಅವರು ಆ ಗ್ರಂಥಗಳಲ್ಲಿರುವ ವಿಷಯಗಳನ್ನು ತಮ್ಮ ಭಾಷಣಾದಿಗಳಲ್ಲಿ ಜನರಿಗೆ ತಿಳಿಯಿಸಿ ಅಹಂಕಾರವನ್ನೇ ಮೆರೆಯಿಸಿಕೊಳ್ಳುತ್ತಿರುವರು.

೨೩೮. ಒಬ್ಬ ವಿದ್ವಾಂಸನು ತಾನು ಓದಿದ ಅಧ್ಯಾತ್ಮಗ್ರಂಥಗಳಲ್ಲಿ ಉತ್ತಮವಾದವುಗಳೆಂದು ತನಗೆ ತೋರಿದ ಸೂಕ್ತಿಗಳನ್ನು ಕೆಳಗೀಟಿನಿಂದ ಗುರುತುಮಾಡಿಕೊಳ್ಳುತ್ತಿದ್ದನು. ಪುಸ್ತಕವನ್ನೆಲ್ಲ ಹೀಗೇಕೆ ಮಸುಕುಮಾಡುತ್ತೀರೆಂದು ಒಬ್ಬನು ಕೇಳಿದ್ದಕ್ಕೆ 'ನಾನು ಭಾಷಣಗಳನ್ನು ಮಾಡುವದಕ್ಕೆ ಹೊರಟಾಗ ಅಥವಾ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವದಕ್ಕಾರಂಭಿಸಿದಾಗ ಕಾಣಲೆಂದು' ಎಂದು ಅವನು ಉತ್ತರಕೊಟ್ಟನು !

೨೩೯. ದೊಡ್ಡವರ ಉಪದೇಶದ ಮಾತುಗಳನ್ನು ಪುರಾಣಶ್ರವಣ ಮಾಡಿಸುವಾಗಲೂ ಗ್ರಂಥರಚನೆಯನ್ನು ಮಾಡುವಾಗಲೂ ಉಪಯೋಗಿಸಿ. ಅದರಿಂದ ದೇಹಯಾತ್ರೆಯನ್ನು ಸಾಗಿಸಿಕೊಳ್ಳುವದಕ್ಕೆ ಉಪಯೋಗಿಸುವವನು ರತ್ನಗಳನ್ನು ಕೊಟ್ಟು ಸೊಪ್ಪನ್ನು ಕೊಳ್ಳುವವನೇ ಸರಿ ! ಆ ಉಪದೇಶಗಳ ಬೆಲೆ, ಪಾಪ, ಅವನಿಗೇನು ಗೊತ್ತು?

೨೪೦. ಒಬ್ಬ ಪಂಡಿತನು ಜನರಿಗೆ ಬಹುಕಾಲದವರೆಗೂ ಉಪದೇಶಮಾಡುತ್ತಿದ್ದನು. ಜನರು ಅವನನ್ನು ಬಹುವಾಗಿ ಮೆಚ್ಚುತ್ತಿದ್ದರು. ಶ್ರೋತೃಗಳಲ್ಲಿ ಒಬ್ಬನು ಒಂದು ದಿನ "ತಾವು ಇನ್ನು ಮುಂದೆ ಏನು ಮಾಡಬೇಕೆಂದಿರುವಿರಿ ?" ಎಂದು ಕೇಳಲು "ಅದನ್ನು ಯೋಚಿಸುವದಕ್ಕೆ ನನಗೆ ಇನ್ನೂ ಅವಕಾಶವು ದೊರೆತಿಲ್ಲ. ಯಾವಾಗಲೂ ಜನರು ನನ್ನನ್ನು ಏನಾದರೂ ಕೇಳುವದಕ್ಕೆ ಬರುತ್ತಿದ್ದಾರೆ. ಅವರಿಗೆ ಬೇಕಾದದ್ದನ್ನು ಪುಸ್ತಕಗಳಲ್ಲಿ ಹುಡುಕಿ ಸಿದ್ಧಮಾಡುವದರಲ್ಲಿಯೇ ಕಾಲವು ಕಳೆಯುತ್ತಿದೆ" ಎಂದನು.

೨೪೧. "ಈ ರಾತ್ರೆ ಸಾಮೂಹಿಕವಾಗಿ ಅಖಂಡನಾಮಸ್ಮರಣೆಯಾಗ ಬೇಕಾಗಿದೆ ; ತಾವೂ ಭಾಗಿಗಳಾಗುವಿರಾ ?" ಎಂದು ಭಜನಮಂಡಲಿಯವರು ಒಬ್ಬ ವಿದ್ವಾಂಸನನ್ನು ಕೇಳಿದರು. "ನನಗೆ ವಿರಾಮವಿಲ್ಲವಲ್ಲ ! ನಾಳೆ ರೇಡಿಯೋ ಮೂಲಕವಾಗಿ ನಾಮಮಹಿಮೆಯ ವಿಷಯದಲ್ಲಿ ಭಾಷಣ ಮಾಡಬೇಕಾಗಿದೆ ; ಅದಕ್ಕಾಗಿ ಈ ಪುಸ್ತಕಗಳಲ್ಲಿ ವಿಷಯವನ್ನು ಸಂಗ್ರಹಿಸುತ್ತಿದ್ದೇನೆ" ಎಂಬ ಉತ್ತರವು ಬಂತು !

೨೪೨. ಹೆಸರು, ಹಣ, ಗೌರವ– ಇದಕ್ಕಾಗಿ ಅಧ್ಯಾತ್ಮಗ್ರಂಥ ಗಳನ್ನು ಓದುವವರಿಗೆ ಉಪನ್ಯಾಸಗಳು, ವೃತ್ತಾಂತಪತ್ರಿಕೆಗಳು, ಪುಸ್ತಕಗಳು – ಇವೇ ಮುಖ್ಯಸಾಧನಗಳು. ಉಪನ್ಯಾಸಗಳಿಂದ ಸಾವಿರಾರು ಜನರನ್ನು ಮೆಚ್ಚಿಸಿದಲ್ಲದೆ, ವೃತ್ತಾಂತಪತ್ರಿಕೆಗಳಲ್ಲಿ ಹಣವನ್ನು ಕೊಟ್ಟಾದರೂ ತನ್ನ ಸುದ್ದಿಯನ್ನು ಮತ್ತೆ ಮತ್ತೆ ಹಾಕಿಸಿಕೊಂಡಲ್ಲದೆ, ಗ್ರಂಥಗಳಲ್ಲಿ ತನ್ನ ಬಿರುದಾವಳಿ ಗಳನ್ನು ಭಾವಚಿತ್ರಗಳನ್ನೂ ಪ್ರಕಟಿಸಿಕೊಂಡಲ್ಲದೆ, ಖ್ಯಾತಿಲಾಭಪೂಜೆಗಳು ಹೇಗೆ ಸಿಕ್ಕುವವು ?

೨೪೩. ಅಧ್ಯಾತ್ಮಜ್ಞಾನದಲ್ಲಿ ಮಿಗಿಲಿಲ್ಲದವನೆಂದು ಬಹುಜನರಿಂದ ಎನಿಸಿಕೊಳ್ಳಬೇಕಾದರೆ ಸುಲಭವಾದ ಉಪಾಯವೊಂದುಂಟು. ಉಪನ್ಯಾಸಾದಿ

ಗಳಿಂದ ಹೆಸರನ್ನು ಹರಡಿಸಿಕೊಳ್ಳುವದೂ, ಜನರಿಂದ ಮಾನಪತ್ರಗಳನ್ನು ಸಮರ್ಪಣೆಮಾಡಿಸಿಕೊಳ್ಳುವದೂ – ಇದಕ್ಕೆ ಬಹಳ ಹತ್ತಿರದ ದಾರಿ. ಆದರೆ ಇದು ಸಾಗದಿದ್ದರೆ ಅಭಿಪ್ರಾಯಭೇದಗಳನ್ನು ಒತ್ತಿ ಒತ್ತಿ ಜನರನ್ನು ಚರ್ಚೆಗೆ ಕರೆಯುವದನ್ನಾದರೂ ಕಲಿಯಬೇಕು.

೨೪೪. ಸದ್ಗುರುವಿನಿಂದ ಶಕ್ತಿಪಾತ, ಗ್ರಂಥಿಭೇದ– ಎಂಬ ಎರಡು ಅನುಗ್ರಹಗಳು ಆಗುವವೆಂದು ದೊಡ್ಡವರು ಹೇಳುತ್ತಾರೆ. ವಿನೀತನಾಗಿ ಶುಶ್ರೂಷೆಮಾಡುವ ಶಿಷ್ಯನಲ್ಲಿ ಗುರುಗಳ ಅಧ್ಯಾತ್ಮಶಕ್ತಿಯು ಬಂದು ಸೇರಿಕೊಳ್ಳುವದು ಶಕ್ತಿಪಾತವು ; ಗುರುಗಳ ಅನುಗ್ರಹದಿಂದ ಸಾಧನಗಳು ಬಲಿತು ಅವಿದ್ಯಾರಾಗದ್ವೇಷಗಳ ಕಗ್ಗಂಟು ಬಿಚ್ಚಿಕೊಳ್ಳುವದು ಗ್ರಂಥಿಭೇದವು. ಆದರೆ ಗ್ರಂಥದ ಅಭಿಮಾನದಿಂದ ಗ್ರಂಥಿಯ ದಾರ್ಢ್ಯವೇ ಆಗುವದು ; ಸಲ್ಲದ ವಾದ ವಿವಾದಗಳಿಂದ ಅಧ್ಯಾತ್ಮಶಕ್ತಿಯ ವಿನಾಶವೂ ಆಗುವದು.

೨೪೫. ಸದ್ಗ್ರಂಥಗಳನ್ನು ಅವಶ್ಯವಾಗಿ ಓದಬೇಕು. ಆದರೆ ಗ್ರಂಥವಾಚನವು ಪಂಥಗಳ ಹೋರಾಟಕ್ಕೆ ಉಪಯೋಗವಾಗಬಾರದು ; ಸಂತರ ಸಹವಾಸಕ್ಕೂ ಅಂತರ್ಮುಖನಾಗಿ ಆತ್ಮಜ್ಞಾನವನ್ನು ಸಂಪಾದಿಸುವದಕ್ಕೂ ಉಪಯೋಗವಾಗಬೇಕು.

೨೪೬. ದೇವಸ್ಥಾನಗಳ ಹೊರಗಡೆ ಅಂಗಡಿಯವರ ಮತ್ತು ಭಿಕ್ಷುಕರ ಗದ್ದಲ ; ಒಳಗೆ ಪುರಾಣ ಅಥವಾ ಶಾಸ್ತ್ರಾರ್ಥದ ಕೂಗಾಟ. ಆದರೆ ನಿಜವಾದ ಪೂಜೆಯು ಗರ್ಭಗುಡಿಯಲ್ಲಿ ನಡೆಯುತ್ತಿರುತ್ತದೆ. ಅಲ್ಲವೆ ? ಗ್ರಂಥಗಳೂ ವಾದಗಳೂ ಹೊರಗಿನ ಆಡಂಬರ ; ಹೃದಯದಲ್ಲಿ ಧ್ಯಾನಮಾಡುವದೇ ಪರಮಾತ್ಮನ ಸಾಮಿಪ್ಯಕ್ಕೆ ಸಾಧನ.

೨೪೭. ಪುಸ್ತಕವೇದಾಂತವು ಹೆಚ್ಚಿದರೆ ಮಸ್ತಿಷ್ಕವು ದುರ್ಬಲ ವಾಗುವದು. ಆಗ ಯಾರು ಏನು ಹೇಳಿದರೂ ವೇದಾಂತವೇ ಎಂಬ ನಂಬಿಕೆಯು ಬಂದುಬಿಡಬಹುದು. ಗ್ರಂಥಗಳ ಹೆಸರನ್ನು ಸಹಸ್ರನಾಮಗಳಂತೆ ಉಚ್ಚರಿಸುವ ವರು ಎಷ್ಟೋ ಜನರು ಸಿಕ್ಕಬಹುದು. ವೇದಾಂತವಾಕ್ಯಗಳನ್ನು ಹೆಜ್ಜೆಹೆಜ್ಜೆಗೂ ಉದಾಹರಿಸುವವರನ್ನು ಕಾಣಬಹುದು. ಆದರೆ ಅವರಲ್ಲಿ ವೇದದ ಅಂತವು – ಎಂದರೆ ನಾಶವು – ಆಗಿರುವವರೇ ಬಹಳ. ಏಕೆಂದರೆ ವೇದಕ್ಕಿಂತಲೂ ಅವರಿಗೆ ವಾದವೇ ಮೆಚ್ಚಾಗಿರುತ್ತದೆ.

೨೪೮. ಒಂದು ವೇದಾಂತವಿಚಾರಸಂಘದಲ್ಲಿ ಇಬ್ಬರು ವಿದ್ವಾಂಸರು ಸೇರಿದ್ದರು. ಅವರಿಬ್ಬರ ಸಂಭಾಷಣೆಯಲ್ಲಿ ಯಾವ ಅಮೋಘವಾದ ತತ್ತ್ವಗಳು ಹೊರಬೀಳುವವೋ ಎಂದು ಕುತೂಹಲದಿಂದ ಅನೇಕಜನರು ಗುಂಪು ಗುಂಪಾಗಿ ಬಂದು ನೆರೆದಿದ್ದರು. ಆದರೆ ವಿದ್ವಾಂಸರಿಂದ ತತ್ತ್ವಗಳು ಹೊರಬೀಳುವದರ ಬದಲಾಗಿ ಅಲ್ಲಿದ್ದ ಬೀರುವಿನಿಂದ ಹೊತ್ತಗೆಗಳು ಹೊರಬಿದ್ದು ರಾಶಿಯಾಗಿದ್ದವು !

೨೪೯. ವಾದಕ್ಕಾಗಿ ವಾದವನ್ನು ಮಾಡುವವರು ಸೇರಿದ ಸ್ಥಲದಲ್ಲಿ ವೇದಾಂತಕ್ಕೆ ಅವಕಾಶವಿರಲಾರದು. ಆ ವಾದಿಗಳು ತಮ್ಮತಮ್ಮ ಪಕ್ಷವನ್ನು ಸಾಧಿಸುವದಕ್ಕೆಂದು ಹೊಸಹೊಸ ಯುಕ್ತಿಗಳನ್ನು ತಂದು ಒಬ್ಬರನ್ನೊಬ್ಬರು ಸೋಲಿಸುವದಕ್ಕೆ ಪ್ರಯತ್ನಿಸುತ್ತಿರುವದನ್ನು ಕಂಡರೆ ಅದೊಂದು ಕುಸ್ತಿಯ ಬಯಲೆಂಬ ಭಾವನೆಯುಂಟಾದೀತು ; ಅಲ್ಲಿ ಮನಸ್ಸಿಗೆ ಶಾಂತಿಯು ಸಿಕ್ಕುವ ಆಶೆಯು ಎಲ್ಲಿಯದು ?

೨೫೦. ಸೋಲುಗೆಲವುಗಳಿಗಾಗಿ ಮಾಡುವ ವಾದಕ್ಕೂ ತತ್ತ್ವನಿರ್ಣಯಕ್ಕಾಗಿ ಮಾಡುವ ವಾದಕ್ಕೂ ಒಂದು ಮುಖ್ಯವಾದ ತಾರತಮ್ಯವಿದೆ. ಸೋಲು ಗೆಲವುಗಳಿಗಾಗಿ ವಾದಿಸುವವರ ಸಂಭಾಷಣೆಯು ಮಾದಕದ್ರವ್ಯಗಳನ್ನು ಸೇವೆಮಾಡಿದವರ ಮಾತುಕತೆಗಳಂತೆ ಅಸಂಬದ್ಧವಾಗಿರುತ್ತವೆ. ಅಲ್ಲಿ ವ್ಯರ್ಥವಾದ ಪಾಂಡಿತ್ಯಪ್ರದರ್ಶನ, ಹೆಮ್ಮೆಯ ಮೆರೆವಣಿಗೆ, ರಾಗದ್ವೇಷಗಳ ಬಾಣಬಿರುಸುಗಳು – ಇವೇ ಎದ್ದು ಕಾಣಿಸುತ್ತಿರುವವು. ಆದರೆ ತತ್ತ್ವನಿರ್ಣಯಕ್ಕಾಗಿ ಮಾಡುವ ಸಂಭಾಷಣೆಯು ಗಂಧರ್ವರು ಮಾಡುವ ಇಂಪಾದ ಕಿರುದನಿಯ ಗಾನದಂತಿರುವದು. ಅವರ ದಿವ್ಯವಾದ ಆಲಾಪನೆಯು ಎಲ್ಲರನ್ನೂ ತತ್ತ್ವದ ಅನುಸಂಧಾನದಲ್ಲಿಯೇ ನಿಂತು ಮೈಮರೆಯುವ ಸಮಾಧಿಯನ್ನು ತಂದು ಕೊಡುತ್ತಿರುವದು.

೨೫೧. ಇಬ್ಬರು ರಾಜರಿಗೆ ಯಾವದೋ ಕಾರಣದಿಂದ ಮತಭೇದವುಂಟಾಯಿತು ; ಅವರು ಒಬ್ಬರಮೇಲೊಬ್ಬರು ದಂಡೆತ್ತಿ ಬಂದು ಒಬ್ಬರು ಮತ್ತೊಬ್ಬರ ನಗರವನ್ನು ಮುತ್ತಿದರು. ಇಷ್ಟರಲ್ಲಿ ಒಂದು ಚಮತ್ಕಾರವಾಯಿತು. ಅವರಲ್ಲಿ ಒಬ್ಬ ಅರಸನ ಕುಮಾರಿಯು ಇನ್ನೊಬ್ಬನ ಮಗನ ಗುಣಕ್ಕೆ ಮೆಚ್ಚಿ ಅವನನ್ನು ತಾನು ವರಿಸುವದಾಗಿ ತಂದೆಗೆ ತಿಳುಹಿದಳು. ರಾಜಕುಮಾರನ

ತಂದೆಯ ಮನಸ್ಸಿನಲ್ಲಿದ್ದ ಕ್ರೋಧವು ಹರ್ಷವಾಯಿತು. ಯುದ್ಧರಂಗವು ವಿವಾಹಸಂಭ್ರಮದ ಮಂಡಪವಾಯಿತು ! ವಾದದ ಜನರ ಸೇರುವೆಯು ಆ ರಾಜರಿಬ್ಬರ ಯುದ್ಧರಂಗದಂತಿರುವದು ; ತತ್ತ್ವನಿರ್ಣಾಯಕರ ಸೇರುವೆಯು ಅವರ ವಿವಾಹಮಂಟಪದ ಸಂಭ್ರಮದಂತಿರುವದು.

೨೫೨. ಶಿಕ್ಷಾವ್ಯಾಕರಣಛಂದಸ್ಸುಗಳೂ ನಿರುಕ್ತವ್ಯಾಕರಣ ಜ್ಯೋತಿಷ್ಯ ಗಳೂ ವೇದಾರ್ಥವನ್ನು ನಿರ್ಣಯಿಸುವದಕ್ಕೆ ಅಂಗಗಳೆಂದು ಋಷಿಗಳು ನಿರ್ಮಿಸಿದರು. ಆದರೆ ಪ್ರಾಪಂಚಿಕರು ಅವನ್ನು ವಾದಾರ್ಥವಾಗಿ ಉಪಯೋಗಿ ಸಿಕೊಂಡರು. ಅಕ್ಷರವನ್ನು ಓದುವದಕ್ಕೆ ಕಲಿತುಕೊಂಡು ವಾದರಂಗಕ್ಕಿಳಿ ಯುವದಕ್ಕಿಂತ ಅಕ್ಷರನಾ ಪರಮಾತ್ಮನನ್ನು ತಿಳಿದುಕೊಂಡು ವೇದದ ಅಂತರಂಗದಲ್ಲಡಗುವದೇ ಮೇಲು.

೨೫೩. ಇಬ್ಬರು ಜಿಜ್ಞಾಸುಗಳು ತಮಗೆ ಉಪದೇಶವನ್ನು ಮಾಡಬಲ್ಲ ಗುರುವನ್ನು ಹುಡುಕಿಕೊಂಡು ಹೊರಟಿದ್ದರು. ಅವರು ಹರಿದ್ವಾರಕ್ಕೆ ಬರುವಷ್ಟರಲ್ಲಿ ಅಲ್ಲೆಲ್ಲ ಇಬ್ಬರ ಕೀರ್ತಿಯು ಹಬ್ಬಿತ್ತು. ಆ ಇಬ್ಬರೊಳಗೆ ಒಬ್ಬನು ಮಹಾವಿದ್ವಾಂಸನು. ಅವನು ಭರತಖಂಡದಲ್ಲೆಲ್ಲ ಸಂಚರಿಸಿ ಪ್ರತಿವಾದಿಗಳನ್ನೆಲ್ಲ ಜಯಿಸಿ ತಾನು ಬರೆದ ತತ್ತ್ವವಿಚಾರದ ಗ್ರಂಥಗಳನ್ನು ಒಂದು ಭವನದಲ್ಲಿ ಪುಸ್ತಕಭಂಡಾರವಾಗಿ ಪ್ರದರ್ಶನಕ್ಕೆ ಇಟ್ಟುಕೊಂಡಿದ್ದನು. ಒಬ್ಬ ಜಿಜ್ಞಾಸುವು 'ಈ ಪಂಡಿತಮಹಾಶಯನಲ್ಲಿ ಹೋಗಿ ಬ್ರಹ್ಮವಿದ್ಯೆಯನ್ನು ಅಭ್ಯಾಸಮಾಡೋಣವೆ ?'' ಎಂದನು. ಇನ್ನೊಬ್ಬನು ''ಬೇಡ , ಬೇಡ. ಈ ದಿನ 'ವಾದದಲ್ಲಿ ನಾನು ಸೋತೆ' ಎಂದು ಈ ಪಂಡಿತನಿಗೆ ಜಯಪತ್ರವನ್ನು ಕೊಟ್ಟು ಸಾಧುಗಳ ಬಳಿಗೆ ಹೋಗೋಣ. ಏಕೆಂದರೆ ಅವರು ವಾದದಲ್ಲಿ ಸೋತೆನೆಂದಿರುವದರಿಂದ ವೇದದಲ್ಲಿ ನಿಷ್ಠರಾಗಿರುವ ಸಂಭವವಿದೆ'' ಎಂದನು.

೨೫೪. ವಚನ, ವಾದ, ವಿದ್ಯೆ, ವೀಕ್ಷಣ, ವೇದನ – ಇವುಗಳಲ್ಲಿ ವೇದನವೇ ಕೊನೆ, ಮಾತಿನಿಂತ ಮನಸ್ಸು ಒಳಗೆ, ಮನಸ್ಸಿಗಿಂತಲೂ ಹೃದಯವು ಒಳಗೆ. ಬ್ರಹ್ಮನಿಷ್ಠರು ಮಾತುಮನಸ್ಸುಗಳಿಗೆ ನಿಲುಕದ ಪರಮಾತ್ಮನನ್ನು ತಮ್ಮ ಹೃದಯಕುಹರದಲ್ಲಿಯೇ ಕಂಡು ಆನಂದದಲ್ಲಿ ಮುಳುಗಿರುತ್ತಾರೆ.

ಗುರುಗಳಾಗಬೇಕೆಂಬ ಇಚ್ಛೆಯುಳ್ಳವರು ಈ ಲೋಕದಲ್ಲಿ ಬಹಳವಾಗಿರುವಂತೆ ಕಾಣುತ್ತದೆ. ವೇಷದಿಂದ ಸಾಧುಗಳಾಗಿ ಅಥವಾ ಸಂನ್ಯಾಸಿ

ಗಳಾಗಿ ಕಾಣಿಸಿಕೊಳ್ಳುವದು, ಕರ್ಮವನ್ನು ತಿರಸ್ಕರಿಸಿ ನಾಮಸ್ಮರಣೆಯನ್ನು ಅಥವಾ ಜ್ಞಾನವನ್ನು ಹೆಚ್ಚೆಂದು ತೋರಿಸುವದಕ್ಕೆ ಹೋಗುವದು, ಅವಧೂತರೆಂದು ಸ್ವೇಚ್ಛಾಚಾರದಿಂದ ತಮ್ಮ ಮೇಲ್ಮೆಯನ್ನು ಪ್ರಕಟಿಸುವದು, ಅಥವಾ ಯೋಗಿಗಳೆಂದು ಏಕಾಂತದಲ್ಲಿ ಕೋಣೆಗಳಲ್ಲಿ ಕದವನ್ನು ಹಾಕಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವದು – ಇಂಥ ಚಿಹ್ನೆಗಳಿಂದ ಈ ಗುರುಗಳನ್ನು ನೀವು ಬೇಗನೆ ಗುರುತಿಸಬಹುದು.

೨೫೬. ಗುರುತ್ವದ ಬಯಕೆಯು ಹೆಚ್ಚಾದದ್ದಕ್ಕೆ ದೇಹದಲ್ಲಿ ಅಭಿಮಾನವು ಹೆಚ್ಚಿರುವದು ಒಂದು ಗುರುತು. ಕಾಲುಗಳಲ್ಲಿ ಪಾದುಕೆ ಧರಿಸುವದು, ಮೈಮೇಲೆ ರೇಶ್ಮೆಯ ಕಫನಿ ಅಥವಾ ಜರತಾರಿಯ ಕಾವಿ, ಕೊರಳಲ್ಲಿ ರುದ್ರಾಕ್ಷಿಯ ಸರ, ಹಣೆಗೆ ಎದ್ದುಕಾಣುವ ಭಸ್ಮ ತಿಲಕ, ಅಥವಾ ಕುಂಕುಮ, ತಮ್ಮ ಫೋಟೊಗಳನ್ನು ಶಿಷ್ಯರಿಗೆ ಹಂಚುತ್ತಿರುವದು, ತೀರ್ಥಪ್ರಸಾದೋಚ್ಛಿಷ್ಟಗಳನ್ನು ಹಂಚುವದರಲ್ಲಿ ಆಸಕ್ತಿ, ಉಚ್ಚಾಸನದಲ್ಲಿ ಕುಳಿತು ಎಲ್ಲರನ್ನೂ ಏಕವಚನದಿಂದ ಸಂಬೋಧಿಸುವ ಹಂಬಲು, ಕಾಲುಗಳನ್ನು ಮುಟ್ಟಿ ನಮಸ್ಕರಿಸುವವರಿಗೂ ಕಾಲನ್ನು ಒತ್ತುವವರಿಗೂ ಪ್ರೋತ್ಸಾಹ – ಇಂಥವುಗಳು ಮಿಥ್ಯಾಗುರುಗಳ ಧ್ವಜಪಟಗಳು.

೨೫೭. ತೋರಿಕೆಯ ಗುರುವೆಂಬುದಕ್ಕೆ ಗುರುತೇನು ? ಉಪದೇಶದಿಂದ ಶಿಷ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಇವನು ನಮ್ಮ ಸಂಪ್ರದಾಯಕ್ಕೆ ಸೇರಿದವನು ಎಂದು ಆಗಾಗ್ಗೆ ಹೇಳಿಕೊಳ್ಳುತ್ತಿರುವದು, ಸಾಧುಸಂತರನ್ನೂ ಮಹಾತ್ಮರನ್ನೂ ವಾದಕ್ಕೆ ಕರೆಯುತ್ತಿರುವದು, ತನಗೆ ಆಗಿರುವ ಅದ್ಭುತ ದರ್ಶನಗಳನ್ನೂ ತಾನು ಮಾಡಿರುವ ಅದ್ಭುತಲೀಲೆಗಳ್ನೂ ತನ್ನ ಕಡೆಯುವರಿಂದ ಪ್ರಚಾರಮಾಡಿಸಿಕೊಳ್ಳುತ್ತಿರುವದು ಅಥವಾ ತಾನೇ ಹೇಳಿಕೊಳ್ಳುತ್ತಿರುವದು, ತನ್ನನ್ನು ಯಾರೂ ಕೇಳದಿದ್ದರೂ ಉಪದೇಶಮಾಡುವದಕ್ಕೆ ಹವಣಿಸುವದು. ಬೆಳ್ಳಿಬಂಗಾರದ ಅಂಗಡಿಗೂ ತವರದ ಸಾಮಾನುಗಳ ಪ್ರದರ್ಶನಸ್ಥಳಕ್ಕೂ ಇರುವ ತಾರತಮ್ಯವೇ ನಿಜವಾದ ಗುರುಗಳಿಗೂ ತೋರಿಕೆಯ ಗುರುಗಳಿಗೂ ಇರುವದು.

೨೫೮. ಕಾರಣವಿಲ್ಲದೆ ಗುರ್ರೆನ್ನುವ ನಾಯಿಗೂ ವಿಷಯವಿಲ್ಲದೆ ಪಾರಿಭಾಷಿಕಶಬ್ದಗಳನ್ನುಪಯೋಗಿಸಿ ಹರಟುವ ಮಿಥ್ಯಾಗುರುವಿಗೂ ಏನು ಹೆಚ್ಚು ಕಡಿಮೆ ?

೨೫೯. ಶಾಸ್ತ್ರಜ್ಞಾನಕ್ಕೂ ತತ್ತ್ವಜ್ಞಾನಕ್ಕೂ ಬಹುದೂರ. ಭೂಗೋಳ ಪಾಠವನ್ನು ಹೇಳುತ್ತಿದ್ದ ಉಪಾಧ್ಯಾಯನೊಬ್ಬನು ಹುಡುಗರೊಡನೆ ಮಾತಾಡುತ್ತಿರುವಾಗ ನರ್ಮದಾನದಿಯು ಪೂರ್ವದ ಕಡೆಗೆ ಹರಿಯುವದೊ, ಪಶ್ಚಿಮದ ಕಡೆಗೊ ಎಂಬುದನ್ನು ಗೊತ್ತುಪಡಿಸುವದಕ್ಕೆ ನಕ್ಷೆಯ ಪುಸ್ತಕದ ಹಾಳೆಗಳನ್ನು ತಿರುವಿಹಾಕುತ್ತಿದ್ದನಂತೆ. ಆದರೆ ಅಲ್ಲಿಯೇ ಕುಳಿತಿದ್ದ ಮುದುಕನೊಬ್ಬನು ''ಸ್ವಾಮಿ, ಆ ನದಿಯು ಪುಸ್ತಕದಲ್ಲಲ್ಲ, ಹರಿಯುವದು ; ಭೂಮಿಯ ಮೇಲೆ ; ನನಗೆ ಗೊತ್ತಿದೆ, ಅದು ಪೂರ್ವಕ್ಕೆ ಹರಿಯುವದಿಲ್ಲ. ಪಶ್ಚಿಮದಿಕ್ಕಿಗೇ ಹರಿಯುತ್ತದೆ. ಆದರೆ ಈಜುಬಾರದವರು ಎಚ್ಚರಿಕೆಯಿಂದಿರಬೇಕು, ಏಕೆಂದರೆ ಅದು ಬಹಳ ಆಳ !'' ಎಂದನಂತೆ !

೨೬೦. ನಿಜವಾದ ಗುರುವು ಸದ್ಗುರುವೆನಿಸುವನು. ಸದ್ಗುರುವಿನ ಉಪದೇಶವು ದೊರೆತದ್ದಕ್ಕೆ ಅಜ್ಞಾನದ ಮಬ್ಬು ಹೋದದ್ದೇ ಗುರುತು. ಕಣ್ಣಿನ ಪರೆಯನ್ನು ತೆಗೆದೆನೆಂದು ವೈದ್ಯನು ಹೇಳಿದ್ದು ಸಾಲದು, ನಮಗೆ ಹೊರಗೆ ವಸ್ತುಗಳು ಕಾಣಿಸಬೇಕಲ್ಲವೆ ? ಸದ್ಗುರುವು ನಮ್ಮ ಒಳಗಣ್ಣಿನ ಪರೆ ತೆರೆದನೆಂದರೆ ನಮ್ಮೊಳಗೂ ಹೊರಗೂ ಎಲ್ಲೆಲ್ಲಿಯೂ ಪರಮಾತ್ಮನೇ ಕಾಣಿಸುವನು.

೨೬೧. ಬಿಸಿಲ ಬೇಗೆಗೆ ಬಳಲಿ ಬೀದಿಯಲ್ಲಿ ನೀರಿಗೆಂದು ಓಡಾಡುತ್ತಿದ್ದ ಜನರನ್ನು ಕಂಡು ಒಬ್ಬ ಸಾಹುಕಾರನು ಮರುಕದಿಂದ 'ಉಪ್ಪರಿಗೆಯ ಮೇಲಕ್ಕೆ ಬನ್ನಿರಯ್ಯ !' ಎಂದು ಕರೆಯಿಸಿ ಸಕ್ಕರೆಯ ಪಾನಕವನ್ನು ಕೊಡಿಸುತ್ತಿದ್ದನಂತೆ. ಅವನ ಜೊತೆಗಾರನೊಬ್ಬನು ನಿಮಗೆ 'ಇದರಿಂದೇನು ಲಾಭ ?' ಎಂದು ಕೇಳಲು 'ಇವರ ಕಂಗೆಟ್ಟ ಮುಖವನ್ನು ನೋಡುವದು ತಪ್ಪುವದಲ್ಲ, ಇದಕ್ಕಿಂತ ಮತ್ತೇನು ಲಾಭ ಬೇಕು ?' ಎಂದು ಉತ್ತರವಿತ್ತನಂತೆ. ಪರಮಕಾರುಣಿಕನಾದ ಸದ್ಗುರುವಿಗೆ ಉಪದೇಶದಿಂದ ಶಿಷ್ಯರನ್ನು ಉದ್ಧಾರಮಾಡುವದೇ ಒಂದು ಆನಂದ ! ಅವನಿಗೆ ಸುಮ್ಮನೆ ಇರುವದಕ್ಕೆ ಆಗುವದೇ ಇಲ್ಲ.

೨೬೨. ಮಳೆಗಾಲದಲ್ಲಿ ತೆಗೆದ ಗುಂಡಿಗಳಲ್ಲಿ ಬೇಗನೆ* ನೀರು ಕಾಣಿಸಿಕೊಳ್ಳುತ್ತದೆ. ಆದರೆ ಆ ಗುಂಡಿಗಳು ಬೇಸಗೆಯಲ್ಲಿ ತೀರ ಒಣಗಿಹೋಗಿರುತ್ತವೆ. ಅವುಗಳನ್ನು ನೆಚ್ಚಿಕೊಂಡು ಭಾವಿಗಳನ್ನು ತೋಡಿಸದೆ ಇರುವದಕ್ಕೆ ಆಗುವದಿಲ್ಲ. ಹೀಗೆಯೇ ಎಲ್ಲೆಲ್ಲಿಯೂ ಅಧ್ಯಾತ್ಮವಿಚಾರಗಳನ್ನು ಹರಡುತ್ತಿರುವ ವಾಚಾ ವೇದಾಂತಿಗಳನ್ನು ನೆಚ್ಚಿಕೊಂಡು ಸದ್ಗುರುಗಳನ್ನು ಅರಸುವದನ್ನು ಬಿಡುವದು ಆಗಲಾರದು.

೨೬೩. ನಾವು ಹೋಗುವ ಊರಿಗೆ ಬಂಡಿಸಿಕ್ಕದೆ ಇದ್ದರೆ ಯಾವದಾದರೊಂದು ಸಂತೆಯ ಬಂಡಿಯಲ್ಲಿ ಕುಳಿತುಕೊಳ್ಳೋಣವೆಂದು ವಿವೇಕಿಯಾದವನು ಯೋಚಿಸುವದಿಲ್ಲ. ಇದರಂತೆ ನಮ್ಮ ಹೃದಯಕ್ಕೆ ಮುಟ್ಟುವ ಉಪದೇಶವನ್ನು ಕೊಡುವ ಸದ್ಗುರುವು ಸಿಕ್ಕದೆ ಇದ್ದ ಮಾತ್ರದಿಂದ ಹೊಟ್ಟೆಯ ಪಾಡಿಗಾಗಿ ಆಕಾಶಪುರಾಣವನ್ನು ಹೇಳುವವನೊಬ್ಬನಿಂದ ಉಪದೇಶ ಪಡೆಯುವದಕ್ಕೆ ಮುಮುಕ್ಷುವಾದವನು ಯಾವನೂ ಹವಣಿಸಲಾರನು.

೨೬೪. ಗುರುಗಳ ಹತ್ತಿರಕ್ಕೆ ಬರುವವರೆಲ್ಲ ಅವರ ಉಪದೇಶಕ್ಕೇ ಬರುತ್ತಾರೆಂದು ತಿಳಿಯಬಾರದು. ಕೆಲವರು ಅವರ ಮಾತಿನ ಚಮತ್ಕಾರವನ್ನು ನೋಡುವದಕ್ಕೆ ಬರುತ್ತಾರೆ. ಕೆಲವರು ಸ್ವಲ್ಪ ಹೊತ್ತು ವಿನೋದಕಾಲಕ್ಷೇಪಕ್ಕೆ ಬರುತ್ತಾರೆ. ಮತ್ತೆ ಕೆಲವರು ಅಲ್ಲಿ ಸಿಕ್ಕಬಹುದಾದ ಪ್ರಸಾದಕ್ಕೆಂದು ಬಂದಿರುತ್ತಾರೆ ! ಸಂತೆಗೆ ಬರುವವರೆಲ್ಲರೂ ಸಾಮಾನುಕೊಳ್ಳುವದಕ್ಕೇ ಬರುವದಿಲ್ಲ. ಕೆಲವರು ಸುಂಕದ ವಸೂಲಿಗೂ, ಕೆಲವರು ತಿರುಪೆಗೂ ಬರುತ್ತಾರೆ ; ಕೆಲವರು ಗಂಟುಕಳ್ಳರೂ ಅಲ್ಲಿಗೆ ಬರುತ್ತಾರೆ.

೨೬೫. ಒಂದು ಕಡೆಯಲ್ಲಿ ಪುರಾಣವು ನಡೆಯುತ್ತಿತ್ತು. ಬಹಳ ಜನರು ನೆರೆದಿದ್ದದ್ದನ್ನು ಕಂಡು ಪುರಾಣಿಕನು ತನ್ನ ವಾಗ್ವೈಖರಿಯನ್ನೂ ಶಬ್ದಝರಿಯನ್ನೂ ಪ್ರದರ್ಶನಮಾಡುತ್ತಿದ್ದನು. ಅಲ್ಲಿ ಸೇರಿದ್ದ ಹೆಣ್ಣುಮಕ್ಕಳಲ್ಲಿ ಕೆಲವರು ಎಲೆಹಚ್ಚುತ್ತಿದ್ದರು, ಇನ್ನು ಕೆಲವರು ಹತ್ತಿಯ ಬತ್ತಿಗಳನ್ನು ಮಾಡಿಕೊಳ್ಳುತ್ತಿದ್ದರು, ಮತ್ತೆ ಕೆಲವರು ಒಬ್ಬರ ಯೋಗಕ್ಷೇಮವನ್ನೊಬ್ಬರು ವಿಚಾರಿಸಿಕೊಳ್ಳುತ್ತಿದ್ದರು. ಅಲ್ಲಿದ್ದ ಒಬ್ಬ ಪ್ರೇಕ್ಷಕನು ಉಚ್ಚ ಸ್ವರದಿಂದ 'ಸ್ವಾಮಿ, ಪುರಾಣವು ಪ್ರಾರಂಭವಾಗುವದು ಯಾವಾಗ ?' ಎಂದನಂತೆ !

೨೬೬. ಮನುಷ್ಯನಿಗೆ ಹಣ, ಮನೆಮಠಗಳು, ಹೊಲಗದ್ದೆಗಳು, ಹೆಂಡಿರುಮಕ್ಕಳು, ಆಳುಕಾಳು, ಅಧಿಕಾರ, ಕೀರ್ತಿ – ಮುಂತಾದವುಗಳಲ್ಲಿ ಇರುವ ಹೆಚ್ಚಿನ ಪ್ರೀತಿಯೇ ಅಧ್ಯಾತ್ಮಸಾಧನಕ್ಕೆ ಅಡ್ಡಿಯಾಗಿರುತ್ತದೆ. ತನಗೆ ಈ ಲೋಕದಲ್ಲಿ ಇವುಗಳ ಪ್ರಾಪ್ತಿಯಾಗುವ ಸಂಭವವಿಲ್ಲವೆಂದು ತಿಳಿದಾಗಲೂ ಅಲ್ಲಿ ಇಲ್ಲಿ – ಇವುಗಳಿಗಾಗಿ ಆಯಾಸಪಡುತ್ತಾ ಆಯುಸ್ಸನ್ನು ಕಳೆಯುವದೇ ಸುಖವೆಂದು ಅವನಿಗೆ ತೋರುತಿರುವದು.

೨೬೭. ಒಬ್ಬ ವೃದ್ಧನು ಶುಕ್ಲವೃತ್ತಿಯಿಂದ ಜೀವನಮಾಡುತ್ತಿದ್ದನು. ಅವನ ಕಾಲುಬೆರಳುಗಳು ಸ್ವಭಾವದಿಂದಲೇ ಮಡಿಸಿಕೊಂಡಿದ್ದರಿಂದ ಅವನಿಗೆ ನಡೆಯುವದಕ್ಕೆ ಆಗುತ್ತಿರಲಿಲ್ಲ. ಆದರೂ ತಮ್ಮ ಊರಿನಲ್ಲಿ ಒಬ್ಬರ ಮನೆಯನ್ನೂ ಬಿಡದೆ ಅವನು ಬೆಳಗೆಲ್ಲ ಸುತ್ತಾಡಿ ಅಕ್ಕಿಯನ್ನು ಕೂಡಿಹಾಕುತ್ತಿದ್ದನು. ಊರಿನವರು ಎಷ್ಟೋ ಜನರು ಅವನ ಹಿಡಿಯದ ಆಸೆಯನ್ನು ಕಂಡು ಬೇಸರವನ್ನು ಪ್ರಕಟಿಸುತ್ತಿದ್ದರು. ಆದರೂ ಅವನು ಮಳೆ, ಛಳಿ, ಬೇಸಗೆ ಯಾವದಕ್ಕೂ ಅಂಜದೆ, ಊರೆಲ್ಲ ಭಿಕ್ಷೆಗಾಗಿ ತಿರುಗುತ್ತಿದ್ದನು. ಹರಿಕಥೆ, ಪುರಾಣ, ಉತ್ಸವ– ಮುಂತಾದವುಗಳು ನಡೆಯುವ ಸ್ಥಲದಲ್ಲಿಯೂ ಅವನಿಗೆ ಬಿಡುವಿರಲಿಲ್ಲ. ಅಲ್ಲಿಯೂ ಜನರನ್ನು ಏನಾದರೂ ಸಹಾಯಮಾಡಿರಪ್ಪ !– ಎಂದು ಕೇಳಿಕೊಳ್ಳುತ್ತಿದ್ದನು !

೨೬೮. ಹರಿಕೀರ್ತನೆಗಳನ್ನು ಕೇಳುವವರಲ್ಲಿ ಕೆಲವರು ಮಗ್ನರಾಗಿರುತ್ತಾರೆ ; ಆದರೆ ಮತ್ತೆಕೆಲವರು ಕೀರ್ತನಸಮಾರಂಭದಲ್ಲಿ ಸೇರಿದವರ ಜೇಬಿನಲ್ಲಿದ್ದ ಹಣದ ಚೀಲವನ್ನೋ ಅಥವಾ ಆ ಕೀರ್ತನದ ಮನೆಯ ಹೊರಗೆ ಬಿಟ್ಟಿರುವ ಎಕ್ಕಡಗಳನ್ನೋ ಕದಿಯುವದರಲ್ಲಿ ನಿರತರಾಗಿರುತ್ತಾರೆ !

೨೬೯. ಸಾಧುಗಳ ದರ್ಶನ, ದೇವಾಲಯಪ್ರವೇಶ, ತೀರ್ಥ ಯಾತ್ರೆ, ಭಕ್ತರ ಸಮಾರಾಧನೆ – ಇಂಥ ವ್ಯಾಪಾರಗಳಲ್ಲಿರುವಾಗಲೂ ಪ್ರಾಪಂಚಿಕರಿಗೆ ಲೌಕಿಕವಾಸನೆಯು ತಪ್ಪಿರುವದಿಲ್ಲ. ಸಾಧುಗಳ ಸೇವೆಯಲ್ಲಿರುವ ಅನೇಕರು– ಭಕ್ತರು ಕೊಡುವ ಹಣ್ಣುಹಂಪಲು, ಕಾಣಿಕೆಗಳು – ಇವುಗಳನ್ನು ಹಂಚಿಕೊಳ್ಳುವದರಲ್ಲಿ ನಿರತರಾಗಿರುತ್ತಾರೆ. ದೇವಾಲಯದ ಪೂಜೆಗೆ ನಿಯಮಿತ ರಾಗಿದ್ದರೂ ಅಲ್ಲಿ ಸಿಕ್ಕುವ ಕಾಯಿಹೋಳು, ಕರ್ಪೂರ, ನೈವೇದ್ಯದನ್ನ – ಇವುಗಳಲ್ಲಿಯೇ ಅವರಿಗೆ ಲಕ್ಷ್ಯವಿರುತ್ತದೆ. ತೀರ್ಥಯಾತ್ರೆಗೆಂದು ಹೋಗಿರು ವಾಗಲೂ ಕೆಲವರು ಅಲ್ಲಿ ಸಿನೆಮಾ, ರೇಡಿಯೊ – ಮುಂತಾದವುಗಳ ವಿನೋದ ವನ್ನೇ ಮುಖ್ಯವೆಂದೆಣಿಸುತ್ತಾರೆ. ರಾಮಾಯಣಾದಿಗಳನ್ನು ಪಾರಾಯಣಮಾಡು ವಾಗಲೂ ಕೆಲವರಿಗೆ ಅಲ್ಲಿ ರಾಮನ ಸ್ವಭಾವದಲ್ಲಿ ಯಾವದಾದರೊಂದು ದೋಷವೇ ಮೊದಲು ಮನಸ್ಸಿಗೆ ತಟ್ಟುತ್ತದೆ !

೨೭೦. ತತ್ಕಾಲಕ್ಕೆ ಕೆಲವರಿಗೆ ಧರ್ಮಭಕ್ತಿಗಳ ಕಡೆಗೆ ಒಲವಿದ್ದಂತೆ ತೋರಬಹುದು. ಆದರೆ ಲೋಕವಾಸನೆಯು ಬಲವಾಗಿದ್ದರೆ, ಅವರು

ಬಲುಬೇಗನೆ ತಮ್ಮ ಹಳೆಯ ಪ್ರಾಪಂಚಿಕವ್ಯವಹಾರಕ್ಕೆ ತಿರುಗಿಬಿಡುತ್ತಾರೆ. ಬೆಳ್ಳಿ, ಅಲ್ಯುಮಿನಿಯಂ – ಮುಂತಾದ ಲೋಹಗಳು ಬಲವಾಗಿ ಕಾಯುವದೂ ಬೇಗ, ಮತ್ತೆ ಆರುವದೂ ಬೇಗ !

೨೭೧. ಐಶ್ವರ್ಯವಿದ್ದಾಗ, ಅಥವಾ ದೇವತಾರಾಧನೆಯಿಂದ ಹಣಕಾಸು, ಕೀರ್ತಿ, ಅಧಿಕಾರ – ಮುಂತಾದವು ಬರುತ್ತವೆ ಎಂಬ ಭಾವನೆ ಬಂದಾಗ ಕೆಲವರು ದೇವತಾಪೂಜೆ, ಸಾಧುಸತ್ಕಾರ, ಅತಿಥಿಗಳನ್ನು ಸಂತೋಷಪಡಿಸುವದು, ನವಗ್ರಹಜಪ, ಸೂರ್ಯನಮಸ್ಕಾರ – ಇಂಥವುಗಳಲ್ಲಿ ನಿರತರಾಗಿರುವಂತೆ ಕಾಣುವರು. ಆದರೆ ಅವರಿಗೆ ಸ್ವಲ್ಪ ಸಂಕಷ್ಟವು ಬಂದೊದಗಿದರೆ ಸಾಕು, ಅವರ ಶ್ರದ್ಧೆಯೂ ದಾನಧರ್ಮಗಳೂ ಎಲ್ಲಿಯೋ ಮಾಯವಾಗಿಬಿಡುವವು. ತಾಮ್ರದ ಪಾತ್ರೆಗೆ ಹಾಕಿಸಿದ ಸೀಸದ ಕಲಾಯ !

೨೭೨. ಸಾಧುಸಂತರು ಊರಿಗೆ ಬಂದಾಗ ಅವರಿಂದ ಜನರ ಇಷ್ಟಾರ್ಥಗಳು ನೆರವೇರುವವೆಂಬ ಸುದ್ದಿ ಹರಡುವದುಂಟು. ಆಗ ಎಷ್ಟೋ ಸಾಧಾರಣಜನರುಕೂಡ ಮೈಯೆಲ್ಲ ನಾಮ, ತುಳಸೀಮಾಲೆ – ಮುಂತಾದವನ್ನು ಹಾಕಿಕೊಂಡು ಜಪಮಾಡುವಂತೆ ನಟಿಸುವರು ; ಭಜನೆಯ ಕೂಟಕ್ಕೆ ಸೇರುವರು; ಏನಾದರೊಂದು ಅಧ್ಯಾತ್ಮವಿಚಾರದ ಪ್ರಶ್ನೆಯನ್ನು ಸಾಧುಗಳ ಬಳಿಗೆ ತರುವರು. ಸಂತೆಯಲ್ಲಿ ಗಂಟುಕಳ್ಳರೂ ಓಡಾಡುತ್ತಲೇ ಇರುವರಷ್ಟೆ ? ಅವರೂ ವ್ಯಾಪಾರಕ್ಕೆ ಬಂದವರೇ !

೨೭೩. ಭತ್ತ ಇದ್ದವರಿಗೆ ಭಕ್ತಿ ಹೆಚ್ಚು ; ಸಮಾರಾಧನೆ ಇದ್ದಲ್ಲಿ ಸಮಾಜ ; ಊಟವಾದಲ್ಲಿಗೆ ಓಟ ! ಮಂಗಲಾರತಿ, ಮಂತ್ರಪುಷ್ಪ – ಇವುಗಳಾಗುತ್ತಲೂ ಚರಪು (ಪ್ರಸಾದದ ಕೋಸುಂಬರಿ) ಸಿಕ್ಕುವದಾದರೆ ದೇವಸ್ಥಾನದಲ್ಲಿ ಸ್ಥಳವೇ ಸಿಕ್ಕುವದಿಲ್ಲ !

೨೭೪. ಒಬ್ಬ ಸಾಧುಗಳಲ್ಲಿ ಅನೇಕರು ಉಪದೇಶಕ್ಕೆ ಬರುತ್ತಿದ್ದರು. ದೊಡ್ಡವರನ್ನು ಕಾಣುವದಕ್ಕೆ ಬರಿಯ ಕೈಯಲ್ಲಿ ಬರಬಾರದೆಂಬ ನಿಯಮದ ಪಾಲನೆಗಾಗಿ ಬಾಳೆಯಹಣ್ಣು , ಕಲ್ಲುಸಕ್ಕರೆ, ದ್ರಾಕ್ಷಿ, ಬಾದಾಮಿ, ಹಾಲು – ಮುಂತಾಗಿ ಯಾವದಾದರೊಂದು ವಸ್ತುವನ್ನು ಜನರು ಕಾಣಿಕೆಗಾಗಿ ತರುತ್ತಿದ್ದರು. ಆ ವಸ್ತುಗಳು ಬಹಳಮಟ್ಟಿಗೆ ಕಾಣಿಕೆತಂದವರಿಗೇ ಪ್ರಸಾದವಾಗಿ ಹಿಂತಿರುಗುತ್ತಿದ್ದುವು ; ಹೆಚ್ಚಾಗಿದ್ದರೆ ಹತ್ತಿರವಿರುವ ಜನರಿಗೂ ಸಾಧುಗಳು ಹಂಚಿಬಿಡುತ್ತಿದ್ದರು.

ಜನರ ಸಂದಣಿ ಹೆಚ್ಚಾಗುತ್ತಾ ಬಂತು. ಸಾಧುಗಳು ಒಂದು ದಿನ ಬಂದ ಹಣ್ಣು ಹಂಪಲು, ಕಾಣಿಕೆಯ ದುಡ್ಡಿನ ತಟ್ಟೆ – ಎಲ್ಲವನ್ನೂ ಒಳಕ್ಕೆ ಕಳುಹಿಸಿದರು. ಮಾರನೆಯದಿನದಿಂದ ದರ್ಶನಕ್ಕೂ ಜನವಿಲ್ಲ, ಉಪದೇಶಕ್ಕಂತೂ ಇಲ್ಲವೇ ಇಲ್ಲ!

೨೭೫. ಅಧ್ಯಾತ್ಮಮಾರ್ಗದಲ್ಲಿ ಅಭಿವೃದ್ಧಿಯಾಗುವದಕ್ಕೆ [illegible] ಗ್ರಂಥಗಳು ಸಹಾಯಕವಾಗಿರುತ್ತವೆ. ಅದರಲ್ಲಿಯೂ ಅನುಭವಿಗಳಾದ ಮಹಾತ್ಮರ ಉಪದೇಶಗಳು ಬಹಳ ಪ್ರಯೋಜನಕರವಾಗಿರುತ್ತದೆ. ಆದರೆ ಅಧ್ಯಾತ್ಮಗ್ರಂಥಗಳನ್ನು ಓದುವವರೆಲ್ಲ ಅಧ್ಯಾತ್ಮಸಾಧನವನ್ನು ಮಾಡುತ್ತಿರುವರೆಂದು ಹೇಳಲಾಗುವದಿಲ್ಲ ; ಹೆಚ್ಚು ಅಧ್ಯಾತ್ಮಗ್ರಂಥಗಳನ್ನು ಓದಿದವರು ಹೆಚ್ಚಿನ ಅನುಭವಿಗಳು ಎಂದು ನಂಬುವದಂತೂ ತೀರ ಹೀಗೆಂದು ತಿಳಿದರೆ ನಾರುಮಡಿಯುಟ್ಟವರೆಲ್ಲ ನಾರದರೆಂದಂತೆ ಆದೀತು.

೨೭೬. ಅಧ್ಯಾತ್ಮಗ್ರಂಥಗಳಲ್ಲಿ ಪ್ರಶ್ನೋತ್ತರರೂಪವಾಗಿರುವ ಗ್ರಂಥಗಳು ಸುಲಭವಾಗಿ ಅರ್ಥವಾಗುವವು. ಆದ್ದರಿಂದ ಬಲ್ಲವರು ಪೂರ್ವಪಕ್ಷ ಸಿದ್ಧಾಂತ– ರೂಪದಲ್ಲಿ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ಆದರೆ ವಿಚಾರವಿಲ್ಲದೆ ಓದುವವರಿಗೆ ಪೂರ್ವಪಕ್ಷವೇ ಸಿದ್ಧಾಂತವೆಂಬ ಭ್ರಾಂತಿಯುಂಟಾಗುವ ಸಂಭವವಿದೆ ಅವರಿಗೆ ತರ್ಕವೇ ಮನನವೆಂಬ ಭ್ರಾಂತಿಯು ಆಗುವ ಸಂಭವವಿದೆ.

೨೭೭. ಅಧ್ಯಾತ್ಮಗ್ರಂಥಪಠನದಲ್ಲಿ ಗ್ರಂಥವನ್ನು ಬರೆದವರ ಚರಿತ್ರೆ, ಕಾಲ, ಅವರ ವಿದ್ಯಾಭ್ಯಾಸದ ಮಟ್ಟ – ಮುಂತಾದವುಗಳನ್ನು ವಿಚಾರ ಮಾಡಬಾರದು. ಗ್ರಂಥದಲ್ಲಿರುವ ಉಪದೇಶಗಳು ಎಷ್ಟರಮಟ್ಟಿಗೆ ಅನುಭವಕ್ಕೆ ಸಮ್ಮತವಾಗಿವೆ, ಎಷ್ಟುಮಟ್ಟಿಗೆ ಹೃದಯಕ್ಕೆ ಮೆಚ್ಚಾಗಿವೆ, ಅನುಷ್ಠಾನಕ್ಕೆ ಆದರ್ಶವನ್ನು ಒದಗಿಸುತ್ತವೆ ? – ಎಂಬುದನ್ನು ಮೊದಲು ನೋಡಬೇಕು.

೨೭೮. ಅಧ್ಯಾತ್ಮಗ್ರಂಥವೊಂದನ್ನು ಓದುತ್ತಿರುವಾಗ ನಾನು ಓದುತ್ತಿದೇನೆ ಎಂಬ ಅರಿವು ಹೋಗಿ ಅದರಲ್ಲಿರುವ ತತ್ತ್ವದಲ್ಲಿಯೇ ಓದುವವನ ಮನಸ್ಸು ನಿಂತರೆ, ಅದೇ ಉತ್ತಮವಾದ ಅನುಭವಗ್ರಂಥವೆಂದು ತಿಳಿಯಬೇಕು.

೨೭೯. ಅಧ್ಯಾತ್ಮಗ್ರಂಥಗಳಿಂದ ಶ್ಲೋಕಗಳನ್ನೂ ಸೂಕ್ತಿಗಳನ್ನೂ ತೆಗೆದು ತೆಗೆದು ಆಗಾಗ್ಗೆ ಮತ್ತೊಬ್ಬರಿಗೆ ಒಪ್ಪಿಸುವ ಹವ್ಯಾಸವಿರುವವರಿಗೆ ತತ್ತ್ವಚಿಂತೆಗಿಂತಲೂ ವಾಕ್ಯಚಿಂತೆಯು ಹೆಚ್ಚಾಗಿರುತ್ತದೆ. ಊಟಕ್ಕೆ ಬಡಿಸಿರುವ

ಪದಾರ್ಥಗಳ ಗುಣಗಳನ್ನು ಚರ್ಚೆಮಾಡುತ್ತಿರುವವರಿಗೂ ಊಟಮಾಡುತ್ತಿರುವವರಿಗೂ ಇರುವ ತಾರತಮ್ಯವೇ ವಾಕ್ಯಚಿಂತಕರಿಗೂ ತತ್ತ್ವಚಿಂತಕರಿಗೂ ಇರುತ್ತದೆ.

೨೮೦. ನಿಜವಾದ ಸಾಧಕನ ಹೃದಯವೇ ಸದ್ಗ್ರಂಥ ; ಅದರಲ್ಲಿ ಪರಮಾತ್ಮನು ಯಾವಾಗಲೂ ಉತ್ತಮವಿಚಾರಗಳನ್ನು ಬರೆಯುತ್ತಿರುತ್ತಾನೆ.

೨೮೧. ಕಣ್ಣುಮುಚ್ಚಿಕೊಳ್ಳುವದು, ಮೌನ, ಏಕಾಂತವಾಸ – ಇವು ಮನಸ್ಸು ಸಮಾಧಾನವಾಗುವದಕ್ಕೆ ಸಹಾಯಕವಾಗುವವು. ಆದರೆ ಮನಸ್ಸಿನಲ್ಲಿ ವಾಸನೆಗಳನ್ನು ತುಂಬಿರುವವರು ಕಣ್ಣನ್ನು ಮುಚ್ಚಿಕೊಳ್ಳುವದಕ್ಕಿಂತ ಅವನ್ನು ತೆರೆದು ಸತ್ಪುರುಷರು, ಸದ್ಗ್ರಂಥಗಳು – ಇವುಗಳನ್ನು ನೋಡುತ್ತಿರುವದು ಮೇಲು ; ಮೌನವಾಗಿರುವದಕ್ಕಿಂತ ದೇವರ ನಾಮದ ಜಪವನ್ನೂ ಕೀರ್ತನೆಯನ್ನೂ ಮಾಡುತ್ತಿರುವದು ಮೇಲು ; ಏಕಾಂತವಾಸಕ್ಕಿಂತ ದೀನದುಃಖಿಗಳ ಸೇವೆಯಲ್ಲಿಯೂ ಕೀರ್ತನ, ಪುರಾಣಕಥನ, ಸದ್ವಿಚಾರ – ಇವುಗಳು ನಡೆಯುತ್ತಿರುವ ಜನಸಮೂಹದಲ್ಲಿಯೂ ಇರುವದೇ ಮೇಲು.

೨೮೨. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ – ಇವುಗಳಲ್ಲಿರುವ ಇಂದ್ರಿಯಗಳು ವಿಷಯಸಂಬಂಧವನ್ನು ಮಿತಿಮೀರಿ ಅನುಭವಿಸಿದರೆ ಸೋತು ಸುಮ್ಮನಾಗುವವು. ಆಗ ಕಣ್ಣು ಮುಚ್ಚಿಕೊಳ್ಳುವದು, ಕಿವಿಯು ಯಾವದನ್ನೂ ಕೇಳಲೊಲ್ಲದೆಹೋಗುವದು, ಮೂಗಿಗೆ ವಾಸನೆಯು ಅರಿವಾಗದೆ ಇರುವದು, ನಾಲಗೆಗೆ ರುಚಿಯು ತಿಳಿಯುವದಿಲ್ಲ, ಚರ್ಮಕ್ಕೆ ಯಾವದೊಂದನ್ನೂ ಮುಟ್ಟಿದ ಅರಿವು ಆಗುವದಿಲ್ಲ. ಆದರೆ ಇದೇನೂ ಇಂದ್ರಿಯಗಳನ್ನು ಹಿಂದೆಗೆಯುವ ಮಾರ್ಗವೆನಿಸಲಾರದು. ಶವಕ್ಕೆ ಕಣ್ಣು ಕಿವಿ – ಮುಂತಾದವುಗಳು ಯಾವವೂ ಕೆಲಸಮಾಡುವದಿಲ್ಲ ; ಅಷ್ಟರಿಂದ ಅದೂ ಯೋಗಿಯೆನಿಸೀತೇನು ?

೨೮೩. ಚಕ್ಷುರಾದೀಂದ್ರಿಯಗಳನ್ನು ಹಿಂಜಗ್ಗಿ ಮನಸ್ಸನ್ನು ಆತ್ಮನಕಡೆಗೆ ತಿರುಗಿಸಿ ಅಲ್ಲಿಯೇ ನಿಲ್ಲಿಸುವದೇ ನಿಜವಾದ ಮೌನವು. ಮನಸ್ಸು ಆತ್ಮನ ಮನನದಲ್ಲಿದ್ದರೆ ಮೌನವಾಗುವದು. ಮಾತಿಲ್ಲದ್ದೇ ಮೌನವಾದರೆ ಮೂಕರೂ ಮೂಗಜಂತುಗಳೂ ಮೌನಿಗಳೇಕಲ್ಲ ?

೨೮೪. ಗುಹೆಯಲ್ಲಿಯೋ ಅರಣ್ಯದಲ್ಲಿಯೋ ಬೆಟ್ಟದಮೇಲೋ, ಇರುವದು ಒಂದು ಬಗೆಯ ಏಕಾಂತವಾಸವೇ ಸರಿ. ಆದರೆ ಅಲ್ಲಿ ಮೃಗಗಳೂ ಹಾವುಹಲ್ಲಿಗಳೂ ಹಕ್ಕಿಪಕ್ಷಿಗಳೂ ಇರುತ್ತವೆಯಲ್ಲವೆ ? ಅಷ್ಟರಿಂದ ಅವುಗಳಿಗೆ ಏಕಾಂತವಾಸದ ಫಲವು ದೊರಕೀತೇನು ? ಇಂದ್ರಿಯಗಳು ಕಂಡದ್ದೆಲ್ಲ ಭಗವಂತನ ವಿಭೂತಿಗಳಾದರೆ, ಮನಸ್ಸಿಗೆ ಬರುವ ವಿಚಾರಗಳೆಲ್ಲವೂ ಭಗವಂತನ ವಿಷಯವೇ ಆದರೆ, ಹೃದಯದಲ್ಲಿ ಏಳುವ ವೇದನೆಗಳೆಲ್ಲವೂ ಭಗವಂತನ ಸ್ಮರಣೆಯಿಂದಲೇ ಉಂಟಾದ ಸಾತ್ತ್ವಿಕಭಾವಗಳೇ ಆದರೆ, ಎಲ್ಲಕ್ಕೂ ಮೇಲಾಗಿ ಇವೆಲ್ಲವನ್ನೂ ಸಾಕ್ಷಿಯಾಗಿ ಬೆಳಗುತ್ತಿರುವ ಸಚ್ಚಿದಾನಂದಪರಮಾತ್ಮನೇ ತನ್ನ ಆತ್ಮನೆಂಬ ನಿಷ್ಠೆಯು ಒದಗಿದರೆ ಅದೇ ನಿಜವಾದ ಏಕಾಂತವಾಸವು.

೨೮೫. ಬ್ರಹ್ಮಚರ್ಯೆ ಎಂದರೇನು ? ಬ್ರಹ್ಮವನ್ನು – ಪರಮಾತ್ಮ ವಸ್ತುವನ್ನು – ತಿಳಿಸಿಕೊಡಬಲ್ಲ ಸದ್ಗುರುವಿನ ಬಳಿಯಲ್ಲಿ ಶರೀರವಾಙ್ಮನಸ್ಸುಗಳನ್ನು ನಿಯಮಕ್ಕೆ ಒಳಪಡಿಸಿಕೊಂಡು ಉಪದೇಶಕ್ಕೆ ಕಾದುಕೊಂಡಿರುವದೇ ನಿಜವಾದ ಬ್ರಹ್ಮಚರ್ಯೆ. ವೇದದಲ್ಲಿ ಬ್ರಹ್ಮದ ವಿಚಾರವಿರುವದರಿಂದಲೂ ಅದನ್ನರಿಯುವದಕ್ಕೆ ತಕ್ಕ ಯೋಗ್ಯತೆಯನ್ನು ಕೊಡುವ ಸಾಧನಗಳಿರುವದರಿಂದಲೂ ವೇದಾಧ್ಯಯನಕ್ಕೆ ತಕ್ಕ ನಿಯಮಾಚರಣೆಯನ್ನೂ ಬ್ರಹ್ಮಚರ್ಯೆ ಎಂದು ಗೌಣಾರ್ಥದಲ್ಲಿ ಕರೆಯುತ್ತಾರೆ.

೨೮೬. ಯಾವದಾದರೊಂದು ಕಾರಣದಿಂದ ಮದುವೆಯಾಗದೆ ಇರುವವನು ಬ್ರಹ್ಮಚಾರಿಯಲ್ಲ. ಕೈಯಲ್ಲಿ ಉಳಿ, ಬಾಚಿ ಹಿಡಿದುಕೊಂಡ ಮಾತ್ರದಿಂದ ಬಡಗಿಯಾದಾನೇನು ? ವಿಷಯಗಳಲ್ಲಿ ಮನಸ್ಸನ್ನು ಚಲಿಸಗೊಡದೆ ಬ್ರಹ್ಮನಲ್ಲಿ ಪರಮಾತ್ಮನಲ್ಲಿ ಅಥವಾ ವೇದಶಾಸ್ತ್ರಗಳಲ್ಲಿ – ನಿಯತವಾಗಿ ಮನಸ್ಸನ್ನು ಇಟ್ಟುಕೊಂಡಿರುವವನೇ ಬ್ರಹ್ಮಚಾರಿ.

೨೮೭. ವಿಷಯಗಳನ್ನು ನೋಡುತ್ತಿರುವದು, ಅವುಗಳನ್ನು ಅನುಭವಿಸುತ್ತಿರುವದು, ಅವುಗಳಲ್ಲಿಯೇ ಮನಸ್ಸನ್ನು ಆಡಿಸುತ್ತಿರುವದು, ಅವುಗಳ ವಿಚಾರವನ್ನೇ ಕುರಿತು ಓದುವದು ಅಥವಾ ಮಾತನಾಡುವದು – ಇವೆಲ್ಲ ಬ್ರಹ್ಮಚರ್ಯಕ್ಕೆ ಅಡ್ಡಿಗಳು. ಈಗಿನ ಕಾಲಕ್ಕೆ ಸಿನೆಮಾ, ನಾಟಕ, ಸ್ವೇಚ್ಛಾಹಾರವಿಹಾರಗಳು, ಶರೀರದ ಅಲಂಕಾರ, ವಿನೋದಗಳು – ಇವುಗಳ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿ ಕಾಣುತ್ತಿರುವವು. ಅಂಥವರನ್ನು ಬ್ರಹ್ಮಚಾರಿಗಳೆಂದ ಕರೆಯುವದಕ್ಕಾಗಲಾರದು.

೨೮೮. ಮನಸ್ಸಿನಲ್ಲಿ ದುರಭಿಮಾನ, ದಂಭ, ಗುರುಹಿರಿಯರಲ್ಲಿ ಅನಾದರ, ಕಾಮಕ್ರೋಧಾದಿಗಳಿಗೆ ಎಡೆಗೊಡುವದು – ಇವೇ ಮುಂತಾದ ದೋಷಗಳಿದ್ದರೆ ಬ್ರಹ್ಮಚರ್ಯೆಗೆ ಅವಕಾಶವಿರುವದಿಲ್ಲ. ಅವು ಲೌಕಿಕ ವಿದ್ಯೆಯನ್ನು ಕಲಿಯುವದಕ್ಕೇ ಅಡ್ಡಿಯಾಗಿರುತ್ತವೆ ; ಇನ್ನು ಬ್ರಹ್ಮವಿದ್ಯೆಗೆ ಅಡ್ಡಿ ಎಂಬುದನ್ನು ಹೇಳಬೇಕೆ? ವಿದ್ಯೆ ಎಂದರೇ ಮನಸ್ಸಿನಲ್ಲಿ ವಿನಯವನ್ನುಂಟು ಮಾಡಿಕೊಳ್ಳುವದಲ್ಲವೆ ?

೨೮೯. ಬ್ರಹ್ಮಚಾರಿಗಳಿಗೆ ಗುರುಭಕ್ತಿಯು ಅತ್ಯವಶ್ಯ. ಏಕೆಂದರೆ ಬ್ರಹ್ಮಸ್ವರೂಪವನ್ನು ಅನುಭವವುಳ್ಳ ಗುರುಗಳ ಬೋಧೆಯಿಂದ ಮಾತ್ರವೇ ತಿಳಿದುಕೊಳ್ಳುವದಕ್ಕಾಗುವದೇ ಹೊರತು ತಾನೇ ವಿಚಾರಮಾಡಿದರೆ ಅಥವಾ ಯಾವದಾದರೂ ಪುಸ್ತಕಗಳನ್ನು ಓದಿದರೆ ಅಷ್ಟುಮಾತ್ರದಿಂದ ತಿಳಿಯಲಾಗದು. ಅದಕ್ಕೊಂದು ಅನುಭವದ ವಿಶಿಷ್ಟಮಾರ್ಗವಿದೆ. ಅದು ಬ್ರಹ್ಮಚರ್ಯವನ್ನು ಕಾಪಾಡಿಕೊಂಡವರಿಗೆ ದಕ್ಕುತ್ತದೆ. ಬ್ರಹ್ಮವೆಂದರೆ ಆತ್ಮನು. ಪ್ರಪಂಚವನ್ನೆಲ್ಲ ಜಯಿಸಿ ತನ್ನದಾಗಿ ಮಾಡಿಕೊಂಡರೂ ಆತ್ಮಲಾಭವಿಲ್ಲದಿದ್ದರೆ ಯಾವ ಪ್ರಯೋಜನ ವಾದೀತು ?

೨೯೦. ಬ್ರಹ್ಮಚರ್ಯ, ಗಾರ್ಹಸ್ಥ್ಯ , ವಾನಪ್ರಸ್ಥ , ಸಂನ್ಯಾಸ ಅಥವಾ ಪಾರಿವ್ರಾಜ್ಯ ಎಂಬ ನಾಲ್ಕು ಆಶ್ರಮಗಳನ್ನು ಬ್ರಾಹ್ಮಣನಿಗೆ ಶಾಸ್ತ್ರದಲ್ಲಿ ವಿಧಿಸಿದೆ. ಇವುಗಳಲ್ಲಿ ಮೊದಲನೆಯ ಮೂರನ್ನು ಒಂದೊಂದಾಗಿ ಕ್ರಮದಿಂದ ಅನುಸರಿಸುವವನು ಇಹದಲ್ಲಿ ಸುಖವನ್ನೂ ಪರದಲ್ಲಿ ಗತಿಯನ್ನೂ ಪಡೆಯು ವನು. ಪರಮೇಶ್ವರಾರ್ಚನಬುದ್ಧಿಯಿಂದ ಈ ಆಶ್ರಮಕರ್ಮಗಳನ್ನು ಮಾಡು ವವನು ಚಿತ್ತಶುದ್ಧಿಯನ್ನು ಹೊಂದಿ ಸರ್ವಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಿಂದ ಪರಮಪುರುಷಾರ್ಥವನ್ನು ಪಡೆದುಕೊಳ್ಳುವನು ಎಂಬುದು ನಮ್ಮ ಹಿರಿಯರ ಉಪದೇಶ.

೨೯೧. ಬ್ರಹ್ಮಚರ್ಯಕ್ಕಾಗಿ ದ್ವಿಜರನ್ನು ಸಿದ್ಧಗೊಳಿಸುವ ಸಂಸ್ಕಾರಕ್ಕೆ ಉಪನಯನವೆಂದು ಹೆಸರು. ಬ್ರಹ್ಮದ – ವೇದಾಧ್ಯಯನದ ಅಥವಾ ಪರಮಾತ್ಮಜ್ಞಾನದ – ಬಳಿಗೆ ಕರೆದೊಯ್ಯುವದು ಎಂಬ ಕಾರಣದಿಂದ ಇದನ್ನು (ಉಪ– ಬಳಿಗೆ, ನಯನ – ಒಯ್ಯುವದು) ಉಪನಯನವೆಂದು ಕರೆದರು.

೨೯೨. ಬ್ರಹ್ಮಚರ್ಯದ ಗುರುತಾಗಿ ಯಜ್ಞೋಪವೀತವನ್ನು ಧರಿಸುವದು, ಸಂಧ್ಯೋಪಾಸನೆಯನ್ನು ಮಾಡುವದು, ವೇದವನ್ನು ಅಧ್ಯಯನ ಮಾಡಿ ಅರ್ಥವಿಚಾರವನ್ನು ಮಾಡುವದು – ಇವು ಬ್ರಹ್ಮಚಾರಿಯ ಮುಖ್ಯ ಧರ್ಮಗಳೆಂದು ಹಿಂದಿನವರು ಗಣಿಸಿದ್ದರು.

೨೯೩. ಈಗ ಹುಟ್ಟಿದ ಮಕ್ಕಳಿಗೆ ಜಾತಕರ್ಮ, ನಾಮಕರಣ – ಎಂಬ ಸಂಸ್ಕಾರಗಳನ್ನು ಮಾಡುವದು ಬಲುಮಟ್ಟಿಗೆ ಕಡಿಮೆ. ಸ್ವೇಚ್ಛಾಚಾರ ವನ್ನು ಬಿಟ್ಟು ನಿಯಮದಿಂದ ಇರುತ್ತೇನೆಂಬ ವಾಗ್ದಾನವನ್ನು ಮಾಡಿ ಆಚಾರ್ಯರ ಬಳಿ ಇದ್ದುಕೊಂಡಿರುವದಕ್ಕೆ ಮೊದಲಾಗಿರುವ ಉಪನಯನದ ಕಾಲಕ್ಕೆ ಆಡಂಬರದ ಊಟ, ಉಡಿಗೆ, ಆಟಪಾಟಗಳು, ಅಪವಿತ್ರವಸ್ತುಗಳ ಸೇವನೆ, ಬಡಬಗ್ಗರಿಗೂ, ಯೋಗ್ಯರಾದ ಬ್ರಾಹ್ಮಣರಿಗೂ ದಾನವಾಗಿ ಕೊಡಬೇಕಾದ ಹಣವು ವ್ಯರ್ಥವಾಗಿ 'ಪಾರ್ಟಿ'ಗಳಿಗೆ ವಿನಿಯುಕ್ತವಾಗುವದು. ಇದು 'ಉಪನಯನ'ವಲ್ಲ, 'ಅಪನಯನ'. ಮಗನನ್ನು ಪರಮಾತ್ಮನಿಂದ ದೂರವಾಗಿರುವಂತೆ ಪ್ರೋತ್ಸಾಹಿಸುವ ಕರ್ಮವಾಯಿತು !

೨೯೪. ಸಂಧ್ಯಾವಂದನೆಯ ಮಂತ್ರಗಳ ಅರ್ಥ, ಅವರವರ ವೇದಶಾಖೆಯಲ್ಲಿರುವ ಅತ್ಯಂತ ಮುಖ್ಯವಾದ ವೇದಮಂತ್ರಗಳ ಅರ್ಥ – ಇವನ್ನು ಬಲ್ಲವರಿಂದ ಬರೆಯಿಸಿದ ಸಣ್ಣ ಹೊತ್ತಿಗೆಗಳನ್ನು ಬಡವರಾದ ಬ್ರಹ್ಮಚಾರಿಗಳಿಗೆ ದಾನಮಾಡಿಸಬೇಕು. ಮುಖ್ಯಮಂತ್ರಗಳನ್ನು ಅರ್ಥಸಹಿತವಾಗಿ ಹುಡುಗರಿಗೆ ಕಲಿಯಿಸಿ ಗಾಯತ್ರೀಮಂತ್ರದ ಜಪವನ್ನು ನಿತ್ಯವೂ ತಪ್ಪದೆ ಮಾಡುವಂತೆ ತಿಳಿಸಬೇಕು, ಮಕ್ಕಳ ಲೌಕಿಕವಿದ್ಯೆಗೆ – ಹಣವನ್ನು ಗಳಿಸುವ ವಿದ್ಯೆಗೆ – ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ವೇದಶಾಸ್ತ್ರಗಳನ್ನು ಬಿಡಿಸುವವರು 'ದ್ವಿಜರೆ' ?

೨೯೫. ಬ್ರಹ್ಮಚಾರಿಗಳು ವಿದ್ಯಾರ್ಥಿಗಳಾಗಿರಬೇಕು, ವಿಲಾಸಾರ್ಥಿ ಗಳಾಗಿರಬಾರದು. ಆತ್ಮವಿದ್ಯಾರ್ಥಿಗಳಾಗಿರುವದು ಅವರ ಆದ್ಯಕರ್ತವ್ಯ, ಅಶನ ವಿದ್ಯಾರ್ಥಿಗಳಾಗಿರುವದಂತೂ ಅನಿವಾರ್ಯವಷ್ಟೆ ?

೨೯೬. ಶ್ರುತಿ, ಸ್ಮೃತಿ, ಪುರಾಣ – ಎಂಬಿವು ಅಧ್ಯಾತ್ಮವಿದ್ಯೆಗೆ ಮೂಲವು ; ಸಾಹಿತ್ಯ, ವಿಜ್ಞಾನಶಾಸ್ತ್ರ, ಲೋಕಪರಿಚಯ, ಕಲೆಗಳು, ಜೀವನಕ್ಕೆ ಬೇಕಾದ ಕಸುಬು – ಇವು ಲೌಕಿಕವಿದ್ಯೆಗೆ ಮೂಲವು ; ಇವೆರಡರಲ್ಲಿ

ಲೌಕಿಕವಿದ್ಯೆಯನ್ನು ಅಧ್ಯಾತ್ಮವಿದ್ಯೆಗೆ ವಿರುದ್ಧವಾಗದಂತೆ ಅಭ್ಯಾಸಮಾಡುವವನು ಇಹಪರಗಳಲ್ಲಿ ಸುಖವನ್ನು ಹೊಂದುವನು. ಶ್ರುತಿಯು ಕಿವಿಗೇ ಬೀಳದೆ, ಸ್ಮೃತಿಯು ನೆನಪಿನಲ್ಲಿರದೆ, ಪುರಾಣವು ಹಳೆಯ ಕಥೆಯೆಂದಾಗುವ ವಿದ್ಯೆಯು ಮನುಷ್ಯನನ್ನು ಕುಪಥಕ್ಕೆ ಎಳೆಯುವದು.

೨೯೭. ವಿದ್ಯಾರ್ಥಿದಶೆಯಲ್ಲಿ ತ್ರಿಕರಣಸಂಯಮವು ಅತ್ಯವಶ್ಯ, ಕರ್ಮೋಪಾಸನೆಗಳ ಸೇವನೆಯು ಶ್ರೇಯಸ್ಕರ. ಮುಂದೆ ಗೃಹಸ್ಥನಾದಮೇಲೆ ದೇಹೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವದಕ್ಕೆ ಈ ಸಂಸ್ಕಾರವನ್ನು ವಿದ್ಯಾರ್ಥಿಗಳಿಗೆ ಅವಶ್ಯವಾಗಿ ಮಾಡಿಸಬೇಕು, ಇಲ್ಲದಿದ್ದರೆ ಅವರು ಸ್ತಬ್ಧರೂ ದೃಪ್ತರೂ ದುರಹಂಕಾರಿಗಳೂ ಆಗುವರು ; ತಮ್ಮ ಅಭ್ಯುದಯವನ್ನಾಗಲಿ ಲೋಕಕಲ್ಯಾಣವನ್ನಾಗಲಿ ಸಾಧಿಸುವದು ಅವರಿಂದ ಆಗಲಾರದು.

೨೯೮. ಅಪವಿತ್ರವಾದ ಆಹಾರಗಳ ಸೇವನೆ, ಜೂಜು, ವ್ಯರ್ಥವಾದ ಹರಟೆ, ಕಾಲನಿಯಮವಿಲ್ಲದೆ ಸಂಗೀತನೃತ್ಯನಾಟಕಾದಿಗಳನ್ನು ನೋಡುವದಕ್ಕೆ ಹೋಗುವದು ಅಥವಾ ಭಾಗವನ್ನು ವಹಿಸುವದು– ಇವುಗಳಲ್ಲಿ ವಿದ್ಯಾರ್ಥಿಗಳನ್ನು ಬಿಡುವವರು ಅವರಿಗೆ ಅಶ್ರೇಯಸ್ಸನ್ನು ಕೋರಿದವರಾಗುತ್ತಾರೆ.

೨೯೯. ತರುಣವಿದ್ಯಾರ್ಥಿಗಳಿಗೆ ಪುರಾತನಕಾಲದ ಬ್ರಾಹ್ಮಣಶ್ರೇಷ್ಠರ, ಕ್ಷತ್ರಿಯವೀರರ, ವೈಶ್ಯವರಿಷ್ಠರ ಜೀವನಚರಿತ್ರೆಗಳ ಆದರ್ಶವು ಮನಸ್ಸಿನಲ್ಲಿ ಬಿಂಬಿಸಿರುವದು ಒಳ್ಳೆಯದು. ದೇಶದ ಅಭಿಮಾನವೂ ಆತ್ಮಸಂಯಮದ ಮಹಿಮೆಯೂ ಸತ್ಕೀರ್ತಿಯಲ್ಲಿ ಆಶೆಯೂ ಅವರ ಮನಸ್ಸಿನಲ್ಲಿ ಬೇರೂರಿದ್ದರೆ ಅವರು ಎಂದಿಗೂ ಪರದೇಶದವರ ಪ್ರಭಾವಗಳಿಗೆ ಒಳಗಾಗುವದಿಲ್ಲ.

೩೦೦. ವಿದ್ಯಾರ್ಥಿಗಳು ತಮ್ಮತಮ್ಮ ಅವಶ್ಯಕತೆಯನ್ನು ತಾವುತಾವೇ ಪೂರೈಸಿಕೊಳ್ಳುವದನ್ನು ಕಲಿಯುವದು ಶ್ರೇಯಸ್ಕರ. ಯಾವ ಕೆಲಸವೂ ತಮ್ಮ ಅಂತಸ್ತಿಗೆ ಅಪಮಾನಕರವೆಂದು ಅವರು ಭಾವಿಸಬಾರದು. ಓದುಬರಹದ ಸಾಮಗ್ರಿಗಳು, ತಾವಿರುವ ಸ್ಥಳ, ಗುರುಹಿರಿಯರು, ದೇವಾಲಯಾದಿಸ್ಥಾನಗಳು – ಇವುಗಳಲ್ಲಿ ಅವರಿಗೆ ಪೂಜ್ಯಬುದ್ಧಿಯುಂಟಾಗಬೇಕು.

೩೦೧. ಗೃಹಸ್ಥರೆಂದರೆ ಸುಮ್ಮನೆ ಮನೆಯಲ್ಲಿದ್ದುಕೊಂಡಿರುವವರಲ್ಲ. ಹೆಂಡತಿ, ಮಕ್ಕಳು – ಮುಂತಾದ ಕುಟುಂಬಭರಣವನ್ನು ಹೇಗಾದರೂ ಮಾಡಿಕೊಂಡಿರುವವರೂ ನಿಜವಾದ ಅರ್ಥದಲ್ಲಿ ಗೃಹಸ್ಥರಲ್ಲ. ಇಹಪರಗಳೆ-ರಡಕ್ಕೂ ಧರ್ಮವನ್ನೇ ಸಾಧನವಾಗಿ ಮಾಡಿಕೊಂಡು ಕುಟುಂಬಕ್ಕೆಲ್ಲ ಅಭ್ಯುದಯ ನಿಃಶ್ರೇಯಸಗಳು ಒದಗುವಂತೆ ಮಾಡುವವರೇ ನಿಜವಾದ ಅರ್ಥದಲ್ಲಿ ಗೃಹಸ್ಥರು.

೩೦೨. ಗೃಹಸ್ಥರಾದವರು ಎಷ್ಟು ಎಚ್ಚರಿಕೆಯಿಂದಿದ್ದರೂ ಕೆಲವು ದೋಷಗಳು ಅನಿವಾರ್ಯವಾಗಿ ಗಂಟುಬೀಳುವವು. ಆದಕ್ಕಾಗಿ ಅವರು ಪಂಚ ಮಹಾಯಜ್ಞಗಳನ್ನು ತಪ್ಪದೆ ಮಾಡಬೇಕು. ಶಾಸ್ತ್ರವನ್ನು ಅಧ್ಯಯನ ಮಾಡುವದು, ಅತಿಥಿಸತ್ಕಾರ, ಸಕಲಪ್ರಾಣಿಗಳನ್ನೂ ಪ್ರೇಮದಿಂದ ಕಾಣುವದು, ಪಿತೃಗಳನ್ನೂ ದೇವತೆಗಳನ್ನೂ ಆರಾಧಿಸುವದು – ಇವುಗಳನ್ನು ಮಾಡದೆ ಎಂದಿಗೂ ಇರಬಾರದು.

೩೦೩. ಗೃಹಸ್ಥರು ಬ್ರಹ್ಮಚಾರಿಗಳಷ್ಟು ಕಟ್ಟುನಿಟ್ಟಾಗಿ ಬ್ರಹ್ಮಚರ್ಯೆಯಿಂದ ಇರುವದು ಆಗಲಾರದು. ಆದರೆ ಅವರು ತಾವು ಅನುಭವಿಸಬೇಕಾದ ಭೋಗಗಳೆಲ್ಲವನ್ನೂ ಪರಮೇಶ್ವರನ ಪ್ರಸಾದವೆಂದು ಭಾವಿಸಬೇಕು. ತಮ್ಮ ಜನ್ಮವು ಬರಿಯ ಭೋಗಕ್ಕಾಗಿ ಹುಟ್ಟಿದೆ– ಎಂದು ಎಂದಿಗೂ ಭಾವಿಸಬಾರದು.

೩೦೪. ಜಪ, ಉಪವಾಸ, ದೇವತಾರ್ಚನ – ಮುಂತಾದ ಕಾರ್ಯಗಳಲ್ಲಿ ಗೃಹಸ್ಥರು ಕೂಡಿದಮಟ್ಟಿಗೂ ತೊಡಗಿರಬೇಕು. ಪರಮೇಶ್ವರನ ವಿಸ್ಮರಣೆಯು ಎಂದಿಗೂ ಸುಖಕರವಾಗಲಾರದು.

೩೦೫. ಮಿತಿಮೀರಿದ ವಿಷಯಭೋಗದಿಂದ ರೋಗಕ್ಕೆ ತುತ್ತಾಗುವದು, ಯಾವಾಗಲೂ ದೇಶವಿದೇಶಗಳಿಗೆ ಹೋಗುವದರಲ್ಲಿಯೇ ಕಾಲವನ್ನು ಕಳೆಯುತ್ತಿರುವದು, ಪರಾನ್ನಭೋಜನದಿಂದಲೇ ಹೊಟ್ಟೆಯನ್ನು ಹೊರೆಯುವದು, ಕುಟುಂಬಭರಣಕ್ಕೆಂದು ಯಾವದಾದರೊಂದು ಉದ್ಯೋಗವನ್ನು ಕೈಗೊಳ್ಳದಿರುವದು – ಇವುಗಳು ಗೃಹಸ್ಥರ ಮಹಾಪರಾಧಗಳು. ಅಂಥವರಿಗೆ ಇಹದಲ್ಲಿ ಸುಖವು ದೊರೆಯದು, ಪರದಲ್ಲಿ ಗತಿಯ ಆಶೆಯೇ ಇಲ್ಲವಾಗುವದು.

೩೦೬. ಯಾವ ಗೃಹಸ್ಥನು ಧರ್ಮದಿಂದ ಧನವನ್ನು ಸಂಪಾದಿಸುವದಕ್ಕೆ , ಬಿಡದೆ ಪ್ರಯತ್ನವನ್ನು ಮಾಡುತ್ತಿರುವನೋ, ಯಾವ ಗೃಹಸ್ಥನು ತಾನು ಸಂಪಾದಿಸಿದ ಹಣದ ಒಂದು ಗೊತ್ತಾದ ಅಂಶವನ್ನು ದಾನಧರ್ಮಪರೋಪಕಾರಗಳಿಗೆ ಮೀಸಲಾಗಿಟ್ಟಿರುವನೋ, ಯಾವ ಗೃಹಸ್ಥನು ಭಗವತ್ಕಥಾಶ್ರವಣ, ಭಗವಂತನ ನಾಮದ ಸ್ಮರಣ, ಭಗವದ್ಭಕ್ತರ ಸಂಗ, ಭಾಗವತಜನರ ಸೇವೆ, ತತ್ತ್ವವಿಚಾರ – ಇವುಗಳಿಗೆ ಕಾಲವನ್ನು ಉಳಿಸಿಕೊಳ್ಳುವ ಸತತಯತ್ನದಲ್ಲಿರುವನೋ ಅವನೇ ಪರಮೇಶ್ವರನ ಅನುಗ್ರಹಕ್ಕೆ ಪಾತ್ರನಾಗುವನು.

೩೦೭. ಮನೆಯ 'ಯಜಮಾನನು' ಎಂದರೆ ಎಲ್ಲರನ್ನೂ ಆಳುವವನು ಎಂಬರ್ಥವನ್ನು ಅನೇಕರು ಗೃಹಸ್ಥರು ಮಾಡಿಕೊಂಡಿರುವಂತೆ ಕಾಣುತ್ತಿದೆ. ನಿಜವಾಗಿ ಯಜಮಾನನೆಂದರೆ ದೇವರಪೂಜೆಯನ್ನು ಮಾಡುವವನು. ಕುಟುಂಬದ ಪರವಾಗಿ ಮನೆಯಲ್ಲಿ ದೇವತಾರ್ಚನೆಯನ್ನು ಮಾಡುವದೂ ಅದಕ್ಕೆ ಉಪಕರಣವಾದ ಕೆಲಸವನ್ನು ಹೆಂಡತಿಮಕ್ಕಳು ಮಾಡಿಕೊಡುವಂತೆ ಪ್ರೋತ್ಸಾಹಿಸುವದೂ ಯಜಮಾನನ ಆದ್ಯಕರ್ತವ್ಯವಾಗಿದೆ.

೩೦೮. ಮನೆಯವರು ಎದ್ದು ಬೆಳಗ್ಗೆ ಮುಂಚಿತವಾಗಿ ಕಾಫಿ, ಟೀ (ಚಹ) ಮುಂತಾದ ಯಾವದಾದರೊಂದನ್ನು ಪಾನಮಾಡುವದೂ ಲಘ್ವಾಹಾರವನ್ನು ಸ್ವೀಕರಿಸುವದೂ ಈಗ್ಗೆ ಅನೇಕರಲ್ಲಿ ವಾಡಿಕೆಯಾಗಿಬಿಟ್ಟಿದೆ. ಈ ಹವ್ಯಾಸಕ್ಕೆ ಬಿದ್ದ ಮೇಲೆ ಇದನ್ನು ತಪ್ಪಿಸಿಕೊಳ್ಳುವದು ಕಡುಕಷ್ಟವಾಗುತ್ತದೆ. ಈ ಗೀಳನ್ನು ತಪ್ಪಿಸಿಕೊಳ್ಳಲಾರದವರು ಸ್ನಾನಮಾಡಿ ಭಗವಂತನ ಅರ್ಚನೆಯನ್ನು ಮಾಡಿದ ಹೊರತು ಯಾವ ಆಹಾರಪಾನವನ್ನೂ ತೆಗೆದುಕೊಳ್ಳುವದಿಲ್ಲವೆಂಬ ಪ್ರತಿಜ್ಞೆಯನ್ನು ಮೊದಲು ಮಾಡಿಕೊಳ್ಳಬೇಕು. ಮುಂಚಿತವಾಗಿ ಏಳುವದು, ಭಗವಂತನ ಪ್ರಾರ್ಥನೆ, ಪಾನಕ್ಕಾಗಿ ಬರುವ ಹಾಲನ್ನು ಕಾಯಿಸಿ ಪರಮೇಶ್ವರನಿಗೆ ನೈವೇದ್ಯ ಮಾಡುವದು, ಲಘ್ವಾಹಾರವನ್ನು ಕೂಡ ಪರಮೇಶ್ವರನ ಪ್ರಸಾದವೆಂದು ಭಾವಿಸುವದು – ಇಷ್ಟು ಪದ್ಧತಿಯನ್ನಾದರೂ ಮೊದಲು ಆಚರಣೆಗೆ ತಂದುಕೊಳ್ಳಬೇಕು.

೩೦೯. ಸರಕಾರಿಯ ಉದ್ಯೋಗ, ಕಂಪನಿಗಳಲ್ಲಿ ಉದ್ಯೋಗ – ಹೀಗೆ ಹೊರಗೇ ಉದ್ಯೋಗಕ್ಕಾಗಿ ಹೋಗುವವರು ಆದಷ್ಟು ಬೇಗ ಸಂಜೆ ಮನೆಗೆ ಬಂದು ಮನೆಯವರೆಲ್ಲರನ್ನೂ ಸೇರಿಸಿಕೊಂಡು ಭಗವಂತನ ಪ್ರಾರ್ಥನೆ

ಮಾಡುವ ಪದ್ಧತಿಯನ್ನಿಟ್ಟುಕೊಳ್ಳುವದು ಒಳ್ಳೆಯದು. ಅನಿವಾರ್ಯಸಂದರ್ಭಗಳಲ್ಲಿ ಹೊರತು ಮನೆಯಿಂದ ಹೊರಗಿರುವಾಗ ಆಹಾರಪಾನಗಳನ್ನು ಸ್ವೀಕರಿಸದೆ ಇರುವ ನಿಯಮವನ್ನಿಟ್ಟುಕೊಂಡರೆ ದೇಹಕ್ಕೆ ಅನಾರೋಗ್ಯವೂ ವೃಥಾಧನವ್ಯಯವೂ ತಪ್ಪುವವು. ಮನೆಯಲ್ಲಿ ಮಾಡಿದ ಆಹಾರವು ದೇವರಪ್ರಸಾದವಾಗಿ ಬರುವ ಪದ್ಧತಿಯು ಏರ್ಪಡುವದು. ಕುಟುಂಬದವರ ಮುಖದಲ್ಲಿ ದೈವಕಳೆಯು ಎದ್ದುಕೊಳ್ಳುವದು.

೩೧೦. ಗೃಹಸ್ಥನಾದವನು ಯಾವದಾದರೊಂದು ಸದ್ಗ್ರಂಥದಿಂದ ಒಂದು ಭಾಗವನ್ನು ಓದಿ ಮನೆಯವರಿಗೆ ಅರ್ಥವನ್ನು ತಿಳಿಯಿಸುವ ಅಭ್ಯಾಸವನ್ನು ಮಾಡಬೇಕು. ಇದರಿಂದ ಮನೆಯವರ ಮನಸ್ಸಿನಲ್ಲಿ ಯಾವಾಗಲೂ ಭಗವಂತನ ಸ್ಮರಣೆಯ ಬಲದಿಂದ ಆತನ ಸಾನ್ನಿಧ್ಯದ ನೆನಪು ಹೆಚ್ಚುತ್ತದೆ. ಅಸದ್ವಿಚಾರಗಳಿಗೆ ಅವಕಾಶವಿಲ್ಲದಂತೆ ಆಗುವದು. ಸಾಯಂಕಾಲ ಮಲಗುವಾಗ ಮನಸ್ಸು ನಿರ್ಮಲವಾಗಿರುವದರಿಂದ ಸುಖನಿದ್ರೆಯೂ ಲಭಿಸುವದು.

೩೧೧. ನಿಜವಾಗಿ ಗೃಹಸ್ಥನೆನಿಸಿಕೊಳ್ಳಬೇಕೆನ್ನುವವನು ತನ್ನ ಮನೆಯನ್ನು ಬಿಟ್ಟು ಬಹುಕಾಲ ಬೇರೆಯ ಕಡೆಯಲ್ಲಿಯೇ ಕಾಲಹರಣಮಾಡಬಾರದು. ಆದರೆ ಯತ್ನವಿಲ್ಲದೆ ಹೊರಗೇ ಬಹುಕಾಲ ಓಡಾಡಬೇಕಾಗಿಬಂದಾಗ ನಡುನಡುವೆ ಮನೆಯವರಿಗೆ ತನ್ನ ಪರಮಾರ್ಥಜೀವನದ ವಿವರವನ್ನು ತಿಳಿಸಬೇಕು ; ಅವರಿಗೆ ಪರಮೇಶ್ವರನ ಸ್ಮರಣೆಯಾಗುವಂಥ ಯಾವದಾದರೊಂದು ಸ್ಮಾರಕವಸ್ತುವನ್ನು – ಧರ್ಮಗ್ರಂಥ, ಪೂಜಾಸಾಮಗ್ರಿ, ದೇವರ ಚಿತ್ರ ಇಂಥವುಗಳಲ್ಲೊಂದನ್ನು – ಆಗಾಗ್ಗೆ ಕಳುಹಿಸುತ್ತಿರಬೇಕು. ತಾನೂ ಆಗಾಗ್ಗೆ ಊರಿಗೆ ಬಂದು ಸೇರುತ್ತಿರಬೇಕು ; ಮನೆಯವರೂ ತಾನೂ ಒಬ್ಬರೊಬ್ಬರ ಸುಖದುಃಖಗಳಲ್ಲಿ ಭಾಗಿಗಳಾಗಬೇಕು ; ಇಲ್ಲದಿದ್ದರೆ ಮನೆಯವರನ್ನು ತನ್ನೊಡನೆ ಕರೆದುಕೊಂಡು ಹೋಗಬೇಕು. ಹೀಗಾದರೆ ಮಾತ್ರ ಧರ್ಮಸಂಬಂಧದಿಂದ ಅದು ಒಂದು ಕುಟುಂಬವಾಗುವದು ; ಇಲ್ಲದಿದ್ದರೆ ಅದೊಂದು ಪಾಲುದಾರಿಕೆಯ 'ಕಂಪೆನಿ' ಯಾಗುವದು. ಅಷ್ಟೆ.

೩೧೨. ಗೃಹಸ್ಥನಿಗೆ ಅತಿಥಿಸತ್ಕಾರವನ್ನು ಮಾಡುವದೊಂದು ಕರ್ತವ್ಯವು. ದಾರಿಗರಾಗಿ ಬರುವ ಯಾತ್ರಿಕರು, ಸಾಧುಗಳು, ಸಂನ್ಯಾಸಿಗಳು – ಇಂಥ ಸತ್ಪಾತ್ರರನ್ನು ಕಂಡು ಆದರದಿಂದ ಬರಮಾಡಿಕೊಂಡು ಅವರ

ಸೇವೆಯನ್ನು ಕುಟುಂಬದವರೆಲ್ಲರೂ ಮಾಡಿ ಅವರ ಉಪದೇಶವನ್ನು ಶ್ರವಣಮಾಡಬೇಕು. ಇದರಿಂದ ಪುಣ್ಯವೂ ಪುರುಷಾರ್ಥವೂ ಉಂಟು. ಆದರೆ ಅತಿಥಿಗಳೆಂಬ ನೆಪದಿಂದ ಮಂತ್ರಗಾರರು, ಜೂಜಾಟದವರು, ಕಂಪೆನಿಗಳ ಏಜಂಟರು, ರಾಜಕೀಯ ಚಟುವಟಿಕೆಗಳಲ್ಲಿ ನಿರತರು – ಇಂಥವರ ಪ್ರಭಾವಕ್ಕೆ ಎಂದಿಗೂ ಬೀಳದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು.

೩೧೩. ಗೃಹಸ್ಥನ ಆದ್ಯಕರ್ತವ್ಯವು ಕುಟುಂಬದ ಪೋಷಣೆಯು. ಕುಟುಂಬದ ಯೋಗಕ್ಷೇಮವನ್ನು ನೋಡಿಕೊಳ್ಳದಿರುವದು ಒಂದು ಮಹಾಪರಾಧವೇ ಸರಿ. ಆದರೆ ತನ್ನ, ಮನೆಯವರ, ಮತ್ತು ಮಕ್ಕಳುಮರಿಗಳ ಅನ್ನಾಹಾರಾದಿಗಳ ಮತ್ತು ಇಹಲೋಕವ್ಯಾಪಾರದ ಚಿಂತೆಯಷ್ಟೇ ಕುಟುಂಬಪೋಷಣೆಯಲ್ಲ. ಅದಕ್ಕಾಗಿ ಪಾಪಾಚರಣೆಯನ್ನು ಮಾಡುವವನು ಬಡ್ಡಿಯ ಆಸೆಗಾಗಿ ಅಸಲನ್ನು ಕಳೆದುಕೊಂಡವನಾಗುವನು.

೩೧೪. ತನ್ನ ಪರಮಪುರುಷಾರ್ಥವಾದ ಮೋಕ್ಷಕ್ಕೆ ತಾನೊಬ್ಬನೇ ಹೊಣೆ, ಮೋಕ್ಷೇಚ್ಛೆಯುಂಟಾಗುವದೇ ಗೃಹಸ್ಥಧರ್ಮಕ್ಕೆ ಕೊನೆಯ ಮಜಲು ಎಂಬುದನ್ನು ಎಂದಿಗೂ ಮರೆಯಬಾರದು.

೩೧೫. ಹಿಂದಿನ ಕಾಲದಲ್ಲಿ ವಯಸ್ಸಾದವರು ತಮ್ಮ ಮಕ್ಕಳಿಗೆ ಮನೆಯ ವ್ಯವಸ್ಥೆಯ ಹೊಣೆಗಾರಿಕೆಯನ್ನೊಪ್ಪಿಸಿ ಕಾಡಿಗೆ ಹೋಗಿ ತಪಸ್ಸಿನಿಂದ ಕಾಲವನ್ನು ಕಳೆಯುವ ವಾಡಿಕೆಯಿತ್ತು. ಈ ಕಾಲಕ್ಕೆ ಅದು ಹೊಂದುವದಿಲ್ಲ. ಆದ್ದರಿಂದ ವಯಸ್ಸಾದವರು ಮಾನಸಿಕವಾದ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು.

೩೧೬. ಎಷ್ಟು ಕಾಲವಾದರೂ ಇಹಲೋಕಭೋಗದ ಆಶೆಯು ಮನುಷ್ಯನಿಗೆ ತಪ್ಪುವದಿಲ್ಲ. ಯಯಾತಿಯು ಮತ್ತೆ ಯೌವನವನ್ನು ಪಡೆದೂ ತೃಪ್ತನಾಗಲಿಲ್ಲ. ಕೊನೆಗೆ ಅವನು ಇಂತೆಂದನಂತೆ ; 'ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ । ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥' ಕಾಮ್ಯವಿಷಯಗಳ ಉಪಭೋಗದಿಂದ ಎಂದಿಗೂ ಕಾಮವು ಶಾಂತವಾಗುವದಿಲ್ಲ : ಅಗ್ನಿಗೆ ಹವಿಸ್ಸನ್ನು ಹಾಕಿದರೆ ಮತ್ತಷ್ಟು ಭುಗಿಲೆನ್ನುವಂತೆ ಭೋಗದಿಂದ ಅದು ಮತ್ತೂ ಹೆಚ್ಚುತ್ತಿರುವದು.

೩೧೭. ವಯಸ್ಸಾದಮೇಲೆ ಶರೀರದ ಶಕ್ತಿಯು ಕುಗ್ಗುವದು ; ಆದರೆ ಭೋಗೇಚ್ಛೆಯು ಕುಗ್ಗುವದಿಲ್ಲ. ಆ ಕಾಲದಲ್ಲಿ ಭೋಗಗಳಿಂದಾಗುವ ವಿಪರ್ಯಾಸವನ್ನು ಮನದಂದುಕೊಂಡು ಆಹಾರವಿಹಾರಗಳ ನಿಯಮಗಳಿಂದ ಶರೀರಾರೋಗ್ಯವನ್ನು ಕಾಪಾಡಿಕೊಳ್ಳಬೇಕು. ಮನಸ್ಸಿಗೆ ನೆಮ್ಮದಿಯನ್ನು ತಂದುಕೊಡುವ ಸದ್ವಿಚಾರ, ಈಶ್ವರಾರ್ಚನೆ, ಅತಿಥಿಸತ್ಕಾರ, ಇಂದ್ರಿಯನಿಗ್ರಹ–ಮುಂತಾದವುಗಳನ್ನು ಆಚರಣೆಗೆ ತಂದುಕೊಳ್ಳಬೇಕು.

೩೧೮. ಶರೀರದ ಅವಯವಗಳು ಸಡಿಲವಾಗುವದು, ಆರೋಗ್ಯವು ಆಗಾಗ್ಗೆ ತಪ್ಪುವದು, ಮನಸ್ಸಿಗೆ ಸಾಮಾನ್ಯವಿಷಯಗಳಲ್ಲಿ ಬೇಸರ ಹುಟ್ಟುವದು, ಹಲ್ಲುಗಳು ಸಡಿಲವಾಗಿ ನೋಯುವದು, ತಲೆ ನರೆಯುವದು – ಇವೆಲ್ಲ ಈ ಲೋಕದ ಯೋಚನೆಯನ್ನು ಕಡಿಮೆಮಾಡಿ ಪರಲೋಕಕ್ಕೆ ಮತ್ತು ಮತ್ತೊಂದು ಜನ್ಮಕ್ಕೆ ತಕ್ಕ ಬುತ್ತಿಯನ್ನು ಕಟ್ಟಿಕೊಳ್ಳುವ ಯೋಚನೆಯನ್ನು ಮಾಡೆಂದು ಪ್ರಕೃತಿದೇವತೆಯು ಕೊಡುವ ಮುನ್ನೆಚ್ಚರಿಕೆಗಳು. ಆಗಲಾದರೂ ಸತ್ಸಂಗದಿಂದ ಕೃತಾರ್ಥನಾಗುವ ಯೋಚನೆಯನ್ನು ಮಾಡಬೇಕು.

೩೧೯. ವರ್ತಮಾನಪತ್ರಿಕೆಗಳನ್ನು ಓದಿ ಮನಸ್ಸಿಗೆ ಕಿರಿಕಿರಿಯನ್ನು ತಂದುಕೊಳ್ಳುವ ವ್ಯಸನವನ್ನು ವೃದ್ಧರು ಕೈಬಿಡಬೇಕು. ಸಿನೆಮಾ, ನಾಟಕ – ಇಂಥವುಗಳಿಂದ ಮನಸ್ಸನ್ನು ಚಂಚಲಗೊಳಿಸಿಕೊಳ್ಳಬಾರದು. ಉತ್ತಮವಾದ ಗ್ರಂಥಗಳ ಪಾರಾಯಣ, ಪುರಾಣಶ್ರವಣ, ಸಾಧುಸಂತರ ಉಪದೇಶಕ್ಕೆ ಕಿವಿಗೊಡುವದು – ಇಂಥ ಸತ್ಕಾಲಕ್ಷೇಪದಿಂದ ಮನಸ್ಸನ್ನು ಶಾಂತವಾಗಿರಿಸಿ ಕೊಳ್ಳಬೇಕು.

೩೨೦.. 'ವೃದ್ಧಸ್ತಾವಚ್ಚಿನ್ತಾಸಕ್ತಃ' ಎಂಬುದು ಬಲ್ಲವರ ಸೂಕ್ತಿ, ಮುಪ್ಪು ಬಂದಂತೆಲ್ಲ ಹೊಸಹೊಸ ಚಿಂತೆಗಳು ಹರಡಿಕೊಳ್ಳುತ್ತವೆ. ಆಗ ತಲೆದೋರುವ ಇಹಲೋಕದ ಚಿಂತೆಗಳಿಗೆ ಪರಿಹಾರೋಪಾಯವು ಮಾತ್ರ ಮುದುಕರ ಸ್ವಾಧೀನ ದಲ್ಲಿರುವದಿಲ್ಲ. ಶರೀರದ ಅವಯವಗಳ ಶಕ್ತಿಯು ಕುಗ್ಗಿದಂತೆ ಚಿಂತೆಯು ಹೆಚ್ಚಿ ಕೊಳ್ಳುವದು. ಈ ಕಷ್ಟದಿಂದ ಪಾರಾಗುವದಕ್ಕಾದರೂ ಮುದುಕರು ಪರ ಮಾರ್ಥಚಿಂತನೆಗೇ ಮನಸ್ಸುಹಾಕಬೇಕು. ಅದರಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ.

೩೨೧. ಇಂದ್ರಿಯಪಾಟವವು ಇನ್ನೂ ತಕ್ಕಮಟ್ಟಿಗೆ ಇರುವಾಗಲೇ ವಿವೇಕಿಯಾದ ಮನುಷ್ಯನು ತನ್ನ ಇಹಲೋಕದ ವ್ಯವಹಾರವನ್ನು ವ್ಯವಸ್ಥೆಗೊಳಿಸಬೇಕು. ಮಕ್ಕಳಿಗೆ ಅಥವಾ ತನ್ನ ಹೆಚ್ಚಿನ ಹತ್ತಿರದ ಬಂಧುಗಳಿಗೆ ವ್ಯವಹಾರವನ್ನು ಒಪ್ಪಿಸಿ ನಿಶ್ಚಿಂತೆಯಿಂದಿರುವದಕ್ಕೆ ಸಿದ್ಧನಾಗಬೇಕು. ಪುರಾಣ ಶ್ರವಣ, ತೀರ್ಥಯಾತ್ರೆ, ಸತ್ಸಂಗ – ಇಂಥವುಗಳಿಂದ ತನ್ನಲ್ಲಿ ತಾನು ಪರಮಾರ್ಥಚಿಂತನೆಗೆ ಅಣಿಯಾಗಬೇಕು. ಹಾಗಾದರೆ ಮುಪ್ಪಿನ ಅನರ್ಥಗಳ ವೇಗವು ಕಡಿಮೆಯಾಗುವದು.

೩೨೨. ಮುಪ್ಪುಬಂದಾಗ ಹೆಚ್ಚಿನ ಉಪವಾಸಗಳನ್ನೂ ಕಠಿನವ್ರತಗಳನ್ನೂ ಕೆಲವರು ಪ್ರಾರಂಭಿಸುತ್ತಾರೆ. ಆದರೆ ಶರೀರಕ್ಕೂ ಇಂದ್ರಿಯಗಳಿಗೂ ಆ ಕಷ್ಟವನ್ನು ಸಹಿಸುವ ಶಕ್ತಿಯಿಲ್ಲದೆ ಅನವಶ್ಯವಾಗಿ ಮತ್ತೊಬ್ಬರ ಮೇಲೆ ತಮ್ಮ ಪೋಷಣೆಯ ಭಾರವನ್ನು ಹೆಚ್ಚಾಗಿ ಹೊರಿಸುವ ಸಂಭವವುಂಟಾಗಬಹುದು. ವಯಸ್ಸಿಗೆ ತಕ್ಕಂತೆ ಆಹಾರವಿಹಾರಗಳನ್ನು ಮಾರ್ಪಡಿಸಿಕೊಳ್ಳುವದು ಒಳ್ಳೆಯದೇ ಸರಿ. ಆದರೆ ಶರೀರವನ್ನು ಘೋರವ್ರತಗಳಿಂದ ಕರ್ಷಣೆಗೊಳಿಸುವದರಿಂದ ಯಾವ ಪ್ರಯೋಜನವೂ ಇರುವದಿಲ್ಲ. ಪರಮೇಶ್ವರನ ಸಮೀಪದಲ್ಲಿಯೇ ಮನಸ್ಸಿರುವಂತೆ ಮಾಡಿಕೊಳ್ಳುವ ಉಪವಾಸವನ್ನೂ ಲೋಕದ ವ್ಯವಹಾರಗಳನ್ನು ಕಟ್ಟಿಕೊಳ್ಳದೆ ಇರುವದೆಂಬ ವ್ರತವನ್ನೂ ಕೈಕೊಳ್ಳುವದೇ ಆಗ್ಗೆ ಉಚಿತವಾಗಿರುತ್ತದೆ.

೩೨೩. ತಾನು ಇಹವ್ಯಾಪಾರವನ್ನು ಬಿಟ್ಟೆನೆಂಬ ಹೆಮ್ಮೆಯನ್ನು ಮಾಡಿಕೊಳ್ಳಬಾರದು. ಇತರರಿಗೆ ಇಹವ್ಯಾಪಾರಕ್ಕೆ ಬೇಕಾದ ಸಲಹೆಯನ್ನು ಕೊಡುವ ಗುರುಸ್ಥಾನಕ್ಕೂ ಇಳಿಯಬಾರದು. ಇಹವ್ಯಾಪಾರಕ್ಕೆ ತಾನೇ ಹಾತುವರಿಯುವದಂತೂ ತಿಳಿಗೇಡಿತನವೇ ಸರಿ. ಈ ಲೋಕದಲ್ಲಿದ್ದರೂ ಅದಕ್ಕೆ ಸಿಕ್ಕಿಕೊಳ್ಳದಂತೆ ಭಗವಚ್ಚಿಂತನೆಯಲ್ಲಿರುವದೇ ಸರ್ವೋತ್ತಮ.

೩೨೪. ಸಂನ್ಯಾಸಾಶ್ರಮವೆಂಬುದೊಂದು ಈಗಿನ ಕಾಲದ ಒಗಟು. ಸಂನ್ಯಾಸವೆಂದರೇನು ? ಎಂದರೆ ಕಾಷಾಯ, ದಂಡ, ಕಮಂಡಲು, ಪಾದುಕೆ – ಇವುಗಳನ್ನು ಧರಿಸಿ ಊರೂರನ್ನು ತಿರುಗುವ ಭಿಕ್ಷುಕರ ಉದ್ಯೋಗ – ಎಂದು ಒಬ್ಬರು ಹೇಳಿದ್ದರು. ಆ ಮಾತಿನಲ್ಲಿ ಹೆಚ್ಚಿನ ಭಾಗದಲ್ಲಿ ನಿಜವಿದೆಯೆಂದೇ

ಹೇಳಬೇಕು. ಸಂನ್ಯಾಸವೆಂದರೆ ಹೊಣೆಗಾರಿಕೆಯಿಲ್ಲದ ಜೀವನವೆಂದೇ ಅನೇಕರು ತಿಳಿದುಕೊಂಡಂತಿದೆ.

೩.೨೫. ವೈರಾಗ್ಯವಿಲ್ಲದೆ ವೇಷವನ್ನು ಬದಲಾಯಿಸುವದು ಸಂನ್ಯಾಸವಲ್ಲ , ಅದು ಮೋಸ ! ವೇದಾಂತಚಿಂತನೆಯಿಲ್ಲದೆ ಜನಿವಾರವನ್ನು ತೆಗೆದುಹಾಕುವದು ಸಂನ್ಯಾಸವಲ್ಲ, ಅದು ವಿಪರ್ಯಾಸ ! ಅಂತರ್ಮುಖನಾಗದೆ ಹಿಂದಿನ ಪರಮಹಂಸಾಗ್ರೇಸರರ ಹೆಸರನ್ನು ತಳೆಯುವದು ಸಂನ್ಯಾಸವಲ್ಲ, ಅದು ಅವರ ಪರಿಹಾಸ !

೩.೨೬. ವೇದೋಕ್ತಕರ್ಮಗಳನ್ನು ಮಾಡುವ ನೈಷ್ಠಿಕಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ – ಈ ಆಶ್ರಮದವರಿಗೆ ಪುಣ್ಯಲೋಕಗಳು ದೊರೆಯುವವು ; ಆದರೆ ಬ್ರಹ್ಮಸಂಸ್ಥನಾದ ಮಹಾತ್ಮನಿಗೆ ಅಮೃತತ್ವವು ದೊರಕುವದು – ಎಂದು ಶ್ರುತಿಯಲ್ಲಿದೆ. ಬ್ರಹ್ಮಸಂಸ್ಥನೆಂದರೆ ಪ್ರಣವೋಪಾಸಕನಾದ ಪರಮಹಂಸ ಪರಿವ್ರಾಜಕನು.

೩.೨೭. ವೇದಗಳಿಗೆಲ್ಲ ಸಾರವು ಪ್ರಣವವು ; ಆದ್ದರಿಂದ ವೇದೋಕ್ತವಾದ ಕರ್ಮಗಳನ್ನೂ ವೇದಾಧ್ಯಯನವನ್ನೂ ತ್ಯಜಿಸಿದ ಸಂನ್ಯಾಸಿಯು ಪ್ರಣವವನ್ನು ಬಿಡಬಾರದು. ಪ್ರಣವವೆಂದರೆ ಓಂಕಾರವು, ಮತ್ತು ಓಂಕಾರದ ಲಕ್ಷ್ಯಾರ್ಥವಾದ ಪರಮಾತ್ಮನು. ಪ್ರಣವಜಪವೂ ಪ್ರಣವೋಪಾಸನೆಯೂ ಪರಮಹಂಸನ ಧನವು.

೩.೨೮. ಪರಮಾತ್ಮಚಿಂತನೆಗೆಂದು ವೈದಿಕಕರ್ಮತ್ಯಾಗವನ್ನು ಮಾಡುವದೇ ಪಾರಮಹಂಸ್ಯವು. ಆದ್ದರಿಂದ ಪರಮಹಂಸನಿಗೆ ಪ್ರಣವೋಪಾಸನೆ ಯನ್ನು ಬಿಟ್ಟರೆ ಮತ್ತೆ ಯಾವ ಕರ್ಮಗಳ ನಿಯಮವೂ ಇಲ್ಲ. ವೇದಾಧಿಕಾರವಿಲ್ಲದವನು ಪರಮಹಂಸನೆಂದು ಕರೆದುಕೊಳ್ಳುವದೂ ಹಾಸ್ಯಾಸ್ಪದವು. ಏಕೆಂದರೆ ಅವನಿಗೆ ವೈದಿಕಕರ್ಮವೇ ಇಲ್ಲ ; ಅದರ ತ್ಯಾಗವು ಎಲ್ಲಿಂದ ಬರಬೇಕು. ?

೩.೨೯. ಯಾವ ಆಶ್ರಮವನ್ನೂ ಇಟ್ಟುಕೊಳ್ಳದೆ ದ್ವಿಜನು ಒಂದು ಕ್ಷಣವೂ ಇರಬಾರದು ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದ ಆಶ್ರಮಾಂತರಕ್ಕೆ ಅವಕಾಶವಿಲ್ಲದವರು ಪಾರಿವ್ರಾಜ್ಯವನ್ನು ಸ್ವೀಕರಿಸಬೇಕು.

ಆದರೆ ಇಹಲೋಕ–ಪರಲೋಕಗಳ ಫಲಾಸಕ್ತಿಯು ಇಲ್ಲದವರು ಮಾತ್ರ ಪರಮಹಂಸಪರಿವ್ರಾಜಕರಾಗಬೇಕು. ಹಾಗಿಲ್ಲದವರು ತ್ರಿದಂಡಿಸಂನ್ಯಾಸಿಗಳಾಗಿ ಉಪಾಸನೆಯನ್ನು ಮಾಡುತ್ತಿರಬೇಕೇ ಹೊರತು ಪಾರಮಹಂಸ್ಯಕ್ಕೆ ಕೈಹಾಕ ಬಾರದು. ಈಗಿನ ಕಾಲದಲ್ಲಿ ಅಧಿಕಾರಿಗಳೂ ಅನಧಿಕಾರಿಗಳೂ ಪರಮಹಂಸ ರಾಗುತ್ತೇವೆನ್ನುತ್ತಾರೆ. ಆದರೆ ಅವರು ವೇಷದ ಪರಮಹಂಸರೇ ಹೊರತು ಯಥಾರ್ಥಪರಮಹಂಸರಾಗಲಾರರು.

೩೩೦. ಸಂನ್ಯಾಸಿಗಳು ಗೃಹಸ್ಥರಿಗೆ ವೇದಾಂತವಿಚಾರದಲ್ಲಿ ಅಧಿ ಕಾರವಿಲ್ಲವೆಂದು ಹೇಳುವದು ಆಗಾಗ್ಗೆ ಕಂಡುಬರುತ್ತಿದೆ. ಆದರೆ ಶಾಸ್ತ್ರದಲ್ಲಿ ಗೃಹಸ್ಥರು ವೇದಾಂತವಿಚಾರಕ್ಕೆ ಅನರ್ಹರೆಂಬ ಸೊಲ್ಲು ಎಲ್ಲಿಯೂ ಕಂಡುಬರುವದಿಲ್ಲ. ಅದು ಹೇಗೇ ಇರಲಿ, ಗೃಹಸ್ಥರಿಗೆ ಯಾವಯಾವದರಲ್ಲಿ ಅಧಿ ಕಾರವಿದೆ ಎಂಬುದನ್ನು ನಿರ್ಣಯಿಸುವದೇನೂ ಸಂನ್ಯಾಸಿಯ ಕೆಲಸವಲ್ಲ ; ತಾನು ಹೇಗೆ ಉದ್ಧಾರವಾಗಬೇಕೆಂಬುದನ್ನು ಸಂನ್ಯಾಸಿಯಾದವನು ಮೊದಲು ನಿಶ್ಚಯಿಸಿ ಕೊಳ್ಳಬೇಕು.

೩೩೧. ಸಂನ್ಯಾಸಿಯ ಧರ್ಮವೆಂದರೆ ಬ್ರಹ್ಮಜಿಜ್ಞಾಸೆಯನ್ನು ಮಾಡುವದು, ಮತ್ತು ಧ್ಯಾನಯೋಗಪರನಾಗಿರುವದು. ಸಂನ್ಯಾಸಿಗೆ ನಿವೃತ್ತಿಧರ್ಮಕ್ಕೆ ಅಧಿಕಾರವೇ ಹೊರತು ಪ್ರವೃತ್ತಿಧರ್ಮಕ್ಕೆ ಅಧಿಕಾರವಿಲ್ಲ. ಶಾಸ್ತ್ರೀಯಕರ್ಮವಾದ ಯಜ್ಞದಾನತಪಸ್ಸುಗಳೆಂಬಿವಕ್ಕೂ ಪರಮಹಂಸನಿಗೆ ಅಧಿ ಕಾರವಿಲ್ಲ ; ಇನ್ನು ಲೌಕಿಕಕರ್ಮಗಳಲ್ಲಿ ಅವನು ತೊಡಗಬಾರದು ಎಂಬುದನ್ನು ಹೇಳಬೇಕಾದದ್ದೇ ಇಲ್ಲ.

೩೩೨. ಈಗಿನ ಕಾಲಕ್ಕೆ ಪರಮಹಂಸರೆನಿಸಿಕೊಂಡವರು ಕೂಡ ರಾಜಕೀಯಚಳುವಳಿಗಳಲ್ಲಿ ಭಾಗವನ್ನು ವಹಿಸುತ್ತಾರೆ. ನಾನು, ನನ್ನದು – ಎಂಬ ಭಾವಗಳನ್ನು ತ್ಯಜಿಸಿ ಪರಮಾತ್ಮಚಿಂತನೆಯಲ್ಲಿಯೇ ಮುಳುಗಿರಬೇಕಾದ ಯತಿಯು ಸತ್ಯಾಗ್ರಹಾದಿಗಳಲ್ಲಿಯೂ ಯಾವದಾದರೊಂದು ಪಕ್ಷದ ಅಧಿ ಕಾರವನ್ನು ವಹಿಸುವದರಲ್ಲಿಯೂ ಆಸಕ್ತಿಯನ್ನು ತೋರಿಸಬೇಕೆಂಬ ಹಂಬಲು ತಲೆದೋರಿದರೆ 'ಪರಧರ್ಮೋ ಭಯಾವಹಃ' ಎಂಬ ಗೀತಾವಚನವನ್ನು ನೆನಪಿಸಿಕೊಳ್ಳುವದು ಒಳ್ಳೆಯದು.

೩೩೩. ಲೋಕಸಂಗ್ರಹಕ್ಕಾಗಿ ಸಂನ್ಯಾಸಿಗಳು ರಾಜಕೀಯವಿಚಾರಗಳಲ್ಲಿಯೂ ಕೈಹಾಕಬಾರದೇಕೆ ? – ಎಂಬ ಶಂಕೆಯು ತಲೆದೋರಬಹುದು. ಶಾಸ್ತ್ರೀಯಕರ್ಮಗಳನ್ನು ಮುಮುಕ್ಷುವಾದವನು ಪರಮೇಶ್ವರಾರಾಧನಬುದ್ಧಿಯಿಂದ ಮಾಡುವದನ್ನು ಕರ್ಮಯೋಗವೆನ್ನಬಹುದಾಗಿರುವಂತೆ, ಜ್ಞಾನಿಗಳಾಗಿರುವ ಗೃಹಸ್ಥರು ಶಾಸ್ತ್ರೀಯಕರ್ಮಗಳನ್ನು ಲೋಕಸಂಗ್ರಹಕ್ಕಾಗಿ ಮಾಡಬಹುದೆಂದು ಗೀತಾದಿಗಳಲ್ಲಿ ಹೇಳಿರುವಂತೆ ಕಾಣುತ್ತದೆ. ಲೌಕಿಕಕರ್ಮಗಳನ್ನು ನಿಃಸ್ಪೃಹತೆಯಿಂದ ಮಾಡಿದರೆ ಅದನ್ನು ಕರ್ಮಯೋಗವೆಂದೂ ತನ್ನ ಪ್ರಯೋಜನಕ್ಕಲ್ಲದೆ ಮಾಡುವ ಲೋಕೋಪಕಾರಕವಾದ ಕೆಲಸವನ್ನು ಲೋಕಸಂಗ್ರಹವೆಂದೂ ಕರೆಯುವ ವಾಡಿಕೆಯು ಈಗ ಕಂಡುಬರುತ್ತದೆ. ಈ ಪರಿಭಾಷೆಗೆ ಯಾವ ಆಧಾರವಿದೆಯೆಂಬುದನ್ನು ಹಾಗೆ ವ್ಯವಹರಿಸುವವರೇ ಹೇಳಬೇಕು.

೩೩೪. ಸಂನ್ಯಾಸಿಯು ವ್ಯಾಖ್ಯಾನಕೌಶಲವನ್ನು ತೋರಿಸುವದು, ಜ್ಯೋತಿಷವನ್ನು ಹೇಳುವದು, ಸಾಮುದ್ರಿಕನೈಪುಣ್ಯವನ್ನು ಪ್ರದರ್ಶನಮಾಡುವದು, ಧಾತುವಾದದ ಅಭ್ಯಾಸ, ಯಂತ್ರಮಂತ್ರಶಾಸ್ತ್ರಗಳಲ್ಲಿ ಪ್ರತಿಭೆಯನ್ನು ತೋರಿಸುವದು, ವಶೀಕರಣವಿದ್ಯೆ, ಹಠಯೋಗದ ತಿಳಿವಳಿಕೆಯ ಪ್ರದರ್ಶನ – ಇವೇ ಮುಂತಾದವುಗಳಿಂದ ಭಿಕ್ಷೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಹವಣಿಸಬಾರದೆಂದು ಸ್ಮೃತಿಗಳಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಸಾಧಕನಾದ ಪರಮಹಂಸನು ಈ ವಿಷಯದಲ್ಲಿ ಅತ್ಯಂತವಾಗಿ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು.

೩೩೫. ಕರ್ಮಗಳನ್ನು ಮಾಡುವದು, ಕರ್ತೃತ್ವಬುದ್ಧಿಯನ್ನು ಬಲಪಡಿಸುವದು ; ತತ್ತ್ವವಿಚಾರವನ್ನು ಮಾಡುವದು ಆ ಬುದ್ಧಿಯನ್ನು ಸಡಿಲಿಸುವದು. ಆದ್ದರಿಂದ ಕರ್ಮಜ್ಞಾನಗಳ ಸಮುಚ್ಚಯವು ಮೋಕ್ಷಕ್ಕೆ ಕಾರಣವೆಂದು ತಿಳಿಯುವದು ಬಯಲಭ್ರಾಂತಿಯೇ ಸರಿ. ಹಾಗೆ ಪ್ರಯತ್ನಿಸುವ ಸಂನ್ಯಾಸಿಯು ಕರ್ಮಜ್ಞಾನಗಳೆರಡರ ಫಲದಿಂದಲೂ ಭ್ರಷ್ಟನಾಗುವನು.

೩೩೬. ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ, ಅಮಾನಿತ್ವಾದಿಗಳು, ಅದ್ವೇಷ್ಟೃತ್ವಾದಿಗಳು – ಇವೆಲ್ಲ ನಿವೃತ್ತಿಧರ್ಮಗಳೆನಿಸುವವು. ಅವುಗಳ ಅನುಷ್ಠಾನದಿಂದ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಆದ್ದರಿಂದ ಸಂನ್ಯಾಸಿಯ ಧರ್ಮವೆಂದರೆ ನಿವೃತ್ತಿಧರ್ಮದ ಅನು

ಷ್ಠಾನವೇ. ಅವುಗಳನ್ನು ಅನುಷ್ಠಾನಮಾಡುವದೇ ಜ್ಞಾನಾಭ್ಯಾಸವು ; ಅವುಗಳನ್ನು ಬಿಡುವ ಸಂನ್ಯಾಸಿಯು ಅಜ್ಞಾನಾಭ್ಯಾಸವನ್ನು ಮಾಡಿದವನಾಗುತ್ತಾನೆ. ಗೃಹಸ್ಥರು ವಿಹಿತಕರ್ಮಗಳನ್ನು ಮಾಡದಿದ್ದರೆ ಹೇಗೆ ಪ್ರತ್ಯವಾಯವುಂಟೋ ಹಾಗೆಯೇ ಜಿಜ್ಞಾಸುವಾದ ಸಂನ್ಯಾಸಿಗೂ ಜ್ಞಾನಾಭ್ಯಾಸವನ್ನು ಮಾಡದಿದ್ದರೆ ಪ್ರತ್ಯವಾಯವುಂಟು.

೩೩೭. ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂಬ ಆಶೆಯಿಂದ ಮಾಡಿದ ಸಂನ್ಯಾಸಕ್ಕೆ ವಿವಿದಿಷಾಸಂನ್ಯಾಸವೆಂದು ಹೆಸರು. ವಿವಿದಿಷಾಸಂನ್ಯಾಸಿಗಳು ಸಕಲಕರ್ಮಪರಿತ್ಯಾಗಪೂರ್ವಕವಾಗಿ ಶ್ರವಣಮನನನಿದಿಧ್ಯಾಸನಗಳಲ್ಲಿ ನಿರತರಾಗಿರಬೇಕು. ಶ್ರವಣಾದಿಗಳಿಗೆ ವಿಘ್ನವನ್ನು ತರುವ ಕರ್ಮಾಚರಣೆಯನ್ನು ಅದರಲ್ಲಿಯೂ ಶಾಸ್ತ್ರದಲ್ಲಿ ವಿಹಿತವಾಗದೆ ಇರುವ ಕರ್ಮಗಳ ಆಚರಣೆಯನ್ನು ಕೈಕೊಳ್ಳುವವರು ತಮ್ಮ ಶ್ರೇಯಸ್ಸಿಗೆ ತಾವೇ ವಿಘ್ನವನ್ನು ತಂದೊಡ್ಡಿಕೊಂಡವರಾಗುತ್ತಾರೆ.

೩೩೮. ಸ್ನಾನಶೌಚಾದಿಗಳು, ಭಿಕ್ಷಾಚರಣೆ – ಇವುಗಳು ಶಮದಮಾದಿಗಳ ಅಭ್ಯಾಸಕ್ಕೆ ಅನುಗುಣವಾಗಿರುವದರಿಂದ ಅವನ್ನು ಅವಶ್ಯವಾಗಿ ಅನುಷ್ಠಾನಮಾಡಬೇಕು. ಆದರೆ ಶಮದಮಾದಿಗಳನ್ನು ಬಿಟ್ಟು ಶಾಸ್ತ್ರದಲ್ಲಿ ಎಲ್ಲಿಯೂ ವಿಧಿಸದೆ ಇರುವ ವಿಕ್ಷೇಪಕರವಾದ ಕರ್ಮಗಳನ್ನು ಆಚರಿಸುವ ಸಂನ್ಯಾಸಿಗಳು ವಿಹಿತತ್ಯಾಗ, ಪ್ರತಿಷಿದ್ಧಸೇವೆ – ಎರಡನ್ನೂ ಆಚರಿಸಿ ಮಹಾಪ್ರತ್ಯವಾಯಕ್ಕೆ ಒಳಗಾಗುವರು. ಮುಮುಕ್ಷುಗಳಾದವರು ಇದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

೩೩೯. ಪುರುಷಾರ್ಥಗಳನ್ನು ಶಾಸ್ತ್ರಕಾರರು ಎರಡು ರಾಶಿಯಾಗಿ ವಿಂಗಡಿಸಿರುತ್ತಾರೆ. ಧರ್ಮ, ಅರ್ಥ, ಕಾಮ – ಈ ಮೂರೂ ಒಂದು ರಾಶಿ ; ಇವನ್ನು 'ಭೋಗ' ವೆಂದು ಕರೆಯಬಹುದು. ಸಂಸಾರದಲ್ಲಿದ್ದುಕೊಂಡು ಧರ್ಮಕ್ಕೆ ಹೊಂದಿಕೆಯಾಗಿ ಅರ್ಥದ ಯೋಗಕ್ಷೇಮಚಿಂತನೆಯಲ್ಲಿರುವದು, ಕಾಮಗಳನ್ನು ಉಪಭೋಗಿಸುತ್ತಿರುವದು – ಇದೇ ಭೋಗಶಬ್ದಕ್ಕೆ ಅರ್ಥ. ಸಂನ್ಯಾಸಿಗಳ ಆಶ್ರಮವು ಭೋಗಕ್ಕೆ ಏರ್ಪಟ್ಟಿಲ್ಲ ; ಅದು ತ್ಯಾಗದಿಂದ 'ಅಪವರ್ಗ'ವನ್ನು ಪಡೆಯುವದಕ್ಕೆಂದು ಏರ್ಪಟ್ಟಿರುತ್ತದೆ.

೩೪೦. ಬ್ರಹ್ಮಾಂಡವೆಲ್ಲವೂ 'ಈಶಾವಾಸ್ಯವು' ; ಪರಮೇಶ್ವರನಿಂದ ವ್ಯಾಪ್ತವಾಗಿರುತ್ತದೆ. ಇದನ್ನರಿತುಕೊಂಡು ತ್ಯಾಗದಿಂದ ಪರಮಾನಂದವನ್ನು ಅನುಭವಿಸಬೇಕು. ಇದೇ ಸಂನ್ಯಾಸಧರ್ಮ. 'ತ್ಯಾಗದಿಂದ ನಿನ್ನನ್ನು ನೀನು ಕಾಪಾಡಿಕೊ', 'ತ್ಯಾಗದಿಂದಲೇ ಅಮೃತತ್ವವನ್ನು ಪಡುಕೊಂಡಿರುತ್ತಾರೆ' ಎಂಬ ಉಪನಿಷದ್ವಚನಗಳಿಗೆ ಇದೇ ಅಭಿಪ್ರಾಯ.

೩೪೧. ಪರಮಹಂಸನು 'ಇದೆಲ್ಲವೂ ಬ್ರಹ್ಮವೇ, ನಾನು ಬ್ರಹ್ಮವೇ' ಎಂಬ ಜ್ಞಾನದಿಂದ ಅಮೃತನಾಗಬೇಕು. ಭೋಗವಿಲಾಸಗಳಿಂದ ಮೆರೆಯುವವನು ಪರಮಹಂಸನಲ್ಲ, ಅವನು ಸಂನ್ಯಾಸಿಯೇ ಅಲ್ಲ!

೩೪೨. ಕಾಷಾಯದಂಡವಿದ್ದಮಾತ್ರದಿಂದ ಯತಿಯು ಪೂಜ್ಯನೆನಿಸಿ ಕೊಳ್ಳುತ್ತಾನೆ ಎಂದು ಸ್ಮೃತಿಕಾರರು ಹೇಳಿರುತ್ತಾರೆ. ಅದು ಗೃಹಸ್ಥರಿಗಾಗಿ ಹೇಳಿದ ಮಾತು. ಯತಿಗಳನ್ನು ಹಣ್ಣುಹಾಲು, ದ್ರಾಕ್ಷಿಕಲ್ಲುಸಕ್ಕರೆ, ಮಜ್ಜಿಗೆ ಪಾನಕ – ಮುಂತಾದ ಉಪಾಹಾರಗಳಿಂದ ಗೃಹಸ್ಥರು ಸತ್ಕರಿಸುವದು ತಪ್ಪಲ್ಲ ; ಅವರಿಗೆ ಸುಖಾಸನ, ಭಿಕ್ಷೆ, ಪಾದಸೇವನ– ಮುಂತಾದವುಗಳನ್ನು ಒಪ್ಪಿಸುವದೂ ತಪ್ಪಲ್ಲ. ಆದರೆ ಸಂನ್ಯಾಸಿಯು ಗೃಹಸ್ಥರ ಸೇವೆಗಾಗಿ ಹಾತುವರೆಯುತ್ತಿರಬಾರದು. ತಾನು ಸೇವ್ಯನೆಂದೂ ಮಿಕ್ಕವರು ತನ್ನ ಸೇವೆಗೆ ಸಿದ್ಧರಾಗಿರತಕ್ಕದ್ದೆಂದೂ ಭಾವಿಸುವದು ಸಂನ್ಯಾಸಿಗೆ ಪತನಕಾರಣವಾಗಿರುತ್ತದೆ. ದೇಹ, ಇಂದ್ರಿಯ, ಅಂತಃಕರಣ – ಇವುಗಳ ಸಂಯಮದಿಂದೊಡಗೂಡಿ ಪರಮಾತ್ಮನಿಷ್ಠನಾಗಿರುವದೇ ಪರಮಹಂಸನ ಗುರಿಯಾಗಿರಬೇಕು.

೩೪೩. ಶ್ರೋತ್ರಿಯನಾಗಿರುವದು – ಎಂದರೆ ಶ್ರುತ್ಯರ್ಥಚಿಂತನ ಪರನಾಗಿರುವದು – ಪರಮಹಂಸನ ಕರ್ಮವು. ಅವೃಜಿನನಾಗಿರುವದು – ಎಂದರೆ ಧರ್ಮಾಧರ್ಮಗಳ ಕೋಟಲೆಗೆ ಸಿಕ್ಕಿಕೊಳ್ಳದೆ ಇರುವದು – ಅವನ ನಿತ್ಯಕರ್ತವ್ಯವು. ಅಕಾಮಹತನಾಗಿರುವದು – ಎಂದರೆ ಬ್ರಹ್ಮಲೋಕದವರೆಗಿನ ಕರ್ಮೋಪಾಸನಾಫಲಗಳನ್ನು ಕೂಡ ಕಣ್ಣೆತ್ತಿ ನೋಡದೆ ಆತ್ಮಕಾಮನಾಗಿರುವದು– ಅವನ ಲಕ್ಷ್ಯವು. ಪರಮಾತ್ಮನಲ್ಲಿ ಎಂದೆಂದಿಗೂ ಹಂಸನಾಗಿರುವದು– ಆತ್ಮಕ್ರೀಡನಾಗಿರುವದೇ – ಅವನ ಸ್ವಧರ್ಮವು.

೩೪೪. ಶಾಂತಿಸಮಾಧಾನಗಳು ಸಂನ್ಯಾಸಾಶ್ರಮದಲ್ಲಿರುವಾತನಿಗೆ ಹೆಗ್ಗುರುತಾಗಿರುತ್ತವೆ. ಪರಮಾತ್ಮನು ನಿತ್ಯಶಾಂತನೂ ನಿತ್ಯಸಮಾಹಿತ

ಸ್ವರೂಪನೂ ಆಗಿರುವದರಿಂದ ಬಾಹ್ಯದ ಬಯಕೆಗಳೆಲ್ಲವನ್ನೂ ಬಿಟ್ಟು ಪರಮಾತ್ಮನಲ್ಲಿ ನಿಷ್ಠನಾಗಿರುವದಕ್ಕೆ ಹವಣಿಸುತ್ತಿರುವಾತನಿಗೆ ಶಾಂತಿಸಮಾಧಾನಗಳು ತಾವೇ ವಶವಾಗುವವು.

೩೪೫. ಪರಮಾತ್ಮನು ನಿತ್ಯಶುದ್ಧಬುದ್ಧಮುಕ್ತಸ್ವರೂಪನಾಗಿರುತ್ತಾನೆ. ಯಾವನು ಬಾಹ್ಯಶುಚಿತ್ವ, ಆಂತರಶುಚಿತ್ವ, ಶುದ್ಧಾಚಾರ – ಇವುಗಳನ್ನು ತಪ್ಪದೆ ಅನುಸರಿಸುವನೋ ಅವನಿಗೇ ಆತ್ಮನು ನಿತ್ಯಶುದ್ಧನೆಂಬ ಅರಿವು ಉಂಟಾಗುವದು. ಯಾವನು ಅಂತಃಕರಣದ ಮಾಲಿನ್ಯಕ್ಕೆ ಕಾರಣವಾದ ತಮೋಗುಣವನ್ನು ಅನುಸರಿಸಿ ನಿದ್ರೆ, ಆಲಸ್ಯ, ಪ್ರಮಾದ – ಇವುಗಳಿಗೆ ಒಳಗಾಗದೆ ಇರುವನೋ, ಯಾವನು ಸತ್ತ್ವಗುಣವನ್ನು ಬೆಳೆಯಿಸಿಕೊಂಡು ತತ್ತ್ವಚಿಂತನೆಯಲ್ಲಿಯೇ ಇದ್ದುಕೊಂಡಿರುವನೋ ಅವನಿಗೇ ಆತ್ಮನು ನಿತ್ಯಬುದ್ಧನೆಂಬ ಅರಿವು ಉಂಟಾಗುವದು. ಯಾವನು ಕಾಮ, ಕ್ರೋಧ, ಲೋಭ, ಮೋಹ – ಮುಂತಾದವುಗಳಿಗೆ ಸಿಕ್ಕಿಕೊಳ್ಳದೆ ನಿತ್ಯವೂ ನಿವೃತ್ತಿಧರ್ಮದಲ್ಲಿರುವನೋ ಅವನಿಗೇ ಆತ್ಮನು ನಿತ್ಯಮುಕ್ತನೆಂಬ ಅರಿವು ಉಂಟಾಗುವದು. ಈ ಸಾಧನಗಳು ಯಾವನಲ್ಲಿ ನಿತ್ಯವೂ ಇದ್ದುಕೊಂಡಿರುವವೋ ಅವನೇ ನಿಜವಾದ ಅರ್ಥದಲ್ಲಿ ಪರಮಹಂಸನು.

೩೪೬. ಸದ್ಗುರುವಿನಿಂದ ವೇದಾಂತವನ್ನು ಶ್ರವಣಮಾಡಿ ಅದರ ಸಾರವನ್ನು ಗ್ರಹಣಮಾಡುವದೇ **ಪಾಂಡಿತ್ಯವು**. ಅನಾತ್ಮವನ್ನು ತಿರಸ್ಕರಿಸಿ ತನ್ನ ಧಾರ್ಮಿಕತ್ವ, ವಿದ್ಯೆ – ಮುಂತಾದವುಗಳನ್ನು ತೋರ್ಪಡಿಸಿಕೊಳ್ಳದೆ ಆತ್ಮನಲ್ಲಿಯೇ ನಿಲ್ಲುವದಕ್ಕೆ ಪ್ರಯತ್ನಿಸುತ್ತಿರುವದೇ **ಬಾಲ್ಯವು**. ಆತ್ಮಸ್ವರೂಪವನ್ನೇ ನಿತ್ಯವೂ ಮನನಮಾಡುತ್ತಾ ಎಂದೆಂದಿಗೂ ಆತ್ಮಸ್ವರೂಪದ ಅನುಭವಕ್ಕೆ ಹವಣಿಸುತ್ತಿರುವದೇ **ಮೌನವು**. ಈ ಮೂರು ಸಾಧನಗಳು ಯಾವ ಸಂನ್ಯಾಸಿಗೆ ಅಳವಟ್ಟಿರುವವೋ ಅವನು ನಿಜವಾದ ಅರ್ಥದಲ್ಲಿ ಬ್ರಾಹ್ಮಣನೆನಿಸುವನು.

೩೪೭. ಪಾಂಡಿತ್ಯವು ಪೂರ್ಣವಾದದ್ದಕ್ಕೆ ಶಾಸ್ತ್ರಾರ್ಥನಿರ್ಣಯಕ್ಕೊ , ಅಥವಾ ಜ್ಞಾನಪ್ರದರ್ಶನಕ್ಕೊ– ವಾದಮಾಡದೆ ಇರುವದೇ ಗುರುತು. ಬಾಲ್ಯವು ಪೂರ್ಣವಾದದ್ದಕ್ಕೆ ತನ್ನ ಆಚಾರವನ್ನಾಗಲಿ ವಿದ್ಯೆಯನ್ನಾಗಲಿ ವೇಷಭೂಷಣಗಳಿಂದ ತೋರ್ಪಡಿಸಿಕೊಳ್ಳದಿರುವದೇ ಗುರುತು. ಮೌನವು ಪೂರ್ಣವಾದದ್ದಕ್ಕೆ ಮನಸ್ಸಿಗೆ ಲೌಕಿಕವಿಚಾರಗಳು ಹತ್ತುವದಕ್ಕೆ ಅವಕಾಶವೇ ಇಲ್ಲದಂತೆ

ನಿರಂತರವಾಗಿ – ಹಸಿವುಬಾಯಾರಿಕೆಗಳೇ ಮುಂತಾದ ಪ್ರಾರಬ್ಧಕರ್ಮನಿಮಿತ್ತ ವಾದ ಸಂಕಷ್ಟಗಳು ಒದಗಿದಾಗಲೂ – ತತ್ತ್ವಮನನದಲ್ಲಿ ನಿಷ್ಠನಾಗಿರುವದೇ ಗುರುತು.

೩೪೮. ಪೂರ್ಣಸಂನ್ಯಾಸವೆಂದರೆ ಪ್ರಪಂಚವೆಲ್ಲದರಲ್ಲಿಯೂ ಆಸ್ಥೆಯನ್ನು ಬಿಟ್ಟುಬಿಡುವದೇ ಆಗಿದೆ. ಪ್ರಪಂಚವನ್ನು ಯಾವದಾದರೊಂದು ಸ್ವಾರ್ಥದ ಪೂರ್ತಿಯನ್ನು ಮಾಡಿಕೊಳ್ಳುವದಕ್ಕೆ ಬೇಕಾದ ಸಾಮಗ್ರಿಯೆಂದು ಬಗೆಯುವವರಿಗೆ ಈ ಸಂನ್ಯಾಸವು ಎಂದಿಗೂ ದಕ್ಕಲಾರದು.

೩೪೯. ಪ್ರಪಂಚವು ಸಾಮಾನ್ಯರಿಗೆ ತ್ರೈಗುಣ್ಯದ ಮೂರ್ತಿಯಾಗಿ ಕಾಣುತ್ತಿರುವದು. ಇದನ್ನೇ ಭಗವಂತನು ಅರ್ಜುನನಿಗೆ **ಮಾಯೆ** ಎಂಬ ಹೆಸರಿನಿಂದ ಬೋಧಿಸಿರುತ್ತಾನೆ. ಈ ಮಾಯೆಯನ್ನು ದಾಟುವದು ತ್ರಿಗುಣಾತ್ಮಕವಾದ ಸ್ವಭಾವವುಳ್ಳವರಿಗೆ ಬಹಳ ಕಷ್ಟ. ತ್ರಿಗುಣವನ್ನು ಮೀರಿರುವವರೂ ಮೀರುವದಕ್ಕೆ ಪ್ರಯತ್ನಿಸುತ್ತಿರುವವರೂ ಸಂನ್ಯಾಸಿಗಳು ; ಅವರಿಗೆ ಈ ಮಾಯಾಪ್ರಪಂಚದಿಂದ ಯಾವ ಹಾನಿಯೂ ಇರುವದಿಲ್ಲ.

೩೫೦. ಸಾಮಾನ್ಯರಿಗೆ ಮಾಯಾರೂಪವಾಗಿ ಕಾಣುತ್ತಿರುವ ಪ್ರಪಂಚವು ಮುಮುಕ್ಷುಗಳಿಗೆ ಮಾಯಾರೂಪದಿಂದ ಕಾಣಿಸಿಕೊಳ್ಳುವದಿಲ್ಲ. ಸ್ವಕರ್ಮದಿಂದ ಭಗವಂತನನ್ನು ಅರ್ಚನೆಮಾಡಬೇಕೆನ್ನುವ ಭಕ್ತಿಯೋಗಿಗಳಿಗೆ ಪ್ರಪಂಚವು ಭಗವಂತನ ವಿಭೂತಿಗಳಿಂದ ಪರಿಪೂರ್ಣವಾಗಿರುವಂತೆ ಕಾಣಿಸುತ್ತಿರುವದು. ಸರ್ವಸಂಗವನ್ನು ಪರಿತ್ಯಾಗಮಾಡಿ ಭಗವನ್ಮಯರಾಗಿರುವ ಸಂನ್ಯಾಸಿಗಳಿಗೊ, ಎಂದರೆ ಪ್ರಪಂಚವೆಲ್ಲವೂ ಭಗವಂತನೇ ಆಗಿರುವದು. 'ಇದೆಲ್ಲವೂ ಬ್ರಹ್ಮವೇ' ಎಂಬ ಶ್ರುತಿಬೋಧೆಯನ್ನು ಅವರು ಅನುಭವಕ್ಕೆ ತಂದುಕೊಂಡಿರುತ್ತಾರೆ, ಅಥವಾ ಆ ಬೋಧೆಯ ಶ್ರವಣಮನನನಿದಿಧ್ಯಾಸನ ಗಳನ್ನು ಮಾಡುತ್ತಿರುತ್ತಾರೆ.

೩೫೧. ಸಂನ್ಯಾಸವೆಂದರೆ ಸ್ವಾರ್ಥಸಾಧನಕ್ಕಾಗಿ ಪ್ರಪಂಚವ್ಯವ ಹಾರದಿಂದ ತಪ್ಪಿಸಿಕೊಂಡು ಹೋಗುವ ಕಳ್ಳಾಟವಲ್ಲ. ಎಲ್ಲೆಲ್ಲಿಯೂ ಭಗವಂತ ನನ್ನು ಕಾಣುವ ಉತ್ತಮಸಾಧನೆಯನ್ನು ಮಾಡುವದಕ್ಕೆಂದು ಮಾಡುವ ಸ್ವಾರ್ಥ ತ್ಯಾಗವದು.

೩೫೨. ಯಾವನು ಪರಬ್ರಹ್ಮದಲ್ಲಿಯೇ ಉಪರತನಾಗಿರುತ್ತಾನೋ, ಯಾವನು ಅದರಿಂದ ಪಡೆಯಬೇಕಾಗಿರುವ ಪರಮಶಾಂತಿಯನ್ನು ಪಡೆದು ಕೊಂಡಿರುತ್ತಾನೋ, ಅವನ ನಡೆನುಡಿಗಳಲ್ಲಿ ಸರ್ವಭೂತಸಮತಾಬುದ್ಧಿಯ ಫಲವು ಕಾಣಿಸುತ್ತಿರುವದು. ಯಾರನ್ನೂ ಹಗೆಮಾಡದೆ, ಎಲ್ಲರಲ್ಲಿಯೂ ಮಿತ್ರ ಭಾವದಿಂದಿರುತ್ತಾ , ಎಲ್ಲರಲ್ಲಿಯೂ ಕರುಣೆಯನ್ನು ತೋರಿಸುತ್ತಿರುವ ಆ ಮಹಾತ್ಮನೇ ನಿಜವಾಗಿ ಪರಮಹಂಸಪರಿವ್ರಾಜಕನು. ಅವನಿಗೆ ನಾನು, ನನ್ನದು– ಎಂಬ ಭಾವನೆಗಳು ಎಂದಿಗೂ ಬರುವಹಾಗಿಲ್ಲ. ಆತನ ಸಾಂನಿಧ್ಯ ದಿಂದಲೂ ಆತನ ಸೇವೆಯಿಂದಲೂ ಅವನೊಡನೆ ಮಾಡುವ ಸಂಭಾಷಣೆಯಿಂದಲೂ ಜನರ ಜೀವನದ ಸಂತಾಪವು ಅಡಗಿ ಸುಖದ ಬೆಳದಿಂಗಳು ಎಲ್ಲೆಲ್ಲಿಯೂ ಹರಡಿಕೊಂಡಂತೆ ಕಾಣಿಸುತ್ತಿರುವದು.

‘‘ಓಂ ಶಾನ್ತಿಃ ಶಾನ್ತಿಃ ಶಾನ್ತಿಃ’’

ಸ್ಥಾಪನೆ ೧೯೨೦ ಶ್ರೀಗುರುಭ್ಯೋ ನಮಃ ದೂ. : ೦೮೧೭೭-೫೭೩೮೨೦

# ಅಧ್ಯಾತ್ಮಪ್ರಕಾಶಕಾರ್ಯಾಲಯ

(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)

ಹೊಳೆನರಸೀಪುರ - ೫೭೩೨೧೧

ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯ ಬಹುದು?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು, ವೇದಾಂತಸಪ್ತಾಹ, ವೇದಾಂತಶಿಬಿರ-ಗಳಲ್ಲಿ ಜಾತಿ, ಮತ, ವರ್ಣ, ಲಿಂಗ-ಬೇಧಗಳಿಲ್ಲದೆ ಭಾಗವಹಿಸ ಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಹೊಳೆನರಸೀಪುರದಿಂದ ಪ್ರಕಟವಾಗುವ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ ಮತ್ತು ಬೆಂಗಳೂರು ಶಾಖಾಕಾರ್ಯಾಲಯದಿಂದ ಪ್ರಕಟವಾಗುವ ಶಂಕರಭಾಸ್ಕರ ತ್ರೈಮಾಸಿಕ ಪತ್ರಿಕೆಗೆ ಚಂದಾದಾರರಾಗಿ ಬಗೆಬಗಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಿಂದ ಪ್ರಕಟವಾಗುವ ಗ್ರಂಥಗಳ ಮುದ್ರಣಕ್ಕೆ ಯಥಾಶಕ್ತಿಯಾಗಿ ದಾನಮಾಡಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳ ಬಹುದು.

೫. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬. ಕಾರ್ಯಾಲಯದ ಕಟ್ಟಡ, ವಿದ್ಯಾರ್ಥಿನಿಲಯ, ಅನುಷ್ಠಾನ, ಪೂಜಾ ಮಂದಿರ, ಪುಸ್ತಕ ಭಂಡಾರ, ವೇದಾಂತಸಪ್ತಾಹ ಮುಂತಾದ ಎಲ್ಲಾ ಕಾರ್ಯಗಳಿಗೂ ಯಥೋಚಿತವಾಗಿ ಸಹಾಯ ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು - ದಾನಿಗಳು ಆದಾಯ ತೆರಿಗೆ ವಿನಾಯಿತಿ (80G tax exemption) ಯನ್ನು ಸಹ ಪಡೆಯಬಹುದು.

**ಹೆಚ್ಚಿನ ವಿವರಗಳಿಗೆ ಕೆಳಕಂಡ ಸ್ಥಳಗಳಲ್ಲಿ ಸಂಪರ್ಕಿಸಿ.**

ಅ.ಪ್ರ.ಕಾ., ೬೮, ೭ನೇ ಮುಖ್ಯರಸ್ತೆ
೨ನೇ ಬ್ಲಾಕ್, ಟಿ.ಆರ್.ನಗರ, ಬೆಂ.-೨೮
ದೂ. : ೦೮೦-೬೭೬೫೫೪೮

ಅ.ಪ್ರ.ಕಾ. ಹೊಳೆನರಸೀಪುರ
ಹಾಸನಜಿಲ್ಲೆ - ೫೭೩ ೨೧೧
ದೂ. : ೦೮೧೭೭-೫೭೩೮೨೦